ಗೌರಿ ಲಂಕೇಶರ

ಲಂಕೇಶ್

ಡಿಸೆಂಬರ್ 6, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ

ಧರ್ಮಯುದ್ಧವೆಂಬ ಕರ್ಮಕಾಂಡ



ಗೂಂಡಾಗಿರಿ



ಅಪ್ಸರ ಮೇಲೆ ಅಂಬಿ ಕಣ್ಣು

KPSC- ಒಕ್ಕಲಿಗರಿಗೇ ಎಲ್ಲಾ ಹುದ್ದೆ!

TV 9 ತರಲೆ ಪುರಾಣ

ಹೆಚ್ಚಿನ ಮುಸ್ಲಿಮರು ಜೈಲಿನಲ್ಲಿ... ಹೆಚ್ಚಿನ ಮೇಲ್ಜಾತಿಗಳು ಸಾಫ್ಟ್‌ವೇರಿನಲ್ಲಿ





ಚಾರ್ವಾಕ - ಶಿವಸುಂದರ್-

ಹೋದವಾರ ಪತ್ರಿಕೆಗಳಲ್ಲಿ ಏಕಕಾಲದಲ್ಲಿ ಎರಡು ವರದಿಗಳು ಪ್ರಕಟವಾಗಿವೆ. ಈ ಎರಡೂ ವರದಿಗಳು ಸಮಾಜದಲ್ಲಿ ಎರಡು ವರ್ಗಗಳ ಬಗ್ಗೆ ಇರುವ ಮಿಥ್ಯೆಗಳನ್ನು ಒಡೆಯುತ್ತದೆ. ಒಂದು ಬೆಂಗಳೂರಿನ ಐ.ಟಿ. ಕ್ಷೇತ್ರದ ಸಾಫ್ಟ್‌ವೇರಿಗರ ಬಗ್ಗೆ ನಿಯಾಸ್ ಎಂಬ ಬೆಂಗಳೂರಿನ ಪ್ರತಿಷ್ಠಿತ ಸಂಸ್ಥೆ ಈ ಬಗ್ಗೆ ನಡೆಸಿದ ಅಧ್ಯಯನದ ಪ್ರಕಾರ ಈ ಸಾಫ್ಟ್‌ವೇರಿಗರು ತುಂಬಾ ಆಧುನಿಕ ಮನೋಭಾವದವರೇನೂ ಆಗಿರುವುದಿಲ್ಲ. ಜಾತಿ, ಮತಗಳನ್ನೇನೂ ತೊರೆದಿರುವುದಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಈ ಕ್ಷೇತ್ರದಲ್ಲಿ ಎಲ್ಲಾ ಜಾತಿ-ಮತಗಳಿಗೇನೂ ಸಮಾನ ಸ್ಥಾನಮಾನ ದೊರೆಯುತ್ತಿಲ್ಲ. ಈ ಕ್ಷೇತ್ರದಲ್ಲಿ ಪ್ರಧಾನವಾಗಿರುವವರು ಭಾರತೀಯ ಸಮಾಜದಲ್ಲಿ ಪಾರಂಪರ್ಯವಾಗಿ ಪ್ರತಿಷ್ಠಿತ ಸ್ಥಾನಮಾನಗಳನ್ನು ಅನುಭವಿಸುತ್ತಲೇ ಬರುತ್ತಿರುವ ಮೇಲ್ಜಾತಿ ಮತ್ತು ಮೇಲ್ವರ್ಗದವರೇ..

ಅದೇ ರೀತಿ ಹೋದವಾರ ಭಾರತದ ಮುಸಲ್ಮಾನರ ಸಾಮಾಜಿಕ, ಆರ್ಥಿಕ ಪರಿಸ್ಥಿತಿ ಬಗ್ಗೆ ನ್ಯಾಯಮೂರ್ತಿ ಸಚ್ಚಾರ್ ಸಮಿತಿ ಸಹ ವರದಿ ನೀಡಿದೆ. ಇದೂ ಸಹಾ ಮುಸ್ಲಿಮರ ಬಗ್ಗೆ ಚೆಡ್ಡಿಗಳು ಹುಟ್ಟಿಸಿರುವ ಹಲವಾರು ಮಿಥ್ಯೆಗಳನ್ನು ಸಂಪೂರ್ಣವಾಗಿ ಒಡೆದುಹಾಕುತ್ತದೆ. ಸಚ್ಚಾರ್ ವರದಿಯು ಭಾರತ ಮುಸ್ಲಿಮರನ್ನು ಭಾರತ ಪ್ರಭುತ್ವ ತುಷ್ಟೀಕರಿಸುತ್ತಾ ಬಂದಿದೆ ಎಂಬ ಎಲ್ಲಾ ಮಿಥ್ಯೆಗಳನ್ನು ಹೊಡೆದು ಹಾಕುತ್ತದೆ. ಈ ವರದಿಯ ಪ್ರಕಾರ ಮುಸ್ಲಿಮರು ನ್ಯಾಯಾಂಗದಲ್ಲಾಗಲಿ ಕಾರ್ಯಾಂಗದಲ್ಲಾಗಲಿ ತಮ್ಮ ಜನಸಂಖ್ಯೆಯ ಶೇಕಡಾವಾರು ಪ್ರಮಾಣದ ಅರ್ಧಕ್ಕಿಂತ ಕಡಿಮೆ ಇದ್ದಾರೆ. ಅಂದರೆ ಶೇ. 7.5 ಮಾತ್ರ ಇದ್ದಾರೆ. ಈ ವರದಿ ಬೆಳಕಿಗೆ ತರುವ ಮತ್ತೊಂದು ಅಂಶವೆಂದರೆ ಮುಸ್ಲಿಮರು ತಮ್ಮ ಜನಸಂಖ್ಯೆ ಪ್ರಮಾಣಕ್ಕಿಂತ ಹೆಚ್ಚಿಗೆ ಇರುವುದು ಭಾರತದ ಜೈಲುಗಳಲ್ಲಿ ಮಾತ್ರ. ಅದರಲ್ಲೂ ಗುಜರಾತ್ ಹಾಗೂ ಮಹಾರಾಷ್ಟ್ರದಂತಹ ರಾಜ್ಯಗಳಲ್ಲಿ.... ಅದೂ ಶೇ. 40ರಷ್ಟಿದೆ. ಹಾಗಾದರೆ ಇದಕ್ಕೆ ಕಾರಣವೇನು? ಮುಸ್ಲಿಮರೆಲ್ಲಾ ಕ್ರಿಮಿನಲ್‌ಗಳೇ?

ಹತ್ತು ವರ್ಷಗಳ ಕೆಳಗೆ ಭಯೋತ್ಪಾದನೆಯನ್ನು ಹತ್ತಿಕ್ಕುವ ಹೆಸರಿನಲ್ಲಿ ಜಾರಿಗೆ ತರಲಾಗಿದ್ದ ಕರಾಳ ಕಾಯ್ದೆಯಾದ ಟಾಡಾವನ್ನು ರದ್ದು ಮಾಡಬೇಕೆಂದು ಒತ್ತಾಯಿಸುತ್ತಾ ಸಾಕ್ಷಾತ್ ಮಾನವಹಕ್ಕುಗಳ ಆಯೋಗವೇ ಗಾಬರಿಗೊಳಿಸುವಂತಹ ಅಂಕಿ-ಅಂಶವೊಂದನ್ನು ಹೊರತಂದಿತು. ಅದರ ಪ್ರಕಾರ ಗುಜರಾತ್‌ನಂಥ ಭಯೋತ್ಪಾದನೆಗೆ ತುತ್ತಾಗದ ರಾಜ್ಯವೊಂದರಲ್ಲಿ ಟಾಡಾದ ಕೆಳಗೆ 90,000 ಮುಸ್ಲಿಮರು ವಿಚಾರಣೆ ಇಲ್ಲದೆ ಕೊಳೆಯುತ್ತಿದ್ದರು. ನಂತರ ನ್ಯಾಯಾಲಯಗಳು ಸ್ಪಷ್ಟಪಡಿಸಿದಂತೆ ಈ ಖೈದಿಗಳಲ್ಲಿ ಶೇ. 99 ರಷ್ಟು ಭಾಗ ನಿರಪರಾಧಿಗಳಾಗಿದ್ದರು. ಇಂದಿಗೂ ಭಾರತದ ಜೈಲುಗಳಲ್ಲಿ ಶೇ. 90 ರಷ್ಟು ಖೈದಿಗಳು ವಿಚಾರಣೆ ಇಲ್ಲದೆ ಕೊಳೆಯುತ್ತಿದ್ದಾರೆ. ಅದರಲ್ಲಿ ಶೇ. 40% ಭಾಗ ಮುಸ್ಲಿಮರೇ ಆಗಿದ್ದಾರೆ. ಅಂದರೆ ನಿರಪರಾಧಿ ಮುಸ್ಲಿಮರನ್ನು ವ್ಯವಸ್ಥಿತವಾಗಿ ಜೈಲುಪಾಲು ಮಾಡಲಾಗುತ್ತಿದೆ ಎಂದರ್ಥ. ಇವೆಲ್ಲಕ್ಕೂ ಕಾರಣ ಮುಸ್ಲಿಮರ ಬಗ್ಗೆ ಪ್ರಭುತ್ವಕ್ಕೆ ಹಾಗೂ ಸಮಾಜಕ್ಕೆ ಇರುವ ಪೂರ್ವಗ್ರಹವೇ ಹೊರತು ಮುಸ್ಲಿಮರು ಕ್ರಿಮಿನಲ್‌ಗಳೆಂದಲ್ಲ ಅಲ್ಲವೇ?

ಒಟ್ಟಿನಲ್ಲಿ ಈ ಎರಡು ವರದಿಗಳು ಒಂದು ಅಂಶವನ್ನಂತೂ ಸ್ಪಷ್ಟಪಡಿಸುತ್ತವೆ. ಈ ದೇಶಕ್ಕೆ ಸ್ವಾತಂತ್ರ್ಯ ಬಂದು 59 ವರ್ಷಗಳು ಆದ ನಂತರವೂ ಸಂಪನ್ನ ವರ್ಗಗಳು ಸಂಪನ್ನರಾಗುತ್ತಲೇ ಇದ್ದಾರೆ. ದಮನಿತ ವರ್ಗಗಳು ಇನ್ನೂ ಹೆಚ್ಚಿನ ದಮನಕ್ಕೆ ಒಳಗಾಗುತ್ತಲೇ ಇದ್ದಾರೆ. ಮೇರಾ ಭಾರತ್ ಮಹಾನ್!

ಸಾಮ್ರಾಜ್ಯಶಾಹಿಗಳಿಗೆ ಪರಿಸರದ ಬಗ್ಗೆ ಕಾಳಜಿ ಯಾಕೆ?



ಪರಿಸರ ಪ್ರೇಮವಲ್ಲ- ಬಡದೇಶಗಳ ಹಸಿರಿನಲ್ಲಿ ತಾನು ಉಸಿರಾಡುವ ಹುನ್ನಾರ..

ಗುಟ್ಟು ● ರಟ್ಟು

ಪ್ರಪಂಚದಲ್ಲಿ ಪರಿಸರ ಮಾಲಿನ್ಯಕ್ಕೆ ಮತ್ತು ಅದು ಹೆಚ್ಚಾಗುತ್ತಿರುವುದಕ್ಕೆ ಕಾರಣವೇನು? ವಿಶ್ವಾದ್ಯಂತ ಅರಣ್ಯ ನಾಶವಾಗುತ್ತಿರುವುದು ಮತ್ತು ಅದರಿಂದ ವಿಶ್ವದಲ್ಲಿ ಪರಿಸರ ಸಮತೋಲನವೇ ಏರುಪೇರಾಗುತ್ತಿರುವುದನ್ನು ಪ್ರತಿಯೊಬ್ಬರೂ ಒಪ್ಪುತ್ತಾರೆ. ಆದರೆ ಈ ಕಾಡು ನಾಶಕ್ಕೆ ಕಾರಣವೇನು? ಒಂದು ಅಧ್ಯಯನದ ಪ್ರಕಾರ ಮಾನವಕುಲ ಈ ಪ್ರಪಂಚದಲ್ಲಿ ಅವತರಿಸಿದ ನಂತರ ಇಪ್ಪತ್ತನೇ ಶತಮಾನದ ಪ್ರಾರಂಭದವರೆಗೆ ಎಷ್ಟು ಕಾಡನ್ನು ನಾಶ ಮಾಡಲಾಗಿತ್ತೋ ಅದರ ಎರಡು ಪಟ್ಟು ಕಾಡು ಕಳೆದ ಕೇವಲ 70 ವರ್ಷಗಳಲ್ಲಿ ನಾಶವಾಗಿದೆ. ಕಾರಣವೇನು?

ಕಾರಣವೇನೆಂದರೆ ಎರಡು ಮಹಾಯುದ್ಧಗಳಲ್ಲಿ ಶಸ್ತ್ರಾಸ್ತ್ರಗಳಿಗಾಗಿ ಆದ ಕಬ್ಬಿಣದ ಬಳಕೆ ಮತ್ತು ಅದಕ್ಕಾಗಿ ಕಾಡು ನಾಶ. ಆಮೇಲೆ ಪ್ರಪಂಚಾದ್ಯಂತ ವ್ಯಾಪಿಸಿದ ಬಂಡವಾಳಶಾಹಿ ವ್ಯವಸ್ಥೆಯ ಉದ್ಯಮಗಳಿಗೆ ಕಚ್ಚಾವಸ್ತು ಪೂರೈಕೆಗಾಗಿ ಅಂದರೆ ಕಬ್ಬಿಣ, ತಾಮ್ರ, ಬಾಕ್ಸೈಟ್ ಇನ್ನಿತರ ಗಣಿಗಾರಿಕೆಗಳಿಗಾಗಿ ಕಾಡು ನಾಶವಾಗಿದೆ. ಪ್ರಪಂಚದಲ್ಲಿ ಇಪ್ಪತ್ತನೇ ಶತಮಾನದ ಪ್ರಾರಂಭದಲ್ಲಿ ಇದ್ದ ಕಾಡಿನಾಸರೆಯಲ್ಲಿ ಶೇ.60ಕ್ಕಿಂತ ಹೆಚ್ಚು ಭಾಗ ಕಣ್ಮರೆಯಾಗಿರುವುದಕ್ಕೆ ಇದೇ ಕಾರಣ. ಪೆಟ್ರೋಲ್, ಬಾಕ್ಸೈಟ್, ಕಬ್ಬಿಣ, ವಜ್ರ, ಚಿನ್ನ ಇನ್ನಿತ್ಯಾದಿ ಲೋಹಗಳಿಗಾಗಿ ವಿಶ್ವದ ಬಹುರಾಷ್ಟ್ರೀಯ ಕಂಪನಿಗಳು ಬಡರಾಷ್ಟ್ರಗಳ ಬಸಿರು ಬಗೆದು ಕಾಡು ನಾಶ ಮಾಡಿ ಪರಿಸರ ಮಾಲಿನ್ಯ ಉಂಟು ಮಾಡುತ್ತಲೇ ಇದ್ದಾವೆ. ಇದು ಇತಿಹಾಸ.

ಆದರೆ ಇದ್ದಕ್ಕಿದ್ದ ಹಾಗೆ ಇದೇ ಸಾಮ್ರಾಜ್ಯಶಾಹಿ ಶಕ್ತಿಗಳೆ ಬಡದೇಶಗಳಲ್ಲಿ ಪರಿಸರ ಮಾಲಿನ್ಯ ವಿರೋಧಿ ಕ್ರಮಗಳನ್ನು ಅನುಸರಿಸಿ ಕಾರ್ಖಾನೆ ಸ್ಥಾಪಿಸಿದರೆ ಅವರಿಗೆ ಬಹುಮಾನ ನೀಡುವಂಥ ಯೋಜನೆಗಳನ್ನು ತಂದಿವೆ. ಅಷ್ಟು ಮಾತ್ರವಲ್ಲ, ತಾನು ಆ ಬಗೆಯಲ್ಲಿ ಪರಿಸರಸ್ನೇಹಿ ತಂತ್ರಜ್ಞಾನ ಬಳಸಿ ಉದ್ಯಮ ಸ್ಥಾಪಿಸಿದ್ದೇನೆಂದು ರುಜುವಾತು ಮಾಡಿದರೆ ಅದಕ್ಕಾಗಿ ಪ್ರೋತ್ಸಾಹಧನ ನೀಡುವ ನಿಧಿಯೊಂದನ್ನು ಸ್ಥಾಪಿಸಲಾಗಿದೆ.

ಏನಿದು ಅಂಹೋಮಯ? ಬಡದೇಶಗಳ ಪರಿಸರ ಮಾಲಿನ್ಯಕ್ಕೆ ನೇರ ಕಾರಣವಾಗಿರುವ ಸಾಮ್ರಾಜ್ಯಶಾಹಿಗಳೇ ಪರಿಸರ ಸ್ನೇಹಿ ತಂತ್ರಜ್ಞಾನಕ್ಕೆ ಬಹುಮಾನ ಕೊಡುವ ಯೋಜನೆ ತಂದಿದ್ದಾರೆ? ತೋಳಕ್ಕೆ ಕುರಿಯ ಮೇಲೆ ಕರುಣೆ ಬಂದಿರುವ ಗುಟ್ಟೇನು?

ವಾಸ್ತವವೇನೆಂದರೆ ಇದರಲ್ಲಿ ಪರಿಸರ ಪ್ರೇಮ ಇತ್ಯಾದಿಗಳೇನೂ ಇಲ್ಲ. ಈ ಯೋಜನೆಯಲ್ಲಿ ಅಡಗಿರುವುದೂ ಬಡದೇಶಗಳನ್ನು ಸುಲಿದು ತಿನ್ನುವ ವ್ಯೂಹ ತಂತ್ರವೇ.. ಶ್ರೀಮಂತ ದೇಶಗಳ ಶ್ರೀಮಂತ ಜನರ ಬದುಕುವ ಶೈಲಿ ಮತ್ತು ಉತ್ಪಾದನಾ ಕ್ರಮಗಳಿಂದಾಗಿ ಅಪಾರ ಪರಿಸರ ಮಾಲಿನ್ಯ ಉಂಟಾಗುತ್ತಿದೆ. ಅದರಲ್ಲಿ ಪ್ರಮುಖ ಮಾಲಿನ್ಯವೆಂದರೆ ಕಾರ್ಬನ್ ಡಯಾಕ್ಸೈಡ್ ಮಾಲಿನ್ಯ. ಇದು ಪೆಟ್ರೋಲಿಯಂ ವಸ್ತುಗಳ ಅಂದರೆ ಪೆಟ್ರೋಲ್, ಡೀಸೆಲ್ ಇನ್ನಿತ್ಯಾದಿಗಳ ಬಳಕೆಯಿಂದ ಹೆಚ್ಚುತ್ತದೆ. ಈ ಕಾರ್ಬನ್ ಡಯಾಕ್ಸೈಡ್ ಗಾಳಿಯಲ್ಲಿ ಸೇರಿಕೊಂಡಾಗ ನಮ್ಮ ಭೂಮಿಯನ್ನು ಸೂರ್ಯನ ಅಪಾಯಕಾರಿ ಅಲ್ಟ್ರಾವಯಲೆಟ್ ಕಿರಣಗಳಿಂದ ಮತ್ತು ಉಷ್ಣತೆಯಿಂದ ರಕ್ಷಿಸುತ್ತಿದ್ದ ಓಜೋನ್ ಪದರ ತೂತಾಗುತ್ತದೆ.

ಇದರಿಂದ ಭೂಮಿಯ ತಾಪಮಾನ ಹೆಚ್ಚಿ ಭೂಮಿಯ ಜೈವಿಕ ಸಮತೋಲನವೇ ತಪ್ಪುತ್ತದೆ. ಶಾಖ ಹೆಚ್ಚಾಗಿ ಧ್ರುವ ಪ್ರದೇಶಗಳಲ್ಲಿನ ಹಿಮಬಂಡೆಗಳು ಕರಗಿ ಸಮುದ್ರದ ನೀರಿನ ಮಟ್ಟ ಹೆಚ್ಚುತ್ತದೆ. ಇದರಿಂದ ಸಮುದ್ರ ಮಟ್ಟಕ್ಕಿಂತ ಕೆಳಗಿರುವ ನಾರ್ವೆ, ನೆದರ್‌ಲ್ಯಾಂಡ್‌ನಂಥ ದೇಶಗಳೇ ಸಮುದ್ರದ ಪಾಲಾಗುತ್ತವೆ. ಸಮುದ್ರದ ಶಾಖ ಹೆಚ್ಚಿ ಕೋಟ್ಯಂತರ ಜಲಚರಗಳು ಅದರಲ್ಲೂ ಸೂಕ್ಷ್ಮಜೀವಿಯಾದ ಮೀನುಗಳು ಸಾಯುತ್ತವೆ. ಇದರಿಂದ ಅದನ್ನೇ ಆಧರಿಸಿ ಬದುಕುತ್ತಿದ್ದ ಮೀನುಗಾರರ ಬದುಕು ಸಮುದ್ರದ ಪಾಲೇ ಆಗುತ್ತದೆ. ಇಷ್ಟು ಮಾತ್ರವಲ್ಲ, ತಾಪಮಾನ ಏರಿಕೆಯಿಂದ ಆಫ್ರಿಕಾದ ಸುಮಾರು ದೇಶಗಳ ಆರ್ಥಿಕತೆಯೇ ಕುಸಿಯುತ್ತದೆ.

ಇವೆಲ್ಲ ಒಂದು ಕಡೆಯಾದರೆ ಮತ್ತೊಂದು ಕಡೆ ಇದರಿಂದ ಈಗಾಗಲೇ ಹೇಳಿದಂತೆ ಐರೋಪ್ಯ ದೇಶಗಳನ್ನೂ ಒಳಗೊಂಡಂತೆ ಎಲ್ಲಾ ಸಾಮ್ರಾಜ್ಯಶಾಹಿ ದೇಶಗಳ ಪರಿಸ್ಥಿತಿಯೂ ಕಂಗೆಡುತ್ತದೆ. ಆದ್ದರಿಂದಲೇ 1997ರಲ್ಲಿ ಜಪಾನಿನ ಕ್ಯೋಟೊ ಎಂಬಲ್ಲಿ ಎಲ್ಲಾ ಶ್ರೀಮಂತ ದೇಶಗಳು ಸಭೆ ಸೇರಿ ಪ್ರಪಂಚದ ಕಾರ್ಬನ್ ಮಾಲಿನ್ಯ ಉತ್ಪಾದನೆಯನ್ನು 2012ರ ವೇಳೆಗೆ ಶೇ.5ರಷ್ಟಾದರೂ ಕಡಿತಗೊಳಿಸಬೇಕೆಂದು ತೀರ್ಮಾನಿಸಿದವು. ಆದರೆ ಅದು ಆಗಬೇಕೆಂದರೆ ಶ್ರೀಮಂತ ದೇಶಗಳಲ್ಲಿನ ಶ್ರೀಮಂತ ಜನತೆ ತಮ್ಮ ಬದುಕಿನ ಶೈಲಿಯನ್ನೂ ಮತ್ತು ಸಾಮ್ರಾಜ್ಯಶಾಹಿಗಳು ಲಾಭಕ್ಕೆಂದೇ ತಾವು ನಡೆಸುವ ಉತ್ಪಾದನೆಯನ್ನೂ ಕಡಿತಗೊಳಿಸಬೇಕೆಂದಾಗುತ್ತದೆ.

ಆದರೆ ಅದು ಆಗದ ಕೆಲಸವೆಂದು ತೀರ್ಮಾನಿಸಿದ ಇದೇ ದೇಶಗಳು ಇದರಿಂದ ಪಾರಾಗಲು ಹೊಸದಾಗಿ ಕಾರ್ಬನ್ ಮಾಲಿನ್ಯ ಉಂಟಾಗದಂತೆ ತಡೆದರೂ ತಾವೇ ಮಾಲಿನ್ಯ ಕಡಿತಗೊಳಿಸಿದ್ದಕ್ಕೆ ಸಮ ಎಂಬ ತರ್ಕ ಮುಂದಿಟ್ಟರು. ಅಂದರೆ ಭಾರತದಂತ ದೇಶಗಳಲ್ಲಿ ಹೆಚ್ಚು ಕಾರ್ಬನ್ ಮಾಲಿನ್ಯ ಉಂಟುಮಾಡುವ ಒಂದು ಕಾರ್ಖಾನೆ ಬರುತ್ತಿದೆ ಎಂದಾದಲ್ಲಿ ಅಂಥ ಕಾರ್ಖಾನೆ ಹೆಚ್ಚು ಕಾರ್ಬನ್ ಮಾಲಿನ್ಯ ಉಂಟು ಮಾಡದ ತಂತ್ರಜ್ಞಾನ ಬಳಸುವಂತೆ ಮಾಡಿದರೂ ಅದು ತಮ್ಮ ದೇಶದಲ್ಲಿ ತಾವೇ ಅಷ್ಟು ಕಾರ್ಬನ್ ಮಾಲಿನ್ಯ ಕಡಿತ ಮಾಡಿದ್ದಕ್ಕೆ ಸಮ ಮಾಡಿಕೊಳ್ಳಬೇಕು ಎಂದರ್ಥ. ಅಂದರೆ ಶ್ರೀಮಂತ ದೇಶಗಳು ತಮ್ಮ ಜೀವನ ಶೈಲಿಯಲ್ಲಿ ಯಾವುದೇ ಬದಲಾವಣೆ ಮಾಡಿಕೊಳ್ಳದೆ ಬಡದೇಶಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ಅವರಿಂದ ಕಾರ್ಬನ್ ಕಡ ತೆಗೆದುಕೊಳ್ಳುತ್ತದೆಂದರ್ಥ.

ಈಗ ಪ್ರಪಂಚದಲ್ಲಿ ಈ ಕಾರ್ಬನ್ ಕಡದ ವ್ಯಾಪಾರ ತುಂಬಾ ಜೋರಿನಿಂದ ನಡೆದಿದೆ. ಅಂದರೆ ಶ್ರೀಮಂತ ದೇಶಗಳು ತಾವು ಮಾಡಿದ ಪಾಪಕ್ಕೆ ಒಂದಷ್ಟು ಶುಲ್ಕ ತೆತ್ತುತ್ತವೆ. ಆದರೆ ಶೋಷಣೆಯನ್ನು ಮಾತ್ರ ಮುಂದುವರೆಸುತ್ತವೆ ಎಂದರ್ಥ. ಆದ್ದರಿಂದಲೇ ಈ ಲಾಭಕೋರ ವ್ಯವಸ್ಥೆ ನಾಶವಾಗದೆ ಕಾರ್ಮಿಕನಿಗೂ ಬಡದೇಶಗಳಿಗೂ ಮುಕ್ತಿಯಿಲ್ಲ.. ಪ್ರಕೃತಿಗೂ ಮುಕ್ತಿಯಿಲ್ಲ...!

No Comments

"ದೇವೇಗೌಡರು ತೆರೆಮರೆ ರಾಜಕಾರಣ ಮಾಡುವುದರ ಬದಲು ತಾವೇ ನೇರವಾಗಿ ಮುಖ್ಯಮಂತ್ರಿಗಳಾಗಿ ಬಿಡುವುದು ಉತ್ತಮ"



-ನಂಜೇಗೌಡ

"SEZಗಳು ಈ ದೇಶದ ಆರ್ಥಿಕತೆಯನ್ನು ಉದ್ಧಾರ ಮಾಡುತ್ತವೆ. ಈಗ ನಾವೆಲ್ಲರೂ ಒಂದು ಟೀಮ್ ಆಗಿ ಚೀನಾ, ಮಲೇಷಿಯಾ, ಸಿಂಗಪುರ ಮತ್ತು ದುಬೈಗಳನ್ನು ಎದುರಿಸಬೇಕು"



-ಮುಖೇಶ್ ಅಂಬ

"ತಮ್ಮ ಗಣಿಯ ಮೇಲೆ ನಡೆದ ದಾಳಿಯ ಬಗ್ಗೆ ಡಿಕೆ ಶಿವಕುಮಾರರವರು ಬೇಜಾರು ಮಾಡಿಕೊಳ್ಳಬಾರದು"



-ಚನ್ನಿಗಪ್ಪ

"ಕರಾವಳಿಯನ್ನು ಕೋಮುಗಲಭೆ ಪೀಡಿತ ಪ್ರದೇಶವ ಘೋಷಿಸಬೇಕು"

-ಮಸೂದ್, ರಾಜ್ಯ ಅಲ್ಪಸಂಖ್ಯಾತ ಆಯೋ ಅ

ನಂಬಿದ್ರೆ ನಂಬಿ ಬಿಟ್ರೆ ಬಿಡಿ:

"ಯಾರೂ ಕಾನೂನಿಗೆ ಮೀರಿದವರಲ್ಲ, ಅಧಿಕಾರಿ ತಮ್ಮ ಕರ್ತವ್ಯಗಳನ್ನಷ್ಟೆ ನಿರ್ವಹಿಸುತ್ತಿದ್ದಾರೆ"


-ಎಚ್.ಡಿ.ಕುಮಾರಸ

"ಗ್ರೇಟರ್ ಬೆಂಗಳೂರು ನಗರದ ಬಹುಪಾಲು ಸಮಸ್ಯೆಯನ್ನು ನಿವಾರಿಸುತ್ತದೆ"



-ಎಚ್.ಡಿ.ಕುಮಾರಸ್ವಾಮಿ

"ಕಾವೇರಿ ಸಮಸ್ಯೆ ಮುಗಿದ ದಿನ ನಾನು ರಾಜಕೀಯ ನಿವೃತ್ತಿ ತೆಗೆದುಕೊಳ್ಳುವೆ"




-ಅಂಬರೀಶ್

"ನಾನು ಒಂದು ಪೈಸೆಯಷ್ಟು ಆದಾಯ ತೆರಿಗೆಯನ್ನೂ ವಂಚಿಸಿಲ್ಲ"

-ಡಿ.ಕೆ. ಶಿವಕುಮ

"ಮೂರು ದಶಕಗಳ ಕೆಳಗೆ ನಾವು ವಿಯೆಟ್ನಾಂ ಮೇಲೆ ನಡೆಸಿದ ಯುದ್ಧದಿಂದ ಪಾಠ ಕಲಿತಿದ್ದೇವೆ"




-ಬುಷ್

"ನೀರಾವರಿ, ವಿದ್ಯುತ್ ಮತ್ತು ಕೃಷಿಯ ಬಗ್ಗೆ ಮುಖ್ಯಮಂತ್ರಿಗಳಿಗೆ ಅಧಿಕಾರಿಗಳಿಗಿಂತ ಜಾಸ್ತಿ ಗ

-ಆಂಧ್ರ ಮುಖ್ಯಮಂತ್ರಿಗಳ ರಾಜಕ ಸಲಹೆ

ವಾರದ ಘೋಷಣೆ:

"ನಾವು ಶಾಂತಿ ವಿರೋಧಿಗಳೇನೂ ಅಲ್ಲ. ಆದರೆ ಹಳೆ ಸೈನ್ಯ ಮತ್ತು ಹಳೆ ಪ್ರಭುತ್ವ ನಮ್ಮ ಜನತೆಯ ಮೇಲೆ ಹಿಂಸಾಚಾರ ನಡೆಸಿದರೆ ಜನತೆಗೆ ಪ್ರತಿರೋಧಿಸುವ ಹಕ್ಕು ಇದ್ದೇ ಇರುತ್ತದೆ"



-ಪ್ರಚಂಡ, ನೇಪ ಮಾವೋವಾದಿ ಪಕ್ಷದ ಅ

"ಮನುಷ್ಯರು ಮೂಲತಃ ಸ್ವಾ ಗಳು...." ಮಗಳಿಗೆ ಬರೆದ ಪತ್ರವೊ ರಲ್ಲಿ ಪಿ. ಲಂಕೇಶ್‌ರು ಮೇಲಿನ ಬರೆದಿದ್ದರು.


ರಾಜಕಾರಣ, ಕ್ರೀಡೆ, ಸಿನಿಮಾ, ಶಿ ಎಲ್ಲ ಕಡೆ ಸ್ವಾರ್ಥಿಗಳ ಕಾರಣದಿ ಸಾಮಾನ್ಯ ಜನರಿಗೆ ತೊಂದರೆ ಆಗುತ್ತ ಇದೆ. ಹಾಗೆಯೇ ಸ್ವಾರ್ಥ ಎನ್ನುವ ಮನುಷ್ಯನನ್ನು ಆತನಿಗೆ/ಆ ಗೊತ್ತಿಲ್ಲದಂತೆ ಕೊಲ್ಲುತ್ತಾ ಹೋಗುತ್ತ

ಈ ಸಲದ ಸೂಕ್ತಿಗಳು 'ಸ್ವಾ ಕುರಿತದ್ದು... ನಿಸ್ವಾರ್ಥಿ ಓದುಗರು ಇ ಮೆಚ್ಚುತ್ತಾರೆಂದು ಆಶಿಸುತ್ತಾ....

-ಜ

ಮನುಷ್ಯ ತನ್ನ ಬಗ್ಗೆ ಆರೋಪಿಸಿಕೊಳ್ಳುವುದನ್ನು ನಂಬಬಹುದು; ತನ್ನನ್ನೇ ಹೊಗಳಿಕೊಳ್ಳುವುದನ್ನು ನಂ

ಕೋಮುವಾದಿ ಸರಕಾರಕ್ಕೆ ಒಂದು ಎಚ್ಚರಿಕೆ



ಅಪ್ಪ ಒಮ್ಮೆ ಅಂದಿದ್ದರು: "ನಿನ್ನ ಸುತ್ತಲಿನ ಅನ್ಯಾಯವನ್ನು ಕಂಡು ನೀನು ಆಕ್ರೋಶಗೊಳ್ಳದಿದ್ದರೆ, ಪ್ರತಿಭಟನೆಗಳಲ್ಲಿ ಭಾಗವಹಿಸಿ ಧಿಕ್ಕಾರವನ್ನು ಕೂಗದಿದ್ದರೆ, ನಿನ್ನೆಲ್ಲ ಕೋಪಕ್ಕೆ ಅರ್ಥವೂ ಇಲ್ಲ, ದಿಕ್ಕೂ ಇಲ್ಲ." ಅಪ್ಪನ ಈ ಮಾತು ಇವತ್ತು ನೆನಪಾಗುತ್ತಿರುವುದಕ್ಕೆ ಕಾರಣ...

ಈ ಸಂಚಿಕೆ ಶನಿವಾರವೇ ತಯಾರಾಗಿ, ಇವತ್ತು (ಭಾನುವಾರ, ನವೆಂಬರ್ 26) ಬೆಂಗಳೂರಿನ ಮಲ್ಲೇಶ್ವರಂ ಮೈದಾನದಲ್ಲಿ ರಾಜ್ಯದ ವಿವಿಧೆಡೆಯಿಂದ ಬಂದಿರುವ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಸಾವಿರಾರು ಮಿತ್ರರೊಂದಿಗೆ ನಾನು ಇರಬೇಕಿತ್ತು. ಆದರೆ ಪತ್ರಿಕೆಯೊಂದಕ್ಕೆ ತನ್ನದೇ ಆದ ಲಯ ಇರುವುದರಿಂದ ಅದೆಷ್ಟೇ ಕಷ್ಟಪಟ್ಟರೂ ಭಾನುವಾರ ಮಧ್ಯಾಹ್ನ ಮುದ್ರಣಕ್ಕೆ ಹೋಗುತ್ತಿದೆ. ಆದರೆ ಇದರ ಕೆಲಸದಲ್ಲಿರುವ ನಾನು ದೈಹಿಕವಾಗಿ ನಮ್ಮ ಆಫೀಸಿನಲ್ಲಿದ್ದರೂ ನನ್ನ ಮನಸ್ಸೆಲ್ಲಾ ಮಲ್ಲೇಶ್ವರಂ ಮೈದಾನದಲ್ಲಿದೆ. ಅವರೆಲ್ಲರೊಂದಿಗೆ ಸೇರುವ ತಹತಹ ನನ್ನನ್ನು ಕಾಡುತ್ತಿದೆ.....

ಇವತ್ತು ನಮ್ಮ ರಾಜ್ಯದಲ್ಲಿ ಕೋಮುವಾದ ಹೇಗೆ ಬೆಳೆಯುತ್ತಿದೆ ಎಂಬುದನ್ನು ಇಲ್ಲಿ ಮತ್ತೆ ನಮ್ಮ ಜಾಣ-ಜಾಣೆಯರಿಗೆ ವಿವರಿಸುವ ಅಗತ್ಯವಿಲ್ಲ. ಸೂಕ್ಷ್ಮಜ್ಞರಾದ ಅವರಿಗೆ ಈಗಾಗಲೇ ಮನದಟ್ಟಾಗಿದೆ. ಆದರೆ ನಮ್ಮ ಪ್ರಯತ್ನ ಯಾವುದೆಂದರೆ ಬಾಬಾಬುಡನ್ ಗಿರಿ ಕುರಿತಂತೆ ಬಜೆಪಿ ಪಕ್ಷದ ಸಿ.ಟಿ. ರವಿ ಸೇರಿದಂತೆ ಸಂಘಪರಿವಾರವು 'ಸತ್ಯ ಸಂದೇಶ ಯಾತ್ರೆ'ಯಲ್ಲಿ ಬರೀ ಸುಳ್ಳುಗಳನ್ನೇ ಬೊಗಳಿಕೊಂಡು ಹೋಗುತ್ತಿರುವುದನ್ನು ನಂಬಿ ಚಡ್ಡಿಗಳ ಕೋಮುದ್ವೇಷಿ ಸಿದ್ಧಾಂತಕ್ಕೆ ಬಲಿಯಾಗುತ್ತಿರುವವರನ್ನು ಎಚ್ಚರಿಸಲು, ಅವರ ಮನಸ್ಸುಗಳಲ್ಲಿ ಜಾಗೃತಿಯನ್ನು ಮೂಡಿಸಲು.

ಈ ನಮ್ಮ ಕಾರ್ಯದಲ್ಲಿ ದನಿಗೂಡಿಸಿರುವವರು ಬೇರಾರೂ ಅಲ್ಲ; ಕರ್ನಾಟಕ ಸುವರ್ಣ ವರ್ಷವನ್ನು ಆಚರಿಸುತ್ತಿರುವಾಗ ರಾಷ್ಟ್ರಕವಿ ಎಂದು ಘೋಷಿಸಲ್ಪಟ್ಟಿರುವ ಹಿರಿಯ ಚೇತನ ಜಿ.ಎಸ್. ಶಿವರುದ್ರಪ್ಪನವರು. ಕೋಮುವಾದಿ ಶಕ್ತಿಗಳನ್ನು ತಡೆಯಬೇಕೆಂದು ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡುವ ಈ ಸಮಾವೇಶದ ದಿನವೇ ಅವರು ಇನ್ನೊಂದು ಕಾರ್ಯಕ್ರಮದಲ್ಲಿ ಭಾಗವಹಿಸಬೇಕಿದ್ದರಿಂದ ಅವರು ಇದರಲ್ಲಿ ಭಾಗವಹಿಸಲಾಗುತ್ತಿಲ್ಲ. ಆದರೆ ನಮ್ಮೊಂದಿಗೆ ದನಿಗೂಡಿಸಿರುವ ಜಿಎಸ್‌ಎಸ್‌ರವರು ಸಮಾವೇಶಕ್ಕೆ ಈ ಸಂದೇಶವನ್ನು ನೀಡಿದ್ದಾರೆ. 'ಲಂಕೇಶ್'ನ ಎಲ್ಲ ಮಿತ್ರರು ಈ ಸಮಾವೇಶದಲ್ಲಿ ಭಾಗವಹಿಸುವುದು ಅಸಾಧ್ಯವಾಗಿರುವುದರಿಂದ ಅವರ ಸಂದೇಶವನ್ನು ಇಲ್ಲಿ ನಿಮಗಾಗಿ ನೀಡುತ್ತಿದ್ದೇನೆ.

* * * * *

'ಮನುಷ್ಯ ಜಾತಿ ತಾನೊಂದೆ ವಲಂ' ಎಂದ ಮಹಾಕವಿ ಪಂಪನಿಂದ ಹಿಡಿದು, ಇಂದಿನವರೆಗೂ ಕರ್ನಾಟಕ ಸಂಸ್ಕೃತಿ ಕೋಮು ಸಹಿಷ್ಣುತೆ, ಸೌಹಾರ್ದದ ಹಿರಿಮೆಯನ್ನು ಸಾರುತ್ತಾ ಬಂದಿದೆ. ಬಹುಮುಖೀ ದರ್ಶನಗಳು ಮತ್ತು ಹಲವು ಹತ್ತು ಬಗೆಯ ಧಾರ್ಮಿಕ ಸೆಲೆಗಳನ್ನು ಯಾವತ್ತೂ ಪೋಷಿಸಿಕೊಂಡು ಬಂದಿರುವ ಕರ್ನಾಟಕ ಸಂಸ್ಕೃತಿ ಕೋಮುವಾದಕ್ಕೆ, ಸಂಕುಚಿತ ಮತೀಯತೆಗೆ ಎಂದಿನಿಂದಲೂ ಹೊರತಾದದ್ದು.

ಶತಮಾನಗಳಿಂದಲೂ ಮತೀಯ ಸಹಿಷ್ಣತೆ ಮತ್ತು ಧಾರ್ಮಿಕ ಸೌಹಾರ್ದದ ನೆಲೆಯಾಗಿರುವ ಬಾಬಾಬುಡನ್ ಗಿರಿ ಇಂದು ಅನಗತ್ಯ ವಿವಾದಕ್ಕೆ ಕಾರಣವಾಗಿದ್ದರೆ, ಅದು ಕೋಮುವಾದಿಗಳಿಂದ ಮಾತ್ರ. ಬಾಬಾಬುಡನ್ ಗಿರಿಯಂಥ ಅನೇಕ ಸಮನ್ವಯ ಶ್ರದ್ಧಾಕೇಂದ್ರಗಳು ಈ ನಾಡಿನಲ್ಲಿವೆ. ಇವು ಕೇವಲ ಧಾರ್ಮಿಕ ಕ್ಷೇತ್ರಗಳಾಗಿರದೆ, ಈ ನಾಡಿನ ಅನನ್ಯ ಸಾಂಸ್ಕೃತಿಕ ನೆಲೆಗಳೂ ಆಗಿವೆ. ಇಂಥ ಕ್ಷೇತ್ರಗಳನ್ನು ಜನತೆ ಗೌರವ, ಪ್ರೀತಿಗಳಿಂದ ಕಾಪಾಡಿಕೊಂಡು ಬಂದಿದ್ದಾರೆ. ಈಗ ಬಾಬಾಬುಡನ್ ಗಿರಿಯನ್ನು 'ವಿಮೋಚನೆ'ಗೊಳಿಸಲು ಹೊರಟಿರುವವರು, ಈ ನೆಲದ ಸಾಂಸ್ಕೃತಿಕ ಪಾವಿತ್ರ್ಯವನ್ನು ನಾಶಗೊಳಿಸುವ ಕೆಲಸ ಮಾಡುತ್ತಿದ್ದಾರೆ. ಕರ್ನಾಟಕದ ವಿಶಿಷ್ಟ ಹಿರಿಮೆಯನ್ನು ಎತ್ತಿ ಹಿಡಿಯುವ ಇಂಥ ಕ್ಷೇತ್ರಗಳನ್ನು ಕೋಮುವಾದಿ ರಾಜಕೀಯಕ್ಕೆ ಬಳಸಿಕೊಳ್ಳುವುದು ಅತ್ಯಂತ ಅಮಾನವೀಯವಾದ, ಖಂಡನಾರ್ಹ ಕೆಲಸ. ಆದ್ದರಿಂದ, ಕೋಮುವಾದಿ ಶಕ್ತಿಗಳನ್ನು ಈ ನಾಡಿನ ಪ್ರಜ್ಞಾವಂತ ಜನತೆ ತಿರಸ್ಕರಿಸಬೇಕಾದ ಅಗತ್ಯವಿದೆ.

ಈ ನಿಟ್ಟಿನಲ್ಲಿ, ಬಾಬಾಬುಡನ್ ಗಿರಿಯೂ ಸೇರಿದಂತೆ, ನಾಡಿನ ಹಲವೆಡೆ ಹಬ್ಬುತ್ತಿರುವ ಕೋಮುವಾದವನ್ನು ಪ್ರತಿಭಟಿಸಲು ಹಾಗೂ ಸೌಹಾರ್ದ ಸಂದೇಶವನ್ನು ಸಾರಲು, 'ಕರ್ನಾಟಕ ಕೋಮು ಸೌಹಾರ್ದ ವೇದಿಕೆ' ಇಂದು ಬೆಂಗಳೂರಿನಲ್ಲಿ ಬೃಹತ್ ಸಮ್ಮೇಳನವನ್ನು ನಡೆಸುತ್ತಿದೆ. ಈ ಸಮ್ಮೇಳನ ಯಶಸ್ವಿಯಾಗಲಿ, ಕೋಮು ಸೌಹಾರ್ದದ ಸಂದೇಶ ನಾಡಿನ ಸಮಸ್ತ ಜನತೆಗೂ ಚೈತನ್ಯ ತರಲಿ ಎಂದು ಹಾರೈಸುತ್ತೇನೆ.


-ಡಾ|| ಜಿ.ಎಸ್. ಶಿವರುದ್ರಪ್ಪ

ಕಂಡಹಾಗೆ



* * * * *

ಜಿಎಸ್‌ಎಸ್‌ರವರಷ್ಟೇ ಅಲ್ಲದೆ, ಜ್ಞಾನಪೀಠ ಪ್ರಶಸ್ತಿ ಪಡೆದಿರುವ ಕನ್ನಡದ ಹಿರಿಯ ಸಾಹಿತಿಗಳೂ, ಕೋಮುವಾದದ ವಿರುದ್ಧ ತಮ್ಮ ದನಿಯನ್ನು ಎತ್ತುತ್ತಾ ಬಂದಿರುವ ಯು.ಆರ್. ಅನಂತಮೂರ್ತಿ ಮತ್ತು ಗಿರೀಶ್ ಕಾರ್ನಾಡ್‌ರವರೂ ನಮ್ಮ-ನಿಮ್ಮ ಈ ಹೋರಾಟಕ್ಕೆ ಬೆಂಬಲವನ್ನು ಸೂಚಿಸಿದ್ದಾರಲ್ಲದೆ, ಅವರಿಬ್ಬರೂ ತಮ್ಮ ಸಂದೇಶಗಳನ್ನು ನೀಡಿದ್ದಾರೆ.



ಅನಂತಮೂರ್ತಿಯವರನ್ನು ಈ ಸಭೆಯಲ್ಲಿ ಭಾಗವಹಿಸಬೇಕೆಂದು ನಾನು ಕೇಳಿದಾಗ ಅವರು ಹೇಳಿದ ಮಾತು ನನ್ನ ಮನಮುಟ್ಟಿತು. "ಗೌರಿ, ನೀನೇ ನನ್ನ ಸಂದೇಶ. 'ನೀನು ಅಲ್ಲಿದ್ದರೆ ನಾನೂ ಅಲ್ಲಿದ್ದಂತೆ" ಅಂದರು. ನನಗೆ, ನಮ್ಮೆಲ್ಲರಿಗೆ ಅದಕ್ಕಿಂತ ಬೆಂಬಲ ಇನ್ನೇನು ಬೇಕು?! ಆದರೂ ಅಲ್ಲಿ ಸೇರುವ ಜನರಿಗೆ ನಿಮ್ಮ ಮಾತು ಬೇಕು ಅಂದಿದ್ದಕ್ಕೆ ಅವರು ತಮ್ಮ ಸಂದೇಶವನ್ನು ಕಳುಹಿಸಿದ್ದಾರೆ. ಅದು ಹೀಗಿದೆ:

ಈ ಸಮಾವೇಶ ನಾನು ನಂಬುವ ಮಿತ್ರರಾದ ಜಿ.ರಾಜಶೇಖರ್, ಪಟ್ಟಾಭಿ ಸೋಮಯಾಜಿ, ಹರ್ಷಾದ್ ವರ್ಕಾಡಿಯವರು ಮಂಗಳೂರಿನ ಗಲಭೆಗಳ ಬಗ್ಗೆ ನೀಡಿದ ವರದಿಯನ್ನು ಆಧರಿಸಿದೆ. ಈ ಸಮಾವೇಶ ನಮ್ಮ ಮನಸ್ಸನ್ನು ಜಾಗೃತಗೊಳಿಸಬೇಕಿದೆ. ಕರ್ನಾಟಕ ಗುಜರಾತ್ ಆಗುವ ಸೂಚನೆ ಕಾಣುತ್ತಿದೆ. ಅದು ಎಂದೂ ಆಗಬಾರದು. ಬಜೆಪಿ ಪಕ್ಷವು ಜನರಲ್ಲಿರುವ ಸಹಜ ಧಾರ್ಮಿಕ ಮನೋಭಾವನೆಯನ್ನು ದುರುಪಯೋಗಪಡಿಸಿಕೊಂಡು ಹಿಂದೂಗಳಲ್ಲಿರುವ ಸಹಜ ಔದಾರ್ಯವನ್ನು ಕಳೆದುಕೊಳ್ಳುವಂತೆ ಮಾಡುತ್ತಿದೆ. ನಾನು ಈ ಬಗ್ಗೆ ಖುದ್ದಾಗಿ ರಾಜ್ಯಪಾಲರಿಗೆ ದೂರು ಕೊಟ್ಟಿದ್ದೇನೆ. ನನಗೆ ಕ್ರಮೇಣ ಈ ರಾಜಕೀಯ ಪಕ್ಷಗಳ ಬಗ್ಗೆ ನಂಬಿಕೆ ಕಳೆದುಹೋಗುತ್ತಿದೆ.

ಕರ್ನಾಟಕದಲ್ಲಿ, ಅದರಲ್ಲೂ ಮಂಗಳೂರಿನಲ್ಲಿ ಆಗುತ್ತಿರುವ ಬೆಳವಣಿಗೆ ನನಗೆ ಆತಂಕವನ್ನು ಉಂಟುಮಾಡುತ್ತಿದೆ. ಇದು ಬೇರೂರಿ ಬಿಟ್ಟರೆ ಒಬ್ಬ ಸಾಹಿತಿಯಾಗಿ ನನಗೆ ಅತ್ಯಂತ ನಾಚಿಕೆಯ ವಿಷಯ. ಆದ್ದರಿಂದ ಈ ಸಮಾವೇಶದಲ್ಲಿ ಜನರ ಮನಸ್ಸು ಬದಲಾಗಿ ದತ್ತಪೀಠ ಇತ್ಯಾದಿ ವಿಷಯಗಳು ಜನರ ಮನಸ್ಸಿನಲ್ಲಿ ವೈಮನಸ್ಯ ಬಿತ್ತದೆ ಮುಸ್ಲಿಮರು ಈ ದೇಶದಲ್ಲಿ ಧೈರ್ಯವಾಗಿ ಬಾಳುವಂತಾಗಬೇಕು. ಹಾಗಾಗಲಿ.

-ಯು.ಆರ್.ಅನಂತಮೂರ್ತಿ

* * * * *

ಗಿರೀಶ್ ಕಾರ್ನಾಡ್‌ರವರೂ ನಮ್ಮ ಸಭೆಯಲ್ಲಿ ಭಾಗವಹಿಸಲು ಒಪ್ಪಿದ್ದರು. ಆದರೆ ಅದೇ ದಿನ ಅವರ ಮಗನಿಗೆ ಕೊಯಮತ್ತೂರಿನಲ್ಲಿ ಶಸ್ತ್ರಚಿಕಿತ್ಸೆ ನಡೆಯಬೇಕಿದ್ದರಿಂದ ಅವರು ಭಾಗವಹಿಸಲಾಗುತ್ತಿಲ್ಲ. ಆದರೂ ನಮ್ಮೊಂದಿಗೆ ಭಾವಾನಾತ್ಮಕವಾಗಿ ಭಾಗವಹಿಸುವುದಾಗಿ ಹೇಳಿರುವ ಅವರು ನಮ್ಮ ಸಮಾವೇಶಕ್ಕೆ ಈ ಸಂದೇಶವನ್ನು ಕಳುಹಿಸಿದ್ ದಾರೆ:

"ಮೂರು ವರ್ಷಗಳ ಹಿಂದೆ ನಾನೂ ನಿಮ್ಮ ಜೊತೆಗಿದ್ದೆ, ಈ ಸಲ ನಿಮ್ಮ ವೇದಿಕೆಯ ಪಾದಯಾತ್ರೆಯಲ್ಲಿ ಭಾಗವಹಿಸಲು ಅಸಮರ್ಥನಾಗಿದ್ದೇನೆ ಎಂದು ವಿಷಾದಿಸುತ್ತೇನೆ. ಆದರೂ ಈ ಹೋರಾಟ ಮುಂದುವರೆಯಲೇಬೇಕು.

(12ನೇ ಪುಟಕ್ಕೆ)



೧
ಕಾಲಿನ ಕೆಳಗೆ ನಾನಿದುವರೆಗೆ ನಿಂತ
ಹಚ್ಚನೆಯ ಹಸಿರು, ಯಾವತ್ತೋ ಮರು-
ಭೂಮಿಯಾಗಿ ಹೋಗಿದೆ. ಮೇಲಿನಾಕಾ-
ಶದ'ಲ್ಲಿ ಒಂದಾದರೂ ಮೋಡಗಳಿಲ್ಲ.
ತಲೆಯೆತ್ತಿ ನೋಡಿದರೆ ರಣಹದ್ದು-
ಗಳ ರೆಕ್ಕೆಯ ನೆರಳು. ನೆಲ ಹೊತ್ತಿ
ಉರಿಯುತ್ತಿದೆ ನಂದಿಸಲು ನೀರೇ ಇಲ್ಲ!

'ಒಲೆ ಹತ್ತಿ ಉರಿದಡೆ ನಿಲ್ಲಬಹುದ-
ಲ್ಲದೆ, ಧರೆ ಹತ್ತಿ ಉರಿದಡೆ ಎಲ್ಲೋ-
ಡ ಬಹುದು?' ಧಗದ್ ಧಗದ್ ಧಗಾ-
ಯಮಾನವಾದ ಈ ಬಕಾಸುರ ಬೆಂಕಿಗೆ
ಭಯಂಕರ ಹಸಿವು. ತಳಿರುಗಳನ್ನು,
ಹೂವುಗಳನ್ನು, ಹೀಚುಗಳನ್ನು, ಹಣ್ಣು
ಗಳನ್ನು ಒಂದೇ ಸಮನೆ ತಿನ್ನುವುದೆ
ಕೆಲಸ. ಹತ್ತಿಕೊಂಡಿದೆ ಬೆಂಕಿ, ಮಂದಿ
ರಕ್ಕೆ, ಮಸೀದಿಗೆ, ಚಲಿಸುತ್ತಿರುವ
ರೈಲಿಗೆ, ಓಡುತ್ತಿರುವ ಬಸ್ಸಿಗೆ, ಹಾರು-
ತ್ತಿರುವ ವಿಮಾನಕ್ಕೆ, ಆಕಾಶಕ್ಕೆ ಮುಡಿ
ಎತ್ತಿ ನಿಂತಿರುವ ಸೌಧಗಳಿಗೆ, ಬಡ
ವರ ಜೋಪಡಿಗಳಿಗೆ, ತಿನ್ನುವ
ಅನ್ನಕ್ಕೆ, ಕುಡಿಯುವ ನೀರಿಗೆ, ಉಸಿ
ರಾಡುವ ಗಾಳಿಗೆ, ಬಹುಕಾಲದಿಂದ
ಹೇಗೋ ಕಾಪಾಡಿಕೊಂಡು ಬಂದಿರುವ
ಪಾರಿವಾಳಗಳ ಕನಸಿನ ಗೂಡಿಗೆ.

೨
ಈ ಉರಿವ ಬೆಂಕಿಯ ಸುತ್ತ ಛಳಿ ಕಾ-
ಯಿಸಿಕೊಳ್ಳುತ್ತಾ, ಆಗಾಗ ಎಣ್ಣೆ ಹೊ-
ಯ್ಯುತ್ತ, ಕೂತ ಮಹನೀಯರೆ, ನೀವು
ಯಾರು? ಮಾತನಾಡಿಸಲೆಂದು ಬಂದರೆ
ಹತ್ತಿರ, ನಿಮಗೆ ಮುಖವೇ ಇಲ್ಲ, ಬರೀ
ಮುಖವಾಡ! ಸಾಧ್ಯವೇ ಸಂವಾದ ಮುಖ
ವಾಡಗಳ ಜತೆಗೆ? ಆಡಬೇಕೆಂದಿದ್ದ
ಮಾತೆಲ್ಲವೂ ಸವೆದ ನಾಣ್ಯಗಳಾಗಿ ವ್ಯರ್ಥ-
ವಾಗಿವೆ ಕೊನೆಗೆ. ಇಷ್ಟೊಂದು ಹತ್ತಿರವಿದ್ದೂ
ದೂರಕ್ಕೆ ನಿಲ್ಲುವ ನೆರಳುಗಳೇ ನೀವು ಯಾರು?
ಏನೂ ಅನ್ನಿಸುವುದಿಲ್ಲವೇ ನಿಮಗೆ ನಿರ್ದಯ-
ವಾಗಿ ದಹಿಸುತ್ತಿರುವ ಈ ಬೆಂಕಿಯನ್ನು
ಕುರಿತು? ಏನೂ ಅನ್ನಿಸುವುದಿಲ್ಲವೇ ಈ
ಅಗ್ನಿಯಲ್ಲಿ ದಗ್ಧವಾಗುತ್ತಿರುವ ಸರ್ವೋ
ದಯದ ಸ್ವಪ್ನಗಳನ್ನು ಕುರಿತು? ಏನೂ
ಅನ್ನಿಸುವುದಿಲ್ಲವೇ ನಿಮಗೆ ರಕ್ತ ಸಿಕ್ತ
ವಾಗುತ್ತಿರುವ ಈ ಚರಿತ್ರೆಯನ್ನು ಕುರಿತು?

೩
ಏನೆಂದು ಗುರುತಿಸಲಿ ಹೇಳಿ ನಿಮ್ಮನ್ನು?
ಈ ಮಹಾಜನದ ಪ್ರತಿನಿಧಿಗಳೆಂದೇ?
ಗದ್ದುಗೆ ಏರಿ ಕೂತಿರುವ ಪ್ರಭುಗಳೆಂದೇ?
ಅಥವಾ ನಮ್ಮೊಳಗೆ ಮನೆ ಮಾಡಿರುವ
ತಲಾತಲದ ವಿಕೃತಿಗಳ ಮೂರ್ತರೂಪ-
ಗಳೆಂದೇ? ಹಳೆಯ ಗುಡಿಗೋಪುರದ
ಕಲಶಗಳನ್ನು ಈಟಿಯ ಮಾಡಿ ನೀಲಾ-
ಕಾಶದೆದೆ ಸೀಳಿ ಕತ್ತಲನು ಕರೆದವರೆ,
ಗರ್ಭ ಗುಡಿಯೊಳಗುರಿವ ನಂದಾದೀಪ-
ಗಳಿಂದ ಪಂಜು ಹೊತ್ತಿಸಿಕೊಂಡು, ದೆವ್ವಂ-
ಗುಣಿವ ತಮಸ್ಸಿನಾರಾಧಕರೆ, ಹಿಂಸಾ
ರತಿಯ ಪೂಜಾರಿಗಳೆ ಎಲ್ಲಿದ್ದರೂ ನೀವು
ಒಂದೆ ಜಾತಿಯ ಜನವೆ. ಜಗತ್ತಿನಾ-
ದ್ಯಂತ ಭಯೋತ್ಪಾದನೆಯ ಬಲೆ ನೆಯ್ದ
ಪೆಡಂಭೂತ ಜೇಡಗಳೆ, ಏನಾಗಿದೆ ನಿಮಗೆ?
ಇನ್ನೂ ಏನಾಗಬೇಕಾಗಿದೆ ಈ ಮನು
ಕುಲಕ್ಕೆ?

೪
ಪಾಚಿಗಟ್ಟುತ್ತಿರುವ ಈ ನೀರುಗಳನ್ನು
ಶುದ್ಧೀಕರಿಸುವುದು ಹೇಗೆ? ಶತ
ಛಿದ್ರವಾಗುತ್ತಿರುವ ಈ ಮನಸ್ಸುಗಳನ್ನು
ಹಿಡಿದು ಕೂಡಿಸುವುದು ಹೇಗೆ? ಪುರಾಣ-
ಗಳಲ್ಲಿ ಸ್ಥಗಿತಗೊಳ್ಳುತ್ತಿರುವ ಬುದ್ಧಿ-
ಗಳ'ನ್ನು ವರ್ತಮಾನದ ವಾಸ್ತವದೊಳಕ್ಕೆ
ತರುವುದು ಹೇಗೆ? ಗುಡಿ-ಚರ್ಚು-ಮಸ
ಜೀದಿಗಳನ್ನು ಬಿಟ್ಟು ಹೊರಬರುವಂತೆ
ಮಾಡುವುದು ಹೇಗೆ? ವೇದ-ಖುರಾನು-ಬೈ
ಬಲ್ಲಿನಿಂದಾಚೆ, ಬಯಲ ಬೆಳಕಿನ ಕೆಳಗೆ
ಬದುಕುವುದನ್ನು ಇನ್ನಾದರೂ ಕಲಿಯುವುದು
ಹೇಗೆ?

ಡಾ|| ಜಿ.ಎಸ್.ಶಿವರುದ್ರಪ್ಪ

ಒಬ್ಬರ ಬಾಯಿಯಿಂದ ಹೊರಡುವ ವ್ಯಕ್ತಿಯೋರ್ವನ ಗುಣಗಾನಗಳು ಸಂಗೀತದಂತೆ; ಸ್ವತಃ ಆತನ ಬಾಯಿಯಿಂದಲೇ ಹೊರಡುವ ಗುಣಗಾನಗಳು ಕರ್ಕಶವಾಗಿರುತ್ತವೆ-ಜೆನೋಫೋನ್

ಇನ್ನೂ ಹುಟ್ಟದ ಚಾನಲ್‌ನ ಭಾನಗಡಿಗಳು

TV 9 ತರಲೆ ಪುರಾಣ

ಮಹೇಂದ್ರ ಮಿಶ್ರಾ ಎಂಬ ಕೋಡಂಗಿಯನ್ನು ಕರೆತಂದು ಕನ್ನಡ ಚಾನಲ್ ಮಾಡು ಎಂದ ತಪ್ಪಿಗೆ ಅದರ ಮಾಲಿಕ ಶ್ರೀನಿರಾಜು ಎಂಬ ಹೈದರಾಬಾದಿ ಹಣೆಹಣೆ ಚಚ್ಚಿಕೊಳ್ಳುತ್ತಿದ್ದಾನೆ. ಮೂರೇ ತಿಂಗಳಲ್ಲಿ ಶುರುವಾಗಬೇಕಿದ್ದ TV9 (ಟೀವಿ ನೈನ್) ಎಂಬ ಸುದ್ದಿ ವಾಹಿನಿಗೆ ವರ್ಷ ತುಂಬುತ್ತಾ ಬಂದರೂ 'ಪ್ರಸವ ಯೋಗ' ಕೂಡಿ ಬಂದಿಲ್ಲ.

ಮಂಗನ ಕೈಗೆ ಮಾಣಿಕ್ಯ ಕೊಟ್ಟಂತಾಗಿದೆ TV9 ಪರಿಸ್ಥಿತಿ.

ಮಹೇಂದ್ರ ಮಿಶ್ರಾ ಎಂಬ ಕೋಡಂಗಿಯನ್ನು ಕರೆತಂದು ಕನ್ನಡ ಚಾನಲ್ ಮಾಡು ಎಂದ ತಪ್ಪಿಗೆ ಅದರ ಮಾಲಿಕ ಶ್ರೀನಿರಾಜು ಎಂಬ ಹೈದರಾಬಾದಿ ಹಣೆಹಣೆ ಚಚ್ಚಿಕೊಳ್ಳುತ್ತಿದ್ದಾನೆ. ಮೂರೇ ತಿಂಗಳಲ್ಲಿ ಶುರುವಾಗಬೇಕಿದ್ದ TV9 (ಟೀವಿ ನೈನ್) ಎಂಬ ಸುದ್ದಿ ವಾಹಿನಿಗೆ ವರ್ಷ ತುಂಬುತ್ತಾ ಬಂದರೂ 'ಪ್ರಸವ ಯೋಗ' ಕೂಡಿ ಬಂದಿಲ್ಲ. ಇದ್ದ ಕೆಲಸ ಬಿಟ್ಟು ಕೈತುಂಬಾ ಸಂಬಳ ನಂಬಿಕೊಂಡು ಟೀವಿ ನೈನ್ ಸೇರಿಕೊಂಡ ಒಂದು ದಜನ್ ಪತ್ರಕರ್ತರನ್ನು ಬೀದಿಗೆ ದಬ್ಬಿ ಮತ್ತೊಂದು ಡಜನ್ ಹುಡುಗಿಯರನ್ನು ನಡುರಸ್ತೆಯಲ್ಲಿ ಕುಣಿಸಿ, ಇನ್ನರ್ಧ ದಜನ್ ಹುಡುಗಿಯರಿಗೆ ಮಾಂಗಲ್ಯ ಭಾಗ್ಯ ಕರುಣಿಸಿ, ಟೀವಿ ಶುರುವಾಗುವ ಮೊದಲೇ ಅದರ ಶ್ರಾದ್ಧಕ್ಕೂ ಏರ್ಪಾಟು ಮಾಡಿರುವ ಪಾಖಂಡಿ ಮಹೇಂದ್ರ ಮಿಶ್ರಾ ಒಂದೋ ಜೈಲಿಗೆ ಹೋಗಬೇಕು ಅಥವಾ ಈತನ ಹಾವಳಿಯ ವಿರುದ್ಧ ಆತನ ಧಣಿಗೇ ಜ್ಞಾನೋದಯವಾಗಬೇಕು!



ಬೆಂಗಳೂರಿನ TV9 ಮುಖ್ಯ ಕಛೇರಿ

ಇದು ಕನ್ನಡದ, ಇನ್ನೂ ಹುಟ್ಟದ, ಹುಟ್ಟುವ ಮೊದಲೇ ರೋಗಗ್ರಸ್ತವಾದ TV 9 ನ ಹಾಲಿ ದುರಂತ. TV 9 ಎಂಬ ನ್ಯೂಸ್ ಚಾನಲ್ ಒಂದು ಈಗಾಗಲೇ ಆಂಧ್ರದಲ್ಲಿ ಚಾಲ್ತಿಯಲ್ಲಿದೆ. ಅದರ ಮಾಲೀಕ ಶ್ರೀನಿರಾಜು ಎಂಬ ಕುಬೇರನಿಗೆ ilabs ಎಂಬ ಸಾಫ್ಟ್‌ವೇರ್ ಕಂಪೆನಿಯಿದೆ. ಅದರಲ್ಲಿ ದುಡಿದದ್ದನ್ನೆಲ್ಲಾ ಹಾಕಿ TV 9 ಹೆಸರಲ್ಲಿ ಕನ್ನಡದ ಸುದ್ದಿ ಚಾನಲ್ ಒಂದನ್ನು ಪ್ರಾರಂಭಿಸುವ ಬಗ್ಗೆ ಶ್ರೀನಿರಾಜು ಕಳಕಳಿ ಪ್ರಶ್ನಾತೀತ. ಆದರೆ ಪೀಡೆಯಂತೆ ಮಹೇಂದ್ರ ಮಿಶ್ರಾ ವಕ್ಕರಿಸಿದ್ದಾನೆ.

ಈತ TV9 ಕನ್ನಡದ ನ್ಯೂಸ್ ಡೈರೆಕ್ಟರ್. ಯಾವ ಯೋಗ್ಯತೆಯ ಮೇಲೆ ಮಾಲೀಕ ಶ್ರೀನಿರಾಜು ಆತನಿಗೆ ಈ ಹುದ್ದೆ ಕೊಟ್ಟಿದ್ದಾರೋ ಭಗವಂತನೇ ಬಲ್ಲ. ಕನ್ನಡ ಗೊತ್ತಿಲ್ಲ, ಇಂಗ್ಲಿಷ್, ಹಿಂದಿ ಬಿಟ್ಟರೆ ಬೇರೆ ಭಾಷೆ ಗೊತ್ತಿಲ್ಲ. ಜೊತೆಗೆ ಮಹಾನ್ ಕನ್ನಡ ದ್ವೇಷಿ. ಹಾಳಾಗಲಿ ಎಂದು ಈತನಲ್ಲಿ ಸುದ್ದಿ ವಿದ್ಯೆ ವಿವೇಕವನ್ನಾದರೂ ಹುಡುಕೋಣ ಎಂದರೆ ಈ ಮಿಶ್ರಾ ಹುಟ್ಟು ಫ್ರಾಡು. ಪ್ರಾರಂಭದಲ್ಲಿ ಹಿಂದಿಯ ಆಜ್‌ತಕ್‌ಗೆ ಉತ್ತರ ಪ್ರದೇಶದ ಕರೆಸ್ಪಾಂಡೆಂಟ್ ಆಗಿದ್ದು ಅಲ್ಲಿ ತನ್ನ ಪತ್ನಿಯನ್ನು ಕೊಂದ ಕೇಸಲ್ಲಿ ಜೈಲು ಕಂಡ. ಆನಂತರ ಝೀ ಟೀವಿ ಸೇರಿಕೊಂಡು ಅಲ್ಲಿಂದಲೂ ಹೊರದಬ್ಬಲ್ಪಟ್ಟ. ಈತನನ್ನು ಸೇರಿಸಿಕೊಂಡ ತಪ್ಪಿಗೆ 'ಸಹರಾ ಸಮಯ್' ಇವತ್ತಿಗೂ ದಂಡ ಕಟ್ಟುತ್ತಿದೆ.

ಈತ ಎಂಥಾ ಅವಿವೇಕಿಯೆಂದರೆ; ಕಾಡುಗಳ್ಳ ವೀರಪ್ಪನ್‌ನಿಂದ ನಾಗಪ್ಪ ಮಾರಡಗಿ ತಪ್ಪಿಸಿಕೊಂಡು ಬಂದರೆ ಈತ ರಾಜ್‌ಕುಮಾರ್ ವೀರಪ್ಪನ್‌ನನ್ನು ಕೊಂದು ಬಂದಿದ್ದಾರೆಂದು ಝೀ ಟೀವಿಯಲ್ಲಿ ಸುದ್ದಿ ಮಾಡಿದ್ದ! ಹೈದ್ರಾಬಾದ್‌ನಲ್ಲಿ ನಕ್ಸಲ್ ನಾಯಕ ರಾಮಕೃಷ್ಣ ಪತ್ರಿಕಾ ಗೋಷ್ಠಿ ಕರೆದು ಅದ್ವಾಣಿಯನ್ನು ಟೀಕಿಸಿದ್ದಕ್ಕೆ 'ಅದ್ವಾಣಿಯನ್ನೇ ಕೊಲ್ತೀವಿ ಅಂದ್ರು' ಎಂದು ಈತ ಝೀ ಟೀವಿಯಲ್ಲಿ ಮಾಡಿದ ಸುದ್ದಿಯಿಂದಾಗಿ ಆಂಧ್ರ ಮತ್ತು ಕೇಂದ್ರ ಸರ್ಕಾರಗಳೆರಡೂ ಅನ್ಯಾಯವಾಗಿ ನೂರಾರು ನಕ್ಸಲೀಯರನ್ನು ಕೊಂದವು.

ಮಹೇಂದ್ರ ಮಿಶ್ರಾನ ಅಧಿಕ ಪ್ರಸಂಗಿತನಕ್ಕೆ ಇವು ಸ್ಯಾಂಪಲ್ಲುಗಳಷ್ಟೇ. ಬಹುಶಃ ದೆಹಲಿಯ JNU ನಲ್ಲಿ ಈತ ಜರ್ನಲಿಸಂ ಕೋರ್ಸ್ ಮಾಡಿರಬೇಕು. ಆದರೆ ತಾನೇ JNUನ ಜರ್ನಲಿಸಂ ವಿಭಾಗಕ್ಕೆ ಡೀನ್ ಆಗಿದ್ದೆ ಎಂದು ರೈಲು ಬಿಡುತ್ತಾನೆ. ತನ್ನ ವಯಸ್ಸಿಗೆ ಮೀರಿದ ಅನುಭವಗಳನ್ನು ಹೇಳಿಕೊಳ್ಳುತ್ತಾನೆ. ಪಕ್ಕಾ ನಸುಗುನ್ನಿ, ಹುಟ್ಟಾ ಮುಖೇಡಿ. ಯಾರಲ್ಲೂ ಕಣ್ಣಲ್ಲಿ ಕಣ್ಣಿಟ್ಟು ಮಾತಾಡಲಾರ. ಹುಡುಗಿಯರನ್ನು ಕಂಡಿದ್ದೇ ಕೋತಿಗೆ ಹೆಂಡ ಕುಡಿಸಿದಂತಾಡುತ್ತಾನೆ. ಇಂಥವನ ಕೈಗೆ ಒಂದು ಸುದ್ದಿ ಚಾನಲ್ ಸಿಕ್ಕಿಬಿಟ್ಟರೆ ಕೇಳಬೇಕೆ? ಸತ್ಯ ಆನ್‌ಲೈನ್‌ನಲ್ಲಿದ್ದು ಆನಂತರ ತನ್ನದೇ ilabs ಎಂಬ ಸಾಫ್ಟ್‌ವೇರ್ ಕಂಪೆನಿ ತೆರೆದಿದ್ದ ಶ್ರೀನಿರಾಜು ಮತ್ತು ಆಂಧ್ರದ ಕಾಳಹಸ್ತಿಯ ಕಾಂಗ್ರೆಸ್ ಶಾಸಕ ಎಸ್‌ಸಿವಿ ನಾಯ್ಡು ಸೇರಿ 75 ಕೋಟಿಯಷ್ಟು ದುಡ್ಡು ಎತ್ತಿಟ್ಟುಕೊಂಡೇ TV9 ಕನ್ನಡ ಚಾನಲ್‌ಗೆ ಕೈ ಹಾಕಿದ್ದರು. ಅದರ ಉಸ್ತುವಾರಿಗೆಂದು ಕನ್ನಡಿಗ ಎಸ್‌ವಿಎಲ್ ನಾರಾಯಣ್‌ರನ್ನು ಎಂ.ಡಿ. ಹುದ್ದೆಗೆ ತಂದರು. ತಾಂತ್ರಿಕ ಮುಖ್ಯಸ್ಥರನ್ನಾಗಿ ಮೈಸೂರಿನ ಶ್ರೀಕಾಂತ್ ನೇಮಕಗೊಂಡರು.

ನ್ಯೂಸ್ ಡೈರೆಕ್ಟರ್ ಆಗಿ ವಕ್ಕರಿಸಿದ ಮಹೇಂದ್ರ ಮಿಶ್ರಾ ಶುರುವಿನಲ್ಲೇ ಖರೀದಿಯ ನೆಪದಲ್ಲಿ ಸಿಕ್ಕಾಪಟ್ಟೆ ಅಪರಾ ತಪರಾ ನಡೆಸಿದ. ಅದು ನಾರಾಯಣ್ ಗಮನಕ್ಕೆ ಬಂತು. ಈ ಬಗ್ಗೆ ಯಾವತ್ತು ನಾರಾಯಣ್ ಕಣ್ಣಿಟ್ಟರೋ ಮಿಶ್ರಾ ತಾಂತ್ರಿಕ ಮುಖ್ಯಸ್ಥ ಶ್ರೀಕಾಂತ್‌ರನ್ನು ನಾರಾಯಣ್ ವಿರುದ್ಧ ಎತ್ತಿಕಟ್ಟಿದ. ಮಿಶ್ರಾನ ದಗಲುಬಾಜಿತನ ಗೊತ್ತಿಲ್ಲದ ನಾರಾಯಣ್ ಮತ್ತು ಶ್ರೀಕಾಂತ್ ಇಬ್ಬರೂ ಹೊಡೆದಾಟವಾಗುವಷ್ಟು ಕಿತ್ತಾಡಿಕೊಂಡು ಕೊನೆಗೆ ನಾರಾಯಣ್ ರಾಜೀನಾಮೆ ಬಿಸಾಕಿ ಹೊರನಡೆದರು.



ತರಲೆ ಮಹೇಂದ್ರ ಮಿಶ್ರಾ

ಇಷ್ಟಾಗಿದ್ದೇ ಇಡೀ TV9 ಮಿಶ್ರಾನ ಕಪಿಮುಷ್ಟಿಗೆ ಸಿಕ್ಕಿಬಿಟ್ಟಿತು. ಪ್ರಾರಂಭದಲ್ಲಿ ಈಟೀವಿಯಿಂದ ಬಂದಿದ್ದ ಶ್ಯಾಮ್‌ಸುಂದರ ಕುಷ್ಟಗಿಯವರನ್ನು ಮುಂದಿಟ್ಟುಕೊಂಡು ಇಡೀ ಚಾನಲ್ ಹಿಡಿತಕ್ಕೆ ತಂದುಕೊಂಡು ಕ್ರಮೇಣ ಕುಷ್ಟಗಿಯವರನ್ನೇ ಹೊರದಬ್ಬಿದ. ವಿನಾಕಾರಣ ಸರಿಸುಮಾರು ಒಂದೂವರೆ ಡಜನ್ ಹುಡುಗಿಯರನ್ನು ನೇಮಿಸಿಕೊಂಡು ಅವರನ್ನೆಲ್ಲ ತನ್ನ ಸುತ್ತ ಕೂಡ್ರಿಸಿಕೊಂಡು 'ಪಟ್ಟಾಂಗ' ಶುರು ಹಚ್ಚಿಕೊಳ್ಳುತ್ತಿದ್ದ. ಅಷ್ಟೇ ಸಂಖ್ಯೆಯಲ್ಲಿ ಬೇರೆಬೇರೆ ಟೀವಿಗಳಿಂದ ಬಂದ ವರದಿಗಾರರಿದ್ದರೂ ಒಬ್ಬೊಬ್ಬ ವರದಿಗಾರನ ಜೊತೆಗೂ ಕನಿಷ್ಠ ಮೂರ್‍ನಾಲ್ಕು ಮಂದಿ ಹುಡುಗಿಯರನ್ನು ವಿನಾಕಾರಣ ರಿಪೋರ್ಟಿಂಗ್‌ಗೆಂದು ಕಳಿಸಿದ. ಟೀವಿಯಿನ್ನೂ ಶುರುವಾಗೇ ಇಲ್ಲ ಆಗಲೇ ವಿಧಾನಸೌಧಕ್ಕೆ ದಾಳಿಯಿಟ್ಟ TV9 ಹುಡುಗಿಯರು ಸೆಕ್ಸಿ ಡ್ರೆಸ್ ತೊಟ್ಟು ಮಂತ್ರಿಗಳ ಮುಂದೆ ಮೈಕ್ ಹಿಡಿಯುತ್ತಿದ್ದರೆ ಬೇರೆಬೇರೆ ಟೀವಿಗಳವರೆಲ್ಲ ಕಕ್ಕಾಬಿಕ್ಕಿ!

ರಾ. ಸೋಮನಾಥ್

ಮಂಗಳೂರು, ಮೈಸೂರು, ಹುಬ್ಬಳ್ಳಿ ಕಡೆಗಳಿಂದಲೇ ಆಯ್ದ ಹುಡುಗಿಯರೆಲ್ಲ ಟೀವಿ ವರದಿಗಾರಿಕೆಯೆಂದರೆ ಅದಕ್ಕೆ ಪ್ರತಿಭೆಯೇ ಮುಖ್ಯ ಎಂದು ಭಾವಿಸಿದ್ದು ಒಂದೇ ತಿಂಗಳಿಗೆ ಉಲ್ಟಾ ಹೊಡೆದಿತ್ತು. ಮಿಶ್ರಾ ವಿಚಿತ್ರ ಡ್ರೆಸ್ ಕೋಡ್ ಒಂದನ್ನು ಜಾರಿಗೆ ತಂದ. ಹುಡುಗರ್‍ಯಾರೂ ಜೀನ್ಸು ಟಿಶರ್ಟು ತೊಡುವಂತಿಲ್ಲ. ಆದರೆ ಹುಡುಗಿಯರು ಮಾತ್ರ ಕಡ್ಡಾಯವಾಗಿ ಟೈಟ್ ಜೀನ್ಸು, ಮಿಡ್ಡಿ, ಮಿನಿ, ಸ್ಲೀವ್‌ಲೆಸ್ ಟಾಪ್ ತೊಟ್ಟು ಬರಲೇಬೇಕು. TV9 ಹುಡುಗಿಯರೆಂದರೆ ಯಾವ ಮಾಡೆಲ್‌ಗಳಿಗೇನು ಕಮ್ಮಿ? ಸೆಕ್ಸಿಯಾಗಿರಬೇಕು. ಅದೆಂಥಾ ಮಂತ್ರಿಯಾಗಿದ್ದರೂ ನಮ್ಮ ಹುಡುಗಿಯರನ್ನು ನೋಡಿದ್ದೇ ಸುಸ್ತಾಗಿಬಿಡಬೇಕು!

ಇದು ಮಿಶ್ರಾನ ತಲೆತಿರುಕ ಬುದ್ಧಿ. ಅದಕ್ಕೊಂದು ರಿಚಮಂಡ್ ರಸ್ತೆಯ TV9 ಛೇಂಬರ್‌ನ ಪಕ್ಕದ ಬ್ಯೂಟಿ ಪಾರ್ಲರ್ ಒಂದನ್ನು ಗೊತ್ತು ಮಾಡಿದ. TV9 ಹುಡುಗಿಯರೆಲ್ಲ ವಾರಕ್ಕೆರಡು ಬಾರಿಯಾದರೂ ಅಲ್ಲಿಗೆ ಕಡ್ಡಾಯವಾಗಿ ಹೋಗಲೇಬೇಕು. ಅವರ ಮೇಕಪ್ ಖರ್ಚನ್ನೆಲ್ಲ ಕಂಪೆನಿಯೇ ಕೊಡುತ್ತೆ ಎಂದು ಘೋಷಿಸಿದ. ಆ ಬ್ಯೂಟಿ ಪಾರ್ಲರ್ ಇಟ್ಟವಳು ಹಿಂಗಿಂಗೇ ನಡಿಬೇಕು, ಹಿಂಗಿಂಗೇ ಪೋಜು ಕೊಡಬೇಕು, ಇಂಥದ್ದೇ ಡ್ರೆಸ್ ಹಾಕಬೇಕೆಂದು ಕೋಚಿಂಗ್ ಕೊಟ್ಟಿದ್ದೇ ಕೊಟ್ಟಿದ್ದು.

ಮಿಶ್ರಾ ಮತ್ತೂ ಒಂದು ಹುಚ್ಚಾಟಕ್ಕಿಳಿದ. ಚಾನಲ್ ಶುರುವಾಗದಿದ್ದರೇನಂತೆ, TV9 ಬರ್‍ತಾ ಇದೆ ಅನ್ನೋದು ಜನಕ್ಕೆ ಗೊತ್ತಾಗಬೇಕು. ಅದಕ್ಕೆ ಜನನಿಬಿಡ ಸರ್ಕಲ್ಲುಗಳಲ್ಲಿ ಇಂಥ ಹುಡುಗಿಯರ ಹಿಂಡನ್ನು ನಿಲ್ಲಿಸಿ ಅವರಿಗೆ ವರದಿಗಾರಿಕೆಯ ಟ್ರೈನಿಂಗ್ ಕೊಡಿ ಎಂದ. ಕಾನಿಷ್ಕಾ ಹೋಟ್ಲು, ಚಾಲುಕ್ಯಾ ಹೋಟ್ಲು, ಬ್ರಿಗೇಡ್ ರಸ್ತೆ, ಮೆಜೆಸ್ಟಿಕ್ ಫುಟ್‌ಪಾತ್- ಹೀಗೆ ಎಲ್ಲೆಂದರಲ್ಲಿ ಕ್ಯಾಮೆರಾ ಇಟ್ಟದ್ದೇ ಅದರ ಮುಂದೆ 'ಸೆಕ್ಸಿ ಡ್ರೆಸ್' ತೊಟ್ಟ ಹುಡುಗಿಯರು ಏನೇನೋ ಡೈಲಾಗ್ ಹೊಡೆಯುವಂತೆ ದೊಂಬರಾಟವೂ ನಡೆಯಿತು. ಜನ ಗೇಲಿ ಮಾಡಿ ನಕ್ಕದ್ದೇ ಬಂತು. ಹೆಚ್ಚೆಂದರೆ ಉದಯ ಟೀವಿಯಲ್ಲೋ, ಈಟೀವಿಯಲ್ಲೋ ಮಂತ್ರಿಗಳ ಪತ್ರಿಕಾಗೋಷ್ಠಿಯಲ್ಲಿ ಜೋಡಿಸಿಟ್ಟಿದ್ದ TV9 ನ ಮೈಕ್ ಮಾತ್ರವೇ ಕಾಣಿಸುತ್ತಿತ್ತು.

ಪ್ರಾರಂಭದಲ್ಲಿ 2006 ರ ಜುಲೈನಲ್ಲಿ TV9 ಶುರುವಾಗುತ್ತೆ ಎಂದು ಘೋಷಿಸಿ, ಆನಂತರ ಅದನ್ನು ಆಗಸ್ಟ್‌ಗೆ ಮುಂದೂಡಿದ. ತದನಂತರ ನವೆಂಬರ್ 1 ಕ್ಕೆ ಚಾನಲ್ ಲಾಂಚ್ ಆಗೋದು ಗ್ಯಾರಂಟಿ ಎಂದ. ಅದು ಕಳೆದು ಡಿಸೆಂಬರ್ ಹತ್ತಿರವಾಗುತ್ತಿದ್ದರೂ ಟೀವಿ ನೈನ್ ಹುಟ್ಟುವ ಸೂಚನೆಗಳಿಲ್ಲ.

ಅನನುಭವಿ ವರದಿಗಾರರು, ಏನೂ ಗೊತ್ತಿಲ್ಲದ ತಾಂತ್ರಿಕ ಸಿಬ್ಬಂದಿ, ಜೊತೆಗೆ ಅಧಿಕಪ್ರಸಂಗಿ ಹುಡುಗಿಯರು; ಮುಖ್ಯಸ್ಥ...


ಮಿಶ್ರಾನ ಹುಚ್ಚಾಟಕ್ಕೆ ಹುಡುಗಿಯರು ಬಲಿ!

ಕಾಟಕ್ಕೋ, ಕಮ್ಮಿ ಸಂಬಳಕ್ಕೋ ವರದಿಗಾರರು ಕೆಲಸ ಬಿಟ್ಟು ಹೋಗದಂತೆ ಮಾಡಬೇಕಲ್ಲ, ಅದಕ್ಕೆ ಮಿಶ್ರಾ ವಿಚಿತ್ರ ಸೂತ್ರವೊಂದನ್ನು ಪ್ರಯೋಗಿಸಿದ.

ಹೇಗೂ ಮಾಡೆಲ್ ಹುಡುಗಿಯರಂಥ ವರದಿಗಾರ್ತಿಯರಿದ್ದಾರೆ. ಅಂಥವರನ್ನು ಅಲ್ಲೇ ಇದ್ದ ವರದಿಗಾರರಿಗೆ ಕಟ್ಟಿಬಿಟ್ಟರೆ?!


ಪರಸ್ಪರ ಜೋಡಿಗಳನ್ನು ಇವನೇ ಗೊತ್ತು ಮಾಡಿ ಅವರನ್ನೇ ಜೊತೆ ಮಾಡಿ ರಿಪೋರ್ಟಿಂಗ್‌ಗೆ ಕಳಿಸತೊಡಗಿದ. ಆಫೀಸಿನಲ್ಲೇ ವಿಸ್ಕಿ ರಮ್ಮು ತರಿಸಿ ಹುಡುಗಿಯರ ಬರ್ತ್‌ಡೇ ಶುರು ಹಚ್ಚಿಕೊಂಡ. ಒಂದೆರಡು ಜೋಡಿಗಳಿಗೆ ತಾನೇ ನಿಂತು ಮದುವೆ ಮಾಡಿದ. TV9 ಆಫೀಸು ಪ್ರೇಮಿಗಳ ಡೇಟಿಂಗ್ ಅಡ್ಡೆಯಾಯಿತು. ಇನ್ನೂ ಕೆಲವರು ಮದುವೆಯಾಗದೇ ಒಟ್ಟೊಟ್ಟಿಗೇ ಇರತೊಡಗಿದರು. ಇನ್ನೂ ಕೆಲವರು ಅಪ್ಪ ಅಮ್ಮಂದಿರಿಗೂ ತಿಳಿಸದೇ ಮದುವೆ ಮಾಡಿಕೊಂಡರು. ಅಷ್ಟಿಷ್ಟು ಕಟ್ಟುನಿಟ್ಟಾಗಿದ್ದ ಹುಡುಗಿಯರು ಹಿಂಸೆ ತಾಳಲಾರದೇ ಕೆಲಸ ಬಿಟ್ಟರು. ಇನ್ನೂ ಕೆಲ ಹುಡುಗಿಯರು ಸೆಕ್ಸಿ ಡ್ರೆಸ್‌ನ ಕಾರಣಕ್ಕೇ ಬೀದಿ ಕಾಮಣ್ಣರ ಕಾಟಕ್ಕೀಡಾದರು.

ಟೀವಿ ಉದ್ಧಾರವಾಗಬೇಕೆಂದರೆ ಇನ್ನೆಲ್ಲಿಂದ? ಅಷ್ಟಕ್ಕೂ ಈ ಮಿಶ್ರಾ ವಿರುದ್ಧ ಧಣಿ ಶ್ರೀನಿರಾಜುಗೆ ದೂರು ಕೊಡಬೇಕೆಂದರೆ ಆತನ ಫೋನ್ ನಂಬರ್, ಈಮೇಲ್ ವಿಳಾಸವನ್ನೇ ಯಾರಿಗೂ ದೊರಕದಂತೆ ಮಿಶ್ರಾ ನೋಡಿಕೊಂಡಿದ್ದಾನೆ. TV9 ದುಡ್ಡಿನಲ್ಲಿ ಮಿಶ್ರಾ ವೈಟ್‌ಫೀಲ್ಡ್‌ನಲ್ಲಿ 75 ಲಕ್ಷದ ಫ್ಲಾಟ್ ಒಂದನ್ನು ಖರೀದಿಸಿದ್ದಾನೆ. ಸಾಲದೆಂಬಂತೆ ಲ್ಯಾವೆಲ್ಲಿ ರಸ್ತೆಯಲ್ಲಿ ಮಲ್ಯನ ಫ್ಯಾಕ್ಟರಿ ಎದುರು ಒಂದೂಕಾಲು ಕೋಟಿಯ ಮತ್ತೊಂದು ಫ್ಲಾಟ್ ಕೊಂಡಿದ್ದಾನೆ. ತಾನು ತಿಂಗಳಿಗೆ ಎಂಬತ್ತೈದು ಸಾವಿರ ರೂಪಾಯಿ ಸಂಬಳ ಪಡೆದು ವರದಿಗಾರರಿಗೆ ಮೂರೋ ಐದೋ ಸಾವಿರ ಸಂಬಳ ನಿಗದಿ ಮಾಡಿದ್ದಾನೆ. ಎಂಥಾ ಕಂಜೂಸ್ ಎಂದರೆ ಮಧ್ಯಾಹ್ನವಾದರೆ ಊಟ ಕೊಡಿಸಿ ಎಂದು ವರದಿಗಾರರನ್ನೇ ಪೀಡಿಸುತ್ತಾನೆ.



ಈತ ಎಂಥಾ ಖತರ್‌ನಾಕ್ ಎಂದರೆ ಬೇರೆ ಯಾರಿಗೂ ತನ್ನ ಒಂದೇ ಒಂದು ಫೋಟೋ ಸಿಗದಂತೆ ನೋಡಿಕೊಳ್ಳುತ್ತಾನೆ. ಯಾರಾದರೂ ತನ್ನ ಜಾತಕ ಬಯಲಿಗೆಳೆಯಬಹುದೆಂಬ ಭೀತಿ. ತನ್ನ ಮೊಬೈಲ್ ಫೋನ್, ಬ್ಯಾಂಕ್ ಅಕೌಂಟ್ ಯಾವುದಕ್ಕೂ ಒಂದೇ ಒಂದು ಫೋಟೋ ಕೊಟ್ಟಿಲ್ಲ. ಈಗಿರುವವಳು ಎರಡನೇ ಪತ್ನಿ. ಮೊದಲ ಪತ್ನಿಯನ್ನು ಕೊಂದ ಕೇಸಿನಲ್ಲಿ ಇಷ್ಟರಲ್ಲೇ ಆತ ಜೈಲಿಗೆ ಹೋದರೂ ಅಚ್ಚರಿಯಿಲ್ಲ. ಅದಕ್ಕೂ ಮುನ್ನ ದೊಡ್ಡದೊಂದು ಸ್ಟಿಂಗ್ ಆಪರೇಷನ್ ಮಾಡಿ ಸರ್ಕಾರವನ್ನೇ ಬೀಳಿಸುತ್ತೇನೆಂದು ರೈಲು ಬಿಡುತ್ತಾನೆ. ಆದರೆ ಈತನನ್ನು ನಂಬಿ ಅಪಾಯ ಮೇಲೆಳೆದುಕೊಳ್ಳಲು ಯಾವ ವರದಿಗಾರರೂ ತಯಾರಿಲ್ಲ. ಸಮರ್ಥರೆಲ್ಲ ಕೆಲಸ ಬಿಟ್ಟಿದ್ದಾರೆ. ಇರುವವರೆಲ್ಲ ಭಟ್ಟಂಗಿಗಳೇ. ಅದರಲ್ಲೂ ಕ್ರೈಂ ವಿಭಾಗದ ಮುಖ್ಯಸ್ಥ ರಾಘವೇಂದ್ರನಿಗೆ ಮೈತುಂಬ ದುರಹಂಕಾರ. ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಲಾರ. ಸತೀಶ್ ಚಪ್ಪರಿಕೆಗೆ ನೆಲ ಕಾಣದಷ್ಟು ಅವಿವೇಕ. ರವಿಕುಮಾರ್, ರಂಗನಾಥ್, ಸುರೇಶ್ ಥರದವರನ್ನಿಟ್ಟುಕೊಂಡು TV9 ಶುರುವಾಗಬೇಕೆಂದರೆ ಎಲ್ಲಿಂದ ಸಾಧ್ಯ?

ಬಹುಶಃ ಕುಮಾರ ಸ್ವಾಮಿಯ ಕಸ್ತೂರಿ ಚಾನಲ್ ಶುರುವಾಗುವುದಕ್ಕೆ ಎಲ್ಲರೂ ಕಾಯುತ್ತಿದ್ದಾರೆ. ಅಲ್ಲಿ ಮಿಶ್ರಾ ಜೈಲಿಗೆ ಹೋಗುವುದಕ್ಕೂ, TV9 ಮುಚ್ಚುವುದಕ್ಕೂ ಒಂದೇ ಆಗುತ್ತದೆ.



ಮಿಶ್ರಾನಿಗೇ ಟೀವಿ ಚಾನಲ್ ಕಾಗುಣಿತ ಗೊತ್ತಿರಲಿಲ್ಲ.

ಎಲ್ಲಿ ಕೆಲಸಕ್ಕೆ ಬೆಲೆಯಿಲ್ಲವೋ ಅಲ್ಲಿ ಚಮಚಾಗಿರಿ, ಭಟ್ಟಂಗಿತನಗಳಿಗೇ ಬೆಲೆ ಬರುತ್ತದೆ. ಅಂಥ ಸಂಸ್ಥೆ ಉದ್ಧಾರವಾಗುವುದೂ ಕಷ್ಟ. ಹೀಗೆ ಬಕೀಟು ಹಿಡಿದನೆಂದು ರವಿಕುಮಾರ್ ಎಂಬಾತನನ್ನು ಸೀನಿಯರ್ ಪ್ರೊಡ್ಯೂಸರ್ ಹುದ್ದೆಗೆ ಮಿಶ್ರಾ ತಂದ. ತನಗೆ ಮಸ್ಕಾ ಹೊಡೆಯಲಿಲ್ಲ ಎಂದು ರವಿಕುಮಾರ್ ಮಾತು ಕೇಳಿ ಮತ್ತೊಬ್ಬ ಸೀನಿಯರ್ ಪ್ರೊಡ್ಯೂಸರ್ ಸ್ವರೂಪ್‌ನನ್ನು ಕಿತ್ತೊಗೆದ. TV9 ನಲ್ಲಿ ಏಕೈಕ ವಿವೇಕಿಯಂತಿದ್ದ ಚೀಫ್ ಪ್ರೊಡ್ಯೂಸರ್ ಶಿವಶಂಕರ್‌ಗೂ, ಮಿಶ್ರಾನಿಗೂ ಭಾಷೆ ವಿಷಯದಲ್ಲಿ ಕಿರಿಕ್ಕಾಯಿತು. ಸುದ್ದಿಯಲ್ಲಿ ಹೆಚ್ಚು ಹೆಚ್ಚು ಇಂಗ್ಲಿಷ್ ಮಿಕ್ಸ್ ಮಾಡಿ, ಕನ್ನಡ ಯಾರಿಗೂ ಅರ್ಥವಾಗೋಲ್ಲ ಎಂದು ಮಿಶ್ರಾ ಅಧಿಕಪ್ರಸಂಗತನಕ್ಕಿಳಿದ. ಅದನ್ನು ಧಿಕ್ಕರಿಸಿದ ಶಿವಶಂಕರ್ `I never allow anybody to commit rape on my language' ಎಂದಿದ್ದೇ ರಾಜೀನಾಮೆ ಎಸೆದು ಹೊರಬಿದ್ದರು.

ಯಾವತ್ತು ಶಿವಶಂಕರ್ ಹೊರಬಿದ್ದರೋ ಅದನ್ನೇ ಹೊಂಚು ಹಾಕುತ್ತಿದ್ದ ರವಿಕುಮಾರ್, ಮಿಶ್ರಾಗೆ ಮಸ್ಕಾ ಹೊಡೆದು ಅಲ್ಲಿಗೆ ತನ್ನ ಪರಮಾಪ್ತ ರಂಗನಾಥ್ ಭಾರದ್ವಾಜ್‌ರನ್ನು ತಂದ. ಅದಕ್ಕೆ ತಕ್ಕಂತೆ ಇನ್‌ಪುಟ್ ವಿಭಾಗಕ್ಕೆ ಪ್ರಜಾವಾಣಿಯಿಂದ ಬಂದಿದ್ದ ಸತೀಶ್ ಚಪ್ಪರಿಕೆ ಅಮರಿಕೊಂಡ. ಇದೇ ಹುದ್ದೆಯಲ್ಲಿದ್ದ ವಿ.ಕ.ದ. ಎಂ.ಆರ್. ಸುರೇಶ್ ತನ್ನ ಪತ್ನಿಗೆ ವರದಕ್ಷಿಣೆ ಕಿರುಕುಳ ಕೊಟ್ಟು ಆಕೆಯ ಆತ್ಮಹತ್ಯೆಗೆ ಕಾರಣನಾದನೆಂದು ಕೇಸಿಗೆ ಸಿಕ್ಕಿಬಿದ್ದಿದ್ದ. ಆತ ಜೈಲಿಗೆ ಹೋಗುವುದು ಗ್ಯಾರಂಟಿಯೆಂದು ಗೊತ್ತಾಗಿ ಅಲ್ಲಿಗೆ ಸತೀಶ್ ಚಪ್ಪರಿಕೆಯನ್ನು ತರಲಾಯಿತಾದರೂ, ಇಬ್ಬರೂ ಸ್ವಭಾವತಃ ಕ್ರೀಡಾ ವರದಿಗಾರರು. ಸುದ್ದಿಯ ಗಂಧವಿಲ್ಲ. ಮೆಟ್ರೋ ವಿಭಾಗವನ್ನು ನೋಡಿಕೊಳ್ಳುತ್ತಿದ್ದ ಮಾರುತಿ ಕರ್ರಗಿದ್ದಾನೆ ಎಂಬ ಒಂದೇ ಕಾರಣಕ್ಕೆ ಆತನನ್ನು ಮಿಶ್ರಾ ಮೂಲೆಗುಂಪು ಮಾಡಿದ್ದಾನೆ. ಯಾವೊಬ್ಬ ರಿಪೋರ್ಟರ್ ಆತನ ಮಾತಿಗೆ ಬೆಲೆ ಕೊಡದಂತೆ ಮಾಡಿದ್ದಾನೆ. ಹೀಗಾಗಿ TV9 ನಲ್ಲಿ ಒಬ್ಬನೇ ಒಬ್ಬ ಪ್ರತಿಭಾವಂತನಿಲ್ಲ. ಅಳಿದುಳಿದ ವರದಿಗಾರರಿಗೆ ಕೆಲಸದಲ್ಲಿ ಆಸಕ್ತಿಯಿಲ್ಲ.

ಮೂರೇ ತಿಂಗಳಲ್ಲಿ ಟೀವಿ ಶುರುವಾಗುತ್ತೆ.... ಆಗ ಸಂಬಳ ಡಬ್ಬಲ್ ಮಾಡ್ತಾರೆ ಎಂದು ಮೂರೋ ಆರೋ ಸಾವಿರದ ಸಂಬಳಕ್ಕೆ ಕೆಲಸಕ್ಕೆ ಸೇರಿದವರೆಲ್ಲ ಕಾದಿದ್ದೇ ಬಂತು. ವರ್ಷತುಂಬುತ್ತಾ ಬಂದರೂ ಟೀವಿ ಶುರುವಾಗುವ ಲಕ್ಷಣಗಳಿಲ್ಲ. ಅರ್ಧ ಸಂಬಳಕ್ಕೆ ಎಷ್ಟು ದಿನ ಅಂತ ಮಾಡುತ್ತಾರೆ? ಒಂದು ಡಜನ್ ಸಿಬ್ಬಂದಿ ಶುರುವಾಗುವ ಮೊದಲೇ ಕೆಲಸ ತೊರೆದರೆ, ಇನ್ನರ್ಧ ಮಂದಿ ಬೇರೆ ಕಡೆ ಕೆಲಸ ಹುಡುಕುತ್ತಿದ್ದಾರೆ. ಯಾವ ತಾಂತ್ರಿಕ ಮುಖ್ಯಸ್ಥ ಶ್ರೀಕಾಂತ್‌ರನ್ನು ಛೂ ಬಿಟ್ಟು ಎಂಡಿ ನಾರಾಯಣ್‌ಗೆ ಮಿಶ್ರಾ ಕಾಟ ಕೊಡಿಸಿದನೋ ಈಗ ಅದೇ ಶ್ರೀಕಾಂತ್ ಮೇಲೆ ಮಿಶ್ರಾನ ಕಣ್ಣು ಬಿದ್ದಿದೆ. ಶ್ರೀಕಾಂತ್ ಕೂಡ ಹೋಗಿಬಿಟ್ಟರೆ ಅಲ್ಲಿಗೆ ಇಡೀ TV9 ಮಿಶ್ರಾನ ಕಪಿಮುಷ್ಟಿಗೆ ಸಿಲುಕುತ್ತದೆ.


ಸದ್ಯಕ್ಕಂತೂ TV9 ಶುರುವಾಗುವ ಯಾವುದೇ ಸೂಚನೆಗಳಿಲ್ಲ. ಏಕೆಂದರೆ ಅಲ್ಲಿನ ತಾಂತ್ರಿಕ ಸಿಬ್ಬಂದಿಗೆ ಕೆಲಸವೇ ಗೊತ್ತಿಲ್ಲ. ಈಗಾಗಲೇ 30 ಕೋಟಿ ಫೋಲಾಗಿದೆ. ಉಳಿದ ನಲವತ್ತೈದು ಕೋಟಿಯನ್ನು ಧಣಿಗಳು ಬಿಡುಗಡೆ ಮಾಡಬೇಕೆಂದರೆ ಮಿಶ್ರಾನನ್ನು ನಂಬಿ ಇನ್ನಷ್ಟು ತಲೆ ಬೋಳಿಸಿಕೊಳ್ಳಲು ಅವರು ಸಿದ್ಧರಿಲ್ಲ. ಕೊಟ್ಟ ದುಡ್ಡೆಲ್ಲ ಹುಡುಗಿಯರ ಮೇಕಪ್ಪು, ಬ್ಯೂಟಿ ಪಾರ್ಲರ್ ಬಿಲ್ಲು, ಮಿಶ್ರಾನ ಹೋಟೆಲ್ ಬಿಲ್ಲು, ಐಷಾರಾಮಿ ಫ್ಲಾಟು ಇತ್ಯಾದಿಗಳಿಗೆ ಖರ್ಚಾಗಿದೆ. ಇಂತಿಷ್ಟು ಭಕ್ಷೀಸು ಅಂತ ಕೊಡದೇ ಹೋದರೆ TV9 ಅನ್ನು ಲೋಕಲ್ ಕೇಬಲ್ ಆಪರೇಟರುಗಳು ಹಾಕುವುದಿಲ್ಲ. ಗ್ರಾಮಾಂತರ ವರದಿಗಾರರಿಗೆಂದು ಮಿಶ್ರಾ ದುಬಾರಿಯ ಲ್ಯಾಪ್‌ಟಾಪುಗಳನ್ನು ಕಳಿಸಿದ್ದಾನಾದರೂ ಕೆಲವರಿಗೆ ಅದರ ಪರಿಜ್ಞಾನವೇ ಇಲ್ಲ.

ಅಷ್ಟೆಲ್ಲಾ ಕಷ್ಟಪಟ್ಟು ತನಿಖಾ ವರದಿಗಳನ್ನು ಮಾಡಿಕೊಟ್ಟರೆ ಅದನ್ನು ಬಿತ್ತರಿಸಲು ಇನ್ನೂ ಚಾನಲ್ಲೇ ಶುರುವಾಗಿಲ್ಲ. ಸದ್ಯಕ್ಕದು ಶುರುವಾಗುವ ಲಕ್ಷಣಗಳಿಲ್ಲ. ಸಾಧ್ಯಾಂತ ಮಾಡಿದ ರಿಪೋರ್ಟುಗಳನ್ನೆಲ್ಲ ಕಮ್ಮಿ ದುಡ್ಡಿಗೆ ಈಟೀವಿಗೋ, ಉದಯ ಟೀವಿಗೋ TV9 ವರದಿಗಾರರು ಮಾರಿಕೊಳ್ಳುತ್ತಿದ್ದಾರೆ.

ತಲೆ ತಿರುಕನ ಕೈಗೆ ಚಾನಲ್ ಕೊಟ್ಟರೆ ಏನಾಗುತ್ತೆ ಎಂಬುದಕ್ಕೆ ಇದಕ್ಕಿಂತ ಉದಾಹರಣೆ ಬೇಕೆ?

ಅಂಬಿ ಕಣ್ಣು ಅಪ್ಸರಾ ಮೇಲೆ

ಬೆಂಗಳೂರಿನ ಸಿಟಿ ಮಾರ್ಕೆಟ್‌ನಲ್ಲಿರುವ ಅಪ್ಸರಾ ಟಾಕೀಸ್ ವಶಕ್ಕಾಗಿ ಈಗ ಭಾರಿ ಲಾಬಿಗಳು ನಡೆಯುತ್ತಿವೆ.


ಶ್ರೀ ಲಕ್ಷ್ಮಿನರಸಿಂಹ ಧರ್ಮ ಸಂಸ್ಥೆ

ಬೆಂಗಳೂರು.

ಸನ್ಮಾನ್ಯ ಶ್ರೀ ಎಸ್.ಎಂ.ಕೃಷ್ಣರವರಿಗೆ,
ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ,
ಬೆಂಗಳೂರು.

ತಾವು ಚಾಮರಾಜಪೇಟೆಯ ವಿಧಾನ ಸಭಾ ಕ್ಷೇತ್ರದಿಂದ ಸ್ಪರ್ಧಿಸುತ್ತಿರುವುದು ನಮಗೆ ಬಹಳ ಸಂತೋಷವಾಗಿದೆ. ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಸ್.ಎಲ್.ಎನ್. ಧರ್ಮ ಸಂಸ್ಥೆಯ ಆಡಳಿತ ಮಂಡಳಿಯವರು ಮತ್ತು ಕ್ಷೇತ್ರದ ಗಾಣಿಗ ಸಮಾಜ ಬಾಂಧವರು ತಮಗೂ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ಸಂಪೂರ್ಣ ಬೆಂಬಲವನ್ನು ನೀಡಲು ತೀರ್ಮಾನವನ್ನು ಕೈಗೊಳ್ಳಲಾಗಿದೆ ಎಂದು ತಮಗೆ ತಿಳಿಸಲು ಹರ್ಷಿಸುತ್ತೇವೆ.

ತಮ್ಮ ವಿಶ್ವಾಸಿ
(ಎ. ಕೆಂಪಣ್ಣ ಶೆಟ್ಟಿ)

ಕೆಂಪಣ್ಣ ಶೆಟ್ಟಿ ಎಸ್.ಎಂ. ಕೃಷ್ಣರಿಗೆ ನೀಡಿದ್ದ ಬೆಂಬಲ ಪತ್ರ

ಒಂದು ಕಾಲದ ಬೆಂಗಳೂರಿನ ಪ್ರಸಿದ್ಧ ವ್ಯಾಪಾರಿ ದೊಡ್ಡಣ್ಣ ಶೆಟ್ಟರು ಸ್ಥಾಪಿಸಿರುವ ಎಸ್‌ಎಲ್‌ಎನ್ ಚಾರಿಟೀಸ್ ಟ್ರಸ್ಟ್‌ನಲ್ಲಿ ಅಪ್ಸರಾ, ಪರಿಮಳ ಹಾಗೂ ಪ್ರದೀಪ್ ಟಾಕೀಸ್‌ಗಳು ಹಾಗೂ ಎಸ್‌ಎಲ್‌ಎನ್ ಶಿಕ್ಷಣ ಸಂಸ್ಥೆಗಳಿವೆ. ಆದರೆ ಈ ಶಿಕ್ಷಣ ಸಂಸ್ಥೆಗಳು ಬಾಗಿಲು ಹಾಕುವ ಹಂತ ತಲುಪಿದ್ದು ಟ್ರಸ್ಟ್ ಕೂಡ ರಾಜಕಾರಣಿಗಳ, ಹಣವಂತರ ದಾಳಕ್ಕೆ ಸಿಕ್ಕು ಗೆದ್ದಲು ಹತ್ತಿದ ಮರದಂತಾಗಿವೆ.

ಇವುಗಳಲ್ಲಿ ಪರಿಮಳ-ಪ್ರದೀಪ್ ಟಾಕೀಸ್‌ಗಳು ನಾಗಮಂಗಲದ ನವೀನ್ ಚಂದ್ರರಿಗೆ ಲೀಸ್ ಆಗಿದೆ. ಅಪ್ಸರಾ ಟಾಕೀಸ್ ಇಷ್ಟೂ ವರ್ಷಗಳ ಕಾಲ ಆಮಿ ಫಿಲ್ಮ್ಸ್‌ನ ಕೆ.ಪಿ. ದೇಸಾಯಿ ವಶದಲ್ಲಿದ್ದು, ಲೀಸ್ ಮುಗಿದ ಕಾರಣ ಈಗ ಮತ್ತೆ ಟ್ರಸ್ಟ್ ವಶಕ್ಕೆ ಬಂದಿದೆ. ತಿಂಗಳಿಗೆ ಜುಜುಬಿ ಏಳುವರೆ ಸಾವಿರ ಬಾಡಿಗೆ ಕೊಡುತ್ತಿದ್ದ ದೇಸಾಯಿಯಿಂದ ಟಾಕೀಸ್ ಬಿಡಿಸಿಕೊಳ್ಳುವಾಗ ಎಸ್‌ಎಲ್‌ಎನ್ ಟ್ರಸ್ಟ್‌ನವರು ಐದು ಲಕ್ಷ ರೂಪಾಯಿ ಪರಿಹಾರ ಬೇರೆ ನೀಡಿದರಂತೆ.

ಬೆಂಗಳೂರಿನಲ್ಲಿ ಸ್ವಲ್ಪ ಗಲೀಜು ಎನ್ನಬಹುದಾದ ಕಲಾಸಿಪಾಳ್ಯದಲ್ಲಿದ್ದರೂ ಹಿಂದಿ ಸಿನಿಮಾಗಳಿಗೆ ಹೇಳಿ ಮಾಡಿಸಿದ ಟಾಕೀಸ್‌ಗಳೆಂದರೆ ಇವೆ. ಇಂತಾ ಏರಿಯಾದಲ್ಲೂ ಪರಿಮಳದ ನವೀನ್ ಇತ್ತೀಚೆಗೆ ಕನ್ನಡದ 'ಹಠವಾದಿ' ಓಡಿಸಿ ಒಳ್ಳೆ ಕಲೆಕ್ಷನ್ ತೋರಿಸಿದ್ದರು.


ದೊಡ್ಡಣ್ಣ ಶೆಟ್ಟಿ

ಯಾವಾಗ ಅಪ್ಸರಾ ಮತ್ತೆ ಎಸ್‌ಎಲ್‌ಎನ್ ಟ್ರಸ್ಟ್‌ನವರ ವಶಕ್ಕೆ ಬಂತೋ ಅದನ್ನು ಪುನಃ ಲೀಸ್‌ಗೆ ಪಡೆಯುವ ಭಾರಿ ಸರ್ಕಸ್‌ಗಳು ಶುರುವಾಗಿವೆ. ಸಂಸದ-ನಟ ಅಂಬರೀಷ್ ಅಪ್ಸರಾ ವಶಕ್ಕಾಗಿ ಕಾಂಗ್ರೆ ಶಾಸಕ ವಿ.ಆರ್. ಸುದರ್ಶನ್ ಮೇಲೆ ಭಾರಿ ಒತ್ತಡ ಹಾಕುತ್ತಿರುವ ಬಗ್ಗೆ ಸುದ್ದಿಗಳಿವೆ. ಕಮ್ಮಿ ಬಂಡವಾಳ, ಜೀವಮಾನಪರ್ಯಂತ ಭರ್ಜರಿ ಗ್ಯಾರಂಟಿ ಲಾಭ ಇರುವ ಕಾರಣ ಇವೆಲ್ಲಾ ನಡೆಯುತ್ತಿವೆ. ಈ ನಡುವೆ ಎಸ್‌ಎಲ್‌ಎನ್ ಟ್ರಸ್ಟ್‌ನ ಮಾಜಿ ಅಧ್ಯಕ್ಷನಾಗಿದ್ದ ಎಸ್.ಎಸ್. ರಾಮು, ಚಿತ್ರರಂಗದ ಪಾಲ್, ಬಾಷಾ, ಸ್ವಾಗತ್ ಟಾಕೀಸ್‌ನ ರೆಡ್ಡಿ ಹಾಗೂ ಪಕ್ಕದ ಪರಿಮಳ ಟಾಕೀಸ್‌ನ ನವೀನ್‌ಚಂದರ್ ಸಹ ಅಪ್ಸರೆಯ ಹಿಂದೆ ಬಿದ್ದಿದ್ದಾರೆ.

ಆದರೆ ಸದ್ಯದ ಪರಿಸ್ಥಿತಿಯಲ್ಲಿ ಅಪ್ಸರ ಇವರ‍್ಯಾರಿಗೂ ಸಿಗುವ ಚಾನ್ಸ್ ಕಾಣುತ್ತಿಲ್ಲ. ಇಷ್ಟಕ್ಕೂ ಅಪ್ಸರಾ ಒಂದು ಸಿನಿಮಾ ಟಾಕೀಸ್ ಆಗಿ ಉಳಿಯುತ್ತದಾ ಎಂಬ ಅನುಮಾನಗಳೂ ಇವೆ.

ಅದು ಹೇಗೆಂದರೆ ಎಸ್‌ಎಲ್‌ಎನ್ ಟ್ರಸ್ಟಿನ ಪ್ರಮುಖರು ಹಾಗೂ ಗಾಣಿಗ ಜನಾಂಗದ ಕೆಲ ಮುಖಂಡರಿಗೆ ಅಪ್ಸರಾವನ್ನು ಒಂದು ಮದುವೆ ಛತ್ರವೋ ಇಲ್ಲಾ ರಂಗಮಂದಿರವನ್ನಾಗಿಯೋ ಬದಲಾಯಿಸುವ ಯೋಚನೆಗಳಿವೆ. ಇದೊಂದು ಮೂರ್ಖ ನಿರ್ಧಾರ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಜನೋಪಕಾರಿ ದೊಡ್ಡಣ್ಣ ಶೆಟ್ಟರು ಸ್ಥಾಪಿಸಿದ ಎಸ್‌ಎಲ್‌ಎನ್ ಟ್ರಸ್ಟಿನಲ್ಲಿರುವ ಬಹುತೇಕರು ಅವಿವೇಕಿಗಳಾಗಿದ್ದು ದೂರದೃಷ್ಟಿ ಇಲ್ಲದವರಾಗಿದ್ದಾರೆ. ಜನಾಂಗದ ಹಿತರಕ್ಷಣೆ, ಅಭಿವೃದ್ಧಿ ಕೆಲಸಗಳಿಗಿಂತಾ ಕೂರಲು ಒಂದು ಕುರ್ಚಿ, ನುಂಗಲು ದುಡ್ಡು ಇವೆರಡನ್ನೇ ಗುರಿಯಾಗಿಸಿಕೊಂಡಿರುವ ಜನ ಇವರು.

ಟ್ರಸ್ಟ್‌ನ ಇದುವರೆಗಿನ ಕೆಲಸಗಳು ಹಾಗೂ ಈಗ ಹೊಸ ಮಂಡಳಿಯ ನೇಮಕಾತಿಗೆ ನಡೆಯುತ್ತಿರುವ ಲಾಬಿಗಳು ಇದಕ್ಕೆ ಸಾಕ್ಷಿ.


ರಾಮುನಾಥಯ್ಯ ಹೋದ....! ಕೆಂಪಣ್ಣ ಶೆಟ್ಟಿ ಬರುತ್ತಾನಾ?

ಬೆಂಗಳೂರು-ಕೋಲಾರದ ಕಡೆ ಹೆಚ್ಚಿನ ಸಂಖ್ಯೆಯಲ್ಲಿರುವ ಗಾಣಿಗ ಜನಾಂಗದಲ್ಲಿ ಜ್ಯೋತಿ ನಗರ ವೈಶ್ಯರದೇ ಒಂದು ಉಪ ಪಂಗಡ. ಜನೋಪಕಾರಿ ದೊಡ್ಡಣ್ಣ ಶೆಟ್ಟರು 10.3..1908 ರಲ್ಲಿ ಸಿಟಿ ಮಾರ್ಕೆಟ್‌ನಲ್ಲಿದ್ದ 100 x 100 ಚದರಡಿಯ ತಮ್ಮ ಸ್ವಂತ ಜಾಗದಲ್ಲಿ ಶ್ರೀ ಲಕ್ಷ್ಮಿ ನರಸಿಂಹ ಉಚಿತ ಶಾಲೆ ಪ್ರಾರಂಭಿಸಿದ್ದರು. ನಂತರ ಈ ಶಾಲೆಯ ಸುತ್ತಲಿನ ಆರು ಎಕರೆ ಜಾಗವನ್ನು ಆಗಿನ ಮೈಸೂರು ಒಡೆಯರ್ ಬಿಟ್ಟುಕೊಟ್ಟಿದ್ದರು. ಬಸವನಗುಡಿಯಲ್ಲಿರುವ ನ್ಯಾಷನಲ್ ಕಾಲೇಜ್ ಸಹ ಆರಂಭದ ಹಂತದಲ್ಲಿ ಇದೇ ಜಾಗದಲ್ಲಿ ಒಂದೆರಡು ರೂಂಗಳನ್ನು ಎರವಲು ಪಡೆದು ಕೆಲಕಾಲ ಶಾಲೆ ನಡೆಸಿ ನಂತರ ಸ್ವಂತ ಜಾಗ ಖರೀದಿಸಿ ಬಸವನಗುಡಿಗೆ ಶಿಫ್ಟ್ ಆಗಿತ್ತು. 1920 ರ ಸುಮಾರಿಗೆ ಮರಣಶೈಯ್ಯೆಯಲ್ಲಿದ್ದ ದೊಡ್ಡಣ್ಣ ಶೆಟ್ಟರು ಸಮಸ್ತ ಆಸ್ತಿ-ಪಾಸ್ತಿಗಳನ್ನು ಸಾರ್ವಜನಿಕ ಸೇವೆಗೆಂದು ಮುಡಿಪಾಗಿಡುವ ನಿರ್ಧಾರ ಮಾಡಿ ಅದರಂತೆ ವಿಲ್ ಮಾಡಿದ್ದರು. ಆ ಪ್ರಕಾರವಾಗಿ ಎಸ್ ಎಲ್‌ಎನ್ ಚಾರಿಟೀಸ್ ಟ್ರಸ್ಟ್ ರಚನೆ ಯಾಯಿತು. ಹತ್ತು ಜನರಿರಬೇಕಾದ ಈ ಟ್ರಸ್ಟ್‌ನಲ್ಲಿ ಜ್ಯೋತಿನಗರ ವೈಶ್ಯ ಜನಾಂಗದವರೇ ಅಧ್ಯಕ್ಷರಾಗಬೇಕಿದ್ದು ಒಟ್ಟು ಏಳು ಮಂದಿ ಗಾಣಿಗ ಜನಾಂಗದವರು ಹಾಗೂ ಮೂವರು ಇತರೆಯವರಿರುವಂತೆ ವಿಲ್ ಇತ್ತು.



ಅದೇ ಪ್ರಕಾರವಾಗಿ ಕಳೆದ 85 ವರ್ಷಗಳಿಂದಲೂ ಟ್ರಸ್ಟ್ ನಡೆದುಕೊಂಡು ಬಂದಿದೆ.

ಸಿಟಿ ಮಾರ್ಕೆಟ್ ಬಳಿಯ 6 ಎಕರೆ ಹಾಗೂ ಮಾಗಡಿ ರಸ್ತೆಯ ತಾವರೆಕೆರೆ ಬಳಿ ಟ್ರಸ್ಟ್‌ಗೆ 17.5 ಎಕರೆ ಜಮೀನಿದ್ದರೂ ಗಾಣಿಗ ಜನಾಂಗದವರ ಅಭಿವೃದ್ಧಿಗೆ ಟ್ರಸ್ಟ್ ಮಾಡಿರುವ ಕೆಲಸ ಏನೂ ಇಲ್ಲ ಎನ್ನಬಹುದು.


ಕೆಂಪಣ್ಣ

98 ರಲ್ಲಿ ಅಧ್ಯಕ್ಷರಾಗಿದ್ದ ಎಸ್.ಎಸ್. ರಾಮು ಆಗಲಿ, 2001 ರಲ್ಲಿ ಕೃಷ್ಣಾ ಸರ್ಕಾರ ನೇಮಿಸಿದ್ದ ಎಂ.ಜಿ. ರಾಮನಾಥಯ್ಯನವರಾಗಲಿ ನಯಾಪೈಸೆ ಯಷ್ಟೂ ಕೆಲಸ ಮಾಡದೆ ಕಾಲ ಹಾಕಿದ್ದಾರೆ. ಈಗ ರಾಮನಾಥಯ್ಯನವರ ಅವಧಿ ಮುಗಿದಿದೆ. ಆ ಖಾಲಿ ಜಾಗಕ್ಕೆ ಬಂದು ಕೂರಲು ಕೆಂಪಣ್ಣ ಶೆಟ್ಟಿ ಎಂಬ ಗ್ರಾನೈಟ್ ಕುಳ ಹದ್ದಿನಂತೆ ಕಾದು ಕುಳಿತಿದ್ದಾನೆ. ದಿನ ಬೆಳಗಾದರೆ ಜಪಾನ್, ಇಟಲಿ, ಚೈನಾ ಎಂದು ಬ್ಯುಸಿನೆಸ್ ಟೂರ್ ಹೊಡೆಯುವ ಕೆಂಪಣ್ಣ ಶೆಟ್ಟಿಗೆ ಗಾಣಿಗ ಜನಾಂಗದವರ ಅಭಿವೃದ್ಧಿಗಿಂತಾ ಟ್ರಸ್ಟ್‌ಗಿರುವ ಆಸ್ತಿ ಹಾಗೂ ಇತರ ವಹಿವಾಟುಗಳೇ ಮುಖ್ಯ ಎನಿಸಿರುವಂತಿವೆ.

ಈಗ ಕೆಲ ಜೆಡಿಎಸ್ ಲೀಡರ್‌ಗಳು ಹಾಗೂ ಬಿಜೆಪಿಯ ಮುಜರಾಯಿ ಸಚಿವ ನಾಗರಾಜ ಶೆಟ್ಟಿಯನ್ನು ಹಿಡಿದುಕೊಂಡು ಎಸ್‌ಎಲ್‌ಎನ್ ಟ್ರಸ್ಟ್‌ನ ಅಧ್ಯಕ್ಷನಾಗಲು ಹೊರಟಿರುವ ಕೆಂಪಣ್ಣ ಶೆಟ್ಟಿ ಕಾಂಗ್ರೆಸ್‌ನ ಎಸ್.ಎಂ. ಕೃಷ್ಣರ ಪಕ್ಕಾ ಚೇಲಾ. ಕೃಷ್ಣ ಚಾಮರಾಜಪೇಟೆಯಲ್ಲಿ ಎಲೆಕ್ಷನ್‌ಗೆ ನಿಂತಿದ್ದಾಗ ಯಾರನ್ನೂ ಕೇಳದೆ ಇಡೀ ಗಾಣಿಗ ಜನಾಂಗದವರ ಬೆಂಬಲವನ್ನು ಕೃಷ್ಣಾಗೆ ಘೋಷಿಸಿಬಿಟ್ಟಿದ್ದ.ಆದರೆ ಈಗ ಕೋ-ಜಾ ಸರ್ಕಾರದವರೊಂದಿಗೂ ಓಡಾಡುತ್ತಾ ಗಾಣಿಗ ಜನಾಂಗದ ಲೀಡರ್ ಎನಿಸಿಕೊಳ್ಳಲು ಲಾಗಾ ಹಾಕುತ್ತಿದ್ದಾನೆ.

ಅಷ್ಟೇ ಅಲ್ಲ ಈ ಹಿಂದೆ ಟ್ರಸ್ಟ್ ಅಧ್ಯಕ್ಷರಾಗಿದ್ದ ರಾಮನಾಥಯ್ಯ ಹಾಗೂ ಸೆಕ್ರೆಟರಿ ಎಸ್.ಟಿ. ರಾಮಚಂದ್ರ ಶೆಟ್ಟರನ್ನು ತನ್ನ ಮುಷ್ಟಿಯಲ್ಲಿಟ್ಟು ಕೊಂಡು ಆಟ ಆಡಿಸುತ್ತಿದ್ದಾನೆ.

ಅಚ್ಚುಕಟ್ಟಾಗಿ ಒಂದು ಶಾಲೆ ನಡೆಸಲಿಕ್ಕಾಗದವರು, ಸಂಸ್ಥೆಗೆ ಬರಬೇಕಾಗಿದ್ದ ಬಾಡಿಗೆ ವಸೂಲಿ ಮಾಡಲಾಗದವರು, ಸರಿಯಾಗಿ ಲೆಕ್ಕಪತ್ರ ನಿಭಾಯಿಸಲಾಗದವರು... ಇಂತವರೇ ಮತ್ತೆ ಎಸ್‌ಎಲ್‌ಎನ್ ಟ್ರಸ್ಟ್‌ಗೆ ಬಂದು ಕುಳಿತರೆ ತಮ್ಮ ಪಾಲಿಗೆ ಬೆಣ್ಣೆ ಇಟ್ಟುಕೊಂಡು ಗಾಣಿಗರಿಗೆ ಬರೀ ಎಣ್ಣೆ ಗಾಣ ಉಳಿಸುತ್ತಾರಷ್ಟೆ.

ವರದಿಗಾರ

ಕೆಂಪಣ್ಣಾಗೆ ಸುದರ್ಶನ್ ಬೆಂಬಲ ಏಕೆ?



ಶಾಸಕ ವಿ.ಆರ್. ಸುದರ್ಶನ್‌ರವರು ಕೋಟ್ಯಾಧೀಶ ಕೆಂಪಣ್ಣ ಶೆಟ್ಟಿ ಪರವಾಗಿ ತೀವ್ರ ಲಾಬಿ ನಡೆಸುತ್ತಿದ್ದಾರೆಂಬುದು ಈಗ ಗುಟ್ಟಾಗಿ ಉಳಿದಿಲ್ಲ.

ಕೋಲಾರದಲ್ಲಿ ಜ್ಯೋತಿ ಟ್ರಸ್ಟ್ ಹೆಸರಿನಲ್ಲಿ ವಿ.ಆರ್. ಸುದರ್ಶನ್ ಒಂದು ಶಾಲೆ ಕಟ್ಟಿಸಿದ್ದಾರೆ. ಇದರ ಬಹುತೇಕ ಖರ್ಚು ನೋಡಿಕೊಂಡಿದ್ದು ಇದೇ ಕೆಂಪಣ್ಣ ಶೆಟ್ಟಿ.

ಈ ಋಣಭಾರದಿಂದಾಗಿ ಎಸ್‌ಎಲ್‌ಎನ್ ಟ್ರಸ್ಟಿಗೆ ಕೆಂಪಣ್ಣ ಶೆಟ್ಟರನ್ನೇ ತಂದು ಕೂರಿಸಲು ಸುದರ್ಶನ್ ಬಯಸಿದ್ದಾರೆ.

ಇದೇ ಕೆಂಪಣ್ಣ ಶೆಟ್ಟರ ಗ್ಯಾಂಗಿನ ರಾಮನಾಥಯ್ಯ, ರಾಮಚಂದ್ರ ಶೆಟ್ಟರ ಆಡಳಿತಾವಧಿಯಲ್ಲಿ ಟ್ರಸ್ಟಿಗೆ ಸೇರಿರುವ ಪಿ.ಜಿ. ಕಾಂಪ್ಲೆಕ್ಸಿನ ಬಾಡಿಗೆ ಬಾಬ್ತು ಹದಿನೈದು ಲಕ್ಷ ರೂಪಾಯಿಗಳನ್ನು ಮನ್ನಾ ಮಾಡಿ ಬಿಟ್ಟಿದ್ದಾರೆ. ಈ ಡೀಲ್‌ನಲ್ಲಿ ಇವರು ತಿಂದಿರುವ ಹಣ ಎಷ್ಟಿರಬಹುದು ಯೋಚಿಸಿ?


ಅಷ್ಟೇ ಅಲ್ಲ, ಇದೇ ಗುಂಪು ಮತ್ತೆ ಟ್ರಸ್ಟಿನ ಪದಾಧಿಕಾರಿಗಳಾಗಿ ವಕ್ಕರಿಸಿಕೊಂಡರೆ ದೊಡ್ಡಣ್ಣ ಶೆಟ್ಟರ ಆಶಯಗಳು ಉಳಿಯುತ್ತವಾ ಎಂಬ ಪ್ರಶ್ನೆಯೂ ಬಹುತೇಕರ ಮನಸ್ಸಿನಲ್ಲಿ ಇದೆ.

ಚಾರಿತ್ರ್ಯ ಅಂಕಗಣಿತವನ್ನು ಮೆಚ್ಚುವುದಿಲ್ಲ; ಆದರೆ ಸ್ವಾರ್ಥ ಅದನ್ನು ಪೂಜಿಸುತ್ತದೆ-ಕೂಲಿ ಮಾಸನ್

ಕೆಟ್ಟರಪ್ಪೊ ಕೆಟ್ಟರೂ ಬೋಳು ತಲೆ ಗೌಡರು

ಚಾಮುಂಡೇಶ್ವರಿ ಚುನಾವಣೆಯ ಬಗ್ಗೆ ಸೀರ ತಲೆಯೆಲ್ಲಾ ಹರಟುತ್ತ ಕುಳಿತಿದ್ದ. ಅವನ ಕಡೆ ಗಮನ ಹರಿಸದ ಕಾಳಣ್ಣ, ಉಗ್ರಿ ಬಂದ ಕೂಡಲೇ,

"ಚಾಮುಂಡಿ ಯಲಕ್ಸಂದೇನ್ಲ ಸಮಾಚಾರ ಉಗ್ರಿ?" ಎಂದ.



"ಸಮಾಚಾರೇನು. ಮೈದಿಗೆ ಬೆಂಕಿಬಿದ್ದಂಗೆ ಹತ್ತಿಗಂಡದೆ. ಜನಗಳ ಕೂಗಾಟ ಬೈಟ್ಟದ ಮ್ಯಾಲೆ ನಿಂತಗಂಡೋರಿಗೂ ಕೇಳತಯಿದ್ದತಂತೆ."

"ಸಿದರಾಮಯ್ಯನೆದ್ರಿಗೆ ಯಾರು ನಿಂತ್ರೂ?"

"ಜೆಡಿಎಸ್ ಕಡಿಂದ ಶಿವಬಸಪ್ಪ ಅಂತ ನಿಂತವ್ರುನೆ."

"ಅವುನ್ಯಂಗೇ?"

"ಅವುನು ಶ್ರೀಮಂತ. ವಳ್ಳೆ ಮನ್ಸ. ಒಂಥರಾ ರಾಜಶೇಖರಮೂರ್ತಿ ಸದಕಿದ್ದಂಗೆ. ಆದ್ರು ಒಂಥರಾ ಸೋತೆತ್ತಿನಂಗೆ ಕಾಣ್ತನೆ. ಮಕದ ಕಡೆ ರಾಜಕೀಯದ ಕಳೇವಿಲ್ಲ."

"ಈ ಅಪ್ಪ ಮಕ್ಕಳಿಗಂತೋರೆ ಬೇಕಲವೆ?" ಎಂದ ಸೀರ.

"ಅಂಗರೆ ಸಿದರಾಮಯ್ಯ, ಶಿವುಬಸಪ್ಪ ಇಬ್ಬರೆಯಾ ಅನ್ನು?"

"ಇಬ್ಬರಲ್ಲ, ಒಟ್ಟು ಹದುನಾಕು ಜನ ನಿಂತವ್ರುರೆ ಕಣಮಾವ. ಅದರಲ್ಲಿ ಗುರುಸ್ವಾಮಿ ಅನ್ನೋನು ಜೆಡಿಎಸ್ ತಿಕೇಟು ಸಿಕ್ಕಲಿಲ್ಲ ಅಂತ ತಿರುಗಿಬಿದ್ದು ನಿಂತುಬುಟ್ಟವುನೆ. ಅವುನಿಗೆ ಜೆಡಿಯುನೋರು ತಿಕೇಟು ಕೊಟ್ಟವುರೆ. ಸಿದ್ಧರಾಮಯ್ಯನೆದ್ರಿಗೆ ಅವುನೆ ಬಲವಾದೊನು."

"ಅವುನ್ಯಾತ್ರೋನು?"

"ಲಿಂಗಾಯಿತ್ರೋನು. ಒಂದು ಸತಿ ಸಿದ್ಧರಾಮಯ್ಯನ್ನ ಸೋಲಿಸಿದ್ದ. ಈಗೇನಾರ ಜೆಡಿಎಸ್ ತಿಕೇಟು ಸಿಕ್ಕದ್ರೆ ಅವುನೆ ಗೆಲ್ತಿದ್ದ."

"ಬಂಗಾರಪ್ಪನು ಕ್ಯಾಂಡೇಟಾಕಿದ್ದನಂತೆ ಕಂಡ್ರ?" ಎಂದಳು ಜುಮ್ಮಿ.

"ಬಂಗಾರಿ ಅಲ್ಲಿಗೂ ಹೋಗಿದ್ದನೆ?" ಎಂದು ಕಾಳಮಾವ ಅಚ್ಚರಿಗೊಂಡ.

"ಅವುನೆಲ್ಲಿಗೋಗದಿಲ್ಲ ಮಾವ. ಅವುನು ಹೋಗದ ಜಾಗವೇ ಇಲ್ಲ, ಸೊರಬ ಬುಟ್ಟು ಇನ್ನಲ ಕಡಿಕು ಹೋಯ್ತನೆ. ಆ ಚಾಮುಂಡೇಶ್ವರಿಗೂ ಹೋಗಿ ಸಿದ್ಧರಾಮಯ್ಯ ಏನೂ ಮಾಡಿಲ್ಲ ಇಲ್ಲಿ ಅಂದನಂತೆ. ಜನ್ನಲ್ಲ ನಗಾಡಿದ್ದು ನಗಾಡಿದ್ದೆಯ."

"ಅದ್ಯಾಕ್ಲ ನಗಾಡ್ಯರು?"

"ಅಲ್ಲ ಕಣೇ, ಸೊರಬದಲ್ಲಿ ಇವುನು ಬುಟ್ರೆ ಇನ್ಯಾರು ಗೆದ್ದಿಲ್ಲ ಇಲ್ಲಿಗಂಟ. ನೀನು ಹುಟ್ಟದಕಿಂತ ಮುಂದ್ಲಿಂದ್ಲೂ ಇವುನು ಅಲ್ಲಿಂದ ಗೆದ್ದು ಬಂದ್ರೂ ಒಂದು ಬಸ್ಸ್ಯಾಂಡಿಲವಂತೆ. ಒಂದು ಪೆಟ್ರೋಲು ಬ್ಯಾಂಕಿಲವಂತೆ. ನಂಜುಂಡಪ್ಪನ ವರದಿ ವಳಿಕೆ ಅವುನ ಕ್ಷೇತ್ರನೂ ಸೇರಿದ್ದತಂತೆ. ಅಂತದ್ರಲ್ಲಿ ಹಂದಿರೊ ಚಂದಕೆ ಹಾಳುಗ್ವಾಡೆ ಜರಿತು ಅಂತವ ಇಲ್ಲಿಗೆ ಬಂದವುನೆ ಚ್ಯಾರನಂಗೆ ಮಾತಾಡಕ್ಕೆ ಅಂತ ಚಾಮುಂಡೇಶ್ವರಿ ರಾಜಕಾರಣಿಗಳು ನಗಾಡಿದರಂತೆ ಕಣೆ."

"ನಾವು ಒಂದು ಸತಿ ಹೋಗಿ ಬರನ ಕಂಡ್ರ" ಎಂದಳು ಜುಮ್ಮಿ.

"ಅಯ್ಯೋ ಹೋಗಕ್ಯಾದತೇನೆ ಅಲ್ಲಿಗೆ? ದ್ಯಾವೇಗೌಡನ ಕಡಿಯೋರು ಯಾರ್ನು ಊರ್ವಳಿಕೆ ಸೇರುಸ್ತಾ ಯಿಲವಂತೆ. ಅಂತ ಗುರುಸ್ವಾಮಿನೆ ಸೇರಸದೋರು ನಮ್ಮ ಬುಡ್ತರೇನೆ?"

"ಅದ್ಯಾಕ್ ಸೇರಸದಿಲ್ಲ ನೋಡನ ನಡಿಲ."

"ಬೇಕಾದ್ರೆ ನಾವು ಜೆಡಿಎಸ್ ಅನ್ನಕಂಡು ಹೋಗಬವುದು. ಇಲ್ಲ ಅಂದ್ರೆ ಭಾಳ ಕಷ್ಟವಂತೆ" ಎಂದು ಉಗ್ರಿ ಹೇಳಿದಾಗ ಸಿಟ್ಟುಗೊಂಡ ಸೀರ.

"ಅಲ್ಲ ಕಂಡ್ರ ಹರಿಯೋ ನೀರಿಗೆ ದ್ವಣ್ಣೆನಾಯಕನ ಅಪ್ಪಣೆ ಅನ್ನಂಗೆ ಇದ್ಯಾವ ಸೀಮೆ ಮಾತಾಡ್ತಿಲ ನೀನು. ಅದ್ಯಲ್ಲ ಪಾಳೆಗಾರ್ರ ಕಾಲಕೆ ಹೋಯ್ತು. ಇದು ಪ್ರಜಾಪ್ರಭುತ್ವ ಕಂಡ್ರ."

"ಪ್ರಜಾಪ್ರಭುತ್ವ ಅಂತ ನನಿಗೂ ಗೊತ್ತು ಕಣೊ. ಆದ್ರೆ ದ್ಯಾವೇಗೌಡ್ರು ಮಕ್ಕಳ ಕಟಿಗಂಡೋಗಿ ಊರಿಗೂರನೆ ಕೊಂಡ ಕಂಡು ಇಲ್ಯಾರನು ಬುಡಬ್ಯಾಡಿ ಅಂದವುನಂತೆ."

"ಅವುನ್ಯಾಕಂಗನ್ನಕೋದನ್ಲ. ಈ ಬದ್ದೆತ್ತವು ಅಂಗಾಡಿರಬವುದು."

"ಕಾಳಮಾವ, ನಿನಿಗೆ ದ್ಯಾವೇಗೌಡನ ಒಂದು ಮುಕಗೊತ್ತು. ಒಂದು ಸತಿ ಹಾಸನದಲ್ಲಿ ಯಗಡೆಗೆ ವಡಿಸಿದ್ದ. ಇನ್ನೊಂದು ಸತಿ ಭದ್ರಾವತಿಲಿ ಅಪ್ಪಾಜಿ ಅನ್ನೋನು ಕೈಲಿ ವಡಿಸಿದ್ದ. ಎದುರಾಳಿಗಳು ವಡತ ತಿಂದಾಗ ಅವುನು ನಗಾಡದ ನಾನೇ ನೋಡಿದ್ದಿನಿ ಗೊತ್ತೆ?"

"ಅಂಗ್ಯಲ್ಲ ಮಾಡಕ್ಕೋಗಬಾರ್ದು. ಕಾಲ ಒಂದೇ ಸಮ ಇರದಿಲ್ಲ."

"ಅದ್ನೆ ತಿಳಕಂಡಿಲವಲ್ಲ ಹೇಳು. ಕುರುಬರ್ಯಲ ಸೇರಿ ದುಡ್ಡು ಜೋಡಿಸಿಗಂಡೋಗಿ ಸಿದ್ಧರಾಮಯ್ಯನಿಗೆ ಕೊಟ್ರೆ, ಕೊಟ್ಟರೋರಿಗೆ ಸರಿಯಾಗಿ ಬುದ್ಧಿ ಕಲುಸ್ತಿನಿ ಅಂದಿದ್ದನಂತೆ ಕುಮಾರಸ್ವಾಮಿ" ಎಂದ ಉಗ್ರಿ. ಆಗ ಸೀರ,

"ಅಲ್ಲ ಕಂಡ್ರ ಇದೇ ದ್ಯಾವೇಗೌಡ ಯಗಡೆ ಎದ್ರಿಗೆ ರಾಜಕೀಯ ಮಾಡುವಾಗ, ಇಡೀ ಸುತ್ತಲಳ್ಳಿ ತೆಂಗಿನ ಕಾಯಿ ಕೊಟ್ಟಿದ್ರು. ಚೆಂದ್ರಾಪಟ್ಣದಲ್ಲಿ ಲೋಡುಗಟ್ಲೆ ರಾಶಿ ಹಾಕಿದ್ರು. ಅದ ಅರೆಂಜು ಮಾಡಿದ್ದ ನಾನೇ ನೋಡಿದೆ. ಅಂತದ್ರಲ್ಲಿ ಕಾಸಿರೊ ಕುರುಬ್ರು ಸಿದರಾಮಯ್ಯನಿಗೆ ಕಾಸು ಕೊಟ್ರೆ ಇವುರಿಗ್ಯಾಕೆ ಹ್ವಟ್ಟೆ ಹುರೀ?"

"ಅದೆಯಪ್ಪ, ಇವುರಿಗೇನೊ ಗಣಿ ದುಡ್ಡು ಬತ್ತದೆ. ಸರ್ಕಾರಿ ಅಧಿಕಾರಿಗಳು ಕೊಡ್ತರೆ. ಮಿನಿಸ್ಟ್ರಗಳು ಕೊಡ್ತರೆ. ಆ ಸಿದ್ಧರಾಮಯ್ಯನಿಗ್ಯಾರು ಕೊಡಬೇಕೂ?"

"ಇನ್ನೊಂದು ಸತಿ ಹೇಳಾ ಮಾತ" ಎಂದ ಹೋಟೆಲ್ ಚಿಕ್ಕ.

"ನೋಡಪ್ಪ ಈಟೊತ್ತಗಂಟ. ಬಾಯಿ ಮುಚ್ಚಗಂಡಿದ್ದ ಚಿಕ್ಕಣ್ಣ ಈಗ ಬಾಯಿಬುಟ್ಟ. ನೀನೇನ್ನಾರ ಕೊಡದಿಲವೇನೊ ಸಿದ್ಧರಾಮ್ಯಯನಿಗೆ."

"ನಾನೇನು ಕೊಡ್ಲೊ ಉಗ್ರಿ. ತಾನೇ ಕಾಳು ತಿಂತಿದ್ಲಂತೆ, ಅಂತದರಲ್ಲಿ ವಾರಕೊಂದು ಹಂದಿ ಸಾಕಿದ್ಲಂತೆ, ಅಂಗೆ



ಈ ಹೋಟ್ಯಲ್ಲಿ ಬರೋ ಆದಾಯಕ್ಕೆ ನಾನು ಸಿದ್ಧರಾಮಯ್ಯನಿಗೆ ಸಹಾಯ ಮಾಡಂಗಿದ್ದನೆ?"

"ಸಿದ್ಧರಾಮಯ್ಯ ಇಂತೋರ ದುಡ್ಡ ಕಾಯ್ತಯಿದ್ದನೇನ್ಲ, ಅವುನಿಗೆ ಡಿ.ಕೆ. ಶಿವಕುಮಾರ, ಎಸ್ಸೆಂ ಕಿಸ್ನ ಅವುನಳಿಯ ಅವುರ್ಯಲ್ಲ ಬೇಕಾದೋಟು ಕೊಡ್ತರಂತೆ" ಎಂದು ಸೀರ ಮಹಾ ಕಂಡವನಂತೆ ಖಚಿತವಾಗಿ ಹೇಳುತ್ತಿರುವಾಗ ಕಾಣಿಸಿಕೊಂಡ ವಾಟಿಸ್ಸೆ, ರಾಗವಾಗಿ

"ಕೆಟ್ಟರಪ್ಪೊ ಕೆಟ್ಟರು ಬೋಳು ತಲೆ ಗೌಡರು.
ಮಕ್ಕಳು ಮರಿಗಳೆಂದು ಹಾಳುಬಿದ್ದು ಹೋದರು.
ಪ್ರಧಾನಿಯಾಗಿ ಬಂದ್ರು ಪಂಚಾತಿ ಮೆಂಬರು.
ಗಲ್ಲಿಗಲ್ಲಿ ತಿರುಗುತ್ತಾರೆ ಗಟ್ಟಿಮುದ್ದೆ ಹುಡುಕುತ್ತಾರೆ.
ಕೆಟ್ಟರಪ್ಪೊ ಕೆಟ್ಟರೂ ಬೋಳು ತಲೆ ಗೌಡರು.
ಯಂಗದ್ಯಕ್ಕ ಸಾಂಗು?" ಎಂದು ವಾಲಾಡಿದ.

"ಬಾಳ ಚನ್ನಾಗ್ಯದೆ. ಯಾರ್ಲ ಹೇಳಿಕೊಟ್ಟೋರು ನಿನಿಗೆ?"

"ಯಾರು ಹೇಳಿಕೊಡ್ತರಕ್ಕ. ಯರಡು ನೈನ್ಟ ಹಾ... ಒಬ್ಬ ರಾಜಕಾರಣಿ ಬಗ್ಗೆ ಯೋಚನೆ ಮಾಡಿದ್ರೆ ಪ... ತಾನಾಗೇ ಬತ್ತವೆ. ನಾನು ಟ್ರೈ ಮಾಡಿದ್ರೆ ವ... ಕವಿಯಾಯ್ತಿದ್ದೆ. ಏನು ಮಾಡ್ತಿ ಬರಿಯಕ್ಕೆ ಟೈಮಿಲ್ಲ."

"ಅದೇನಾರ ಆಗ್ಲಿ ಇಲ್ಲೇಳಿದಂಗೆ ಇನ್ನೆಲ್ಲಾರ ಹೇಳಕೊ... ದಿಯ. ಜೆಡಿಎಸ್‌ನೋರು ಕೈಕಾಲು ಮುರಿತರೆ."

"ಕೈಕಾಲು ಮುರಿಯಕ್ಕೆ ಅವೇನು ಪುಳ್ಳೆ ಸೌದೆಯ... ಕಣಕ್ಕ. ದಿಸೀಸ್ ಡೆಮಾಕ್ರಸಿ, ವಾಕ್ ಸ್ವಾತಂತ್ರ್ಯ ಅದ... ನಾನು ಪದ ಹೇಳದನ್ನ ಯಾರೂ ತಡಿಯಕ್ಯಾಗದಿಲ್ಲ."

"ನೀನಾಡಿದ ಪದ ಕುಮಾರಸ್ವಾಮಿಗೆ ಗೊತ್ತಾದ... ಪೊಲೀಸ್‌ನೋರಿಗೇಳಿ ವಳಿಕಾಕ್ಸಿ ವದುಸ್ತನೆ ಕಣೊ" ಎಂ... ಉಗ್ರಿ.

"ಏನೂ ಮಾಡಲ್ಲ ಕಣೊ, ಅವುನು ನನ್ನ ಬ್ರದ... ದ್ದಂಗೆ."

"ನೀನೇನೊ ಅವುನ್ನ ಬ್ರದರ್ರು ಅಂತಿ, ಅವುನ... ತಿಳಕಬೇಕಲ್ಲೋ? ಅವುರ ಚಿಗಪ್ಪನ ಮಕ್ಕಳನ್ನೇ ಬ್ರದರ... ಅನ್ನದೋನು ಇನ್ನ ನಿನ್ನ ಅಂತನೇನೊ?"

"ಅದು ನನಿಗೂ ಗೊತ್ತು ಕಣೊ; ಶ್ರೀಮಂ... ಬಡುವುರ ಸಮಂದವ ಯಾವತ್ತು ಹೇಳಿಕಳದಿಲ... ಬಡುವುರೆ ಪಾಪ ಆ ಕಾರ ಮಡಗಿರೋನು ನ... ಸಮಂದಿ, ಈ ತ್ವಾಟ ಮಡಗಿರೋನು ನನ್ನ ಸ್ವಾದ... ಮಾವ ಅಂತವೆ. ಅದೇನಾರ ಆಗ್ಲಿ ಒಂದು ಮೀನಿಂಗ್... ಲೆಸ್ ಚುನಾವಣೆಗೆ ಈ ದೇವೇಗೌಡ್ರು ಪಂಚೆ ಎತ್ತಿಗಂಡ... ತಿರಗದ ನೋಡಿದ್ರೆ, ಈತ ಕುಂತಿದ್ದು ಬಂದ ಪ್ರಧಾ... ಪೀಠಕ್ಕೆ ತುಂಬ ಅವುಮಾನ ಕಣೊ ಉಗ್ರಿ. ಇಟೀಸ... ಸೇಂ ಟು ಅವರ್ ಕಂಟ್ರಿ."

"ಅದ ದ್ಯಾವೇಗೌಡ ಯೋಚನೆ ಮಾಡಬೇಕು. ಅದಿ... ಶಿವಬಸಪ್ಪ ಗೆಲ್ತನೇನೊ?"

"ಗೆಲ್ಲಲಿ ಸೋಲಲಿ, ಆದ್ರೆ ಈ ದ್ಯಾವೇಗೌ... ಕ್ಯಾಂಡಿಡೇಟ್ ಸೆಲೆಕ್ಟ್ ಮಾಡದ್ರಲ್ಲಿ ಬ್ರಿಲಿಯಂಟು ಕಣೊ..."

"ಅಂಗಂತಿಯಾ?"

"ಎಸ್. ಶಿವಬಸಪ್ಪನ್ನ ನೋಡಿದ್ರೆ ದ್ಯಾವೇಗೌಡರಪ್ಪನಂ... ಕಾಣ್ತನೆ. ಯಾಕೇಳು?"

"ನೀನೇ ಹೇಳು?"

"ಈ ದ್ಯಾವೇಗೌಡ್ರಿಗೆ ಲಿಂಗಾಯಿತ್ರಲ್ಲಿ ಬರೀ ಮುದು... ಕಾಣ್ತರೆ. ಅವುರು ಗೆದ್ರು ಅಷ್ಟೆ, ಸೋತ್ರು ಅಷ್ಟೆ ಯತ್ತಿಲ್ದ... ಅತ್ಲೋರೆಯ. ಅದೇ ಮಹಿಮಾ ಪಟೇಲ್, ಗುರುಸ್ವಾಮಿ... ಮಾದೇವ ಪ್ರಸಾದ್ ಇಂತ ಯೂತ್ಸಾದ್ರೆ ತನ್ನ ಮಕ್ಕಳಿ... ಸವಾಲಾಗಬವುದು. ಯಂಗಿವೆ ಐಡಿಯಾ?" ಎಂದ... ವಾಟಿಸ್ಸೆ ಕಿಡಿಗೇಡಿಯಂತೆ ಕಣ್ಣು ಬಿಟ್ಟಾಗ ಯಾರು... ಉತ್ತರಿಸಲಿಲ್ಲ.

–ಬಿ. ಚಂದ್ರೇಗೌಡ


Zero Hour ಮುನ್ನಿ

1. 'ರಾಜ್ ಸಮಾಧಿ ಬಳಿ 'ಫುಟ್‌ಪಾತ್' ರೀಲು ಸುದ್ತೀನಿ' ಅಂತಾ ಅಬ್ಬರಿಸಿದನಲ್ಲ ಮಾ. ಕಿಶನ್ ತಂದೆ?
   - a) ಅದು ಆತನ childishness....
   - b) ಮಗನ ಬಾಲ್ಯಾವಸ್ಥೆಯನ್ನು ಕೊಲ್ಲುತ್ತಿರುವ ಆತನಿಗೆ ಮೊದಲು 'ಬಿಂಬ' ಸಿನಿಮಾ ತೋರಿಸಿ.
   - c) 'ರೀಲು ಸುದ್ತೀನಿ' ಅಂತಾ ರೀಲು ಬಿಟ್ಟನಷ್ಟೇ.
   - d) ಆತ ಏನಾದರಾಗ್ಲಿ, ಆ ಹುಡುಗನ ಭವಿಷ್ಯ ಕಿಲ್ ಮಾಡದಿರಲಿ.
2. 'ಎಲ್ಲಾ ಪೊಲೀಸ್ ಸ್ಟೇಷನ್‌ಗಳಲ್ಲೂ ನನ್ನ ಫೋಟೋ ಹಾಕಲೇಬೇಕು' ಎಂದು ಸಿಯಾಲ್ ಆರ್ಡರ್ ಮಾಡಿದ್ದಾನಂತೆ?
   - a) ಖಂಡಿತ ಹಾಕ್ಲೇಬೇಕು; ವಾಂಟೆಡ್ ಲಿಸ್ಟನಲ್ಲಿ...
   - b) ಗಾಂಧೀಜಿಯ ಪಕ್ಕವೇ ತನ್ನ ಫೋಟೋ ಇರ್ಬೇಕು ಅಂದಿಲ್ಲವಲ್ಲ
   - c) ಮಾತೆತ್ತಿದರೆ 'ಕಂಡಲ್ಲಿ ಗುಂಡು' ಎನ್ನುವ ಈ ಅಸಾಮಿ ಗುಂಡು ಹಾಕಿದಾಗ ಈ ಆರ್ಡರ್ ಮಾಡಿದೆ
   - d) ಬೆಂಗ್ಳೂರು ತುಂಬಾ ಆತನ ಪೋಸ್ಟರು ಹಾಕಿದರಾಯ್ತು ಬಿಡು
3. ಏನಾಗ್ತಿದೆ ಇಲ್ಲಿ?



   - a) ಇಬ್ಬರಿಗೂ ಗೆಲುವಿನ ಆಶೀರ್ವಾದ! ಬಪ್ಪರೇ ಪೇಜಾವರ!
   - b) ಸಿದ್ದು ಗೆಲ್ತಾನೊ, ಕುಮಾರಸ್ವಾಮಿ ಗೆಲ್ತಾನೊ.... ಸದ್ಯಕ್ಕೆ ಪೇಜಾವರ ಗೆದ್ದಿದ್ದಾನೆ!
   - c) ಬ್ರಾಹ್ಮಣನ ಕಿತಾಪತಿ, ಶೂದ್ರರ ಶರಣಾಗತಿ
   - d) ಆಶೀರ್ವಾದ ನೀಡಬೇಕಾದ ಮತದಾರ ಈ ಆಟ ನೋಡಿ ನಗ್ತಾನಷ್ಟೇ
4. 'ವಿಶೇಷ ಆರ್ಥಿಕ ವಲಯ' (SEZ) ಕುರಿತ ಈ ಹೇಳಿಕೆಗಳಲ್ಲಿ ಯಾವುದು ಸರಿ?
   - a) ಕೃಷಿಭೂಮಿಯನ್ನೆಲ್ಲ ಉದ್ಯಮಿಗಳ ಪಾದದಡಿ ಸಮರ್ಪಿಸುವುದು
   - b) ರೈತರು, ಆದಿವಾಸಿಗಳ ಹೆಣಗಳ ಮೇಲೆ ಟಾಟಾ, ಅಂಬಾನಿಗಳ ಅರಮನೆ ಕಟ್ಟುವುದು
   - c) ಸ್ವಲ್ಪೇ ದಿನ ತಡೆಯಿರಿ; ಪಾರ್ಲಿಮೆಂಟ್ ಭವನದಲ್ಲಿ ಐಟಿ ಕಂಪನಿ ಶುರುವಾಗ್ತಾವೆ
   - d) ಎಲ್ಲವೂ ಸರಿಯೇ

ಉತ್ತರಗಳು: 1)b 2)a 3)d 4)d



ಕಾಮ್ರೇಡು ನಾಗರಾಜ್‌ಗೆ,

ಅಯ್ಯಯ್ಯ ಏನಾಗೈತಿ ನಿಮ್ಗ.... ಭಜರಂಗಿ ಎದುರು ಫೈಟು ಮಾಡೋದ್ ಬಿಟ್ಟು ನಮ್ ಮ್ಯಾಲ ಸಿಟ್ಟಾಗ್ತಿರಲ್ಲ... ಇಪ್ಪತ್ತು ಸಾವಿರ ಜನರನ್ನ ಸಂಘಟಿಸೋದು ನಿಮ್ಮ ಕೈಲಿ ಆಗೋದಿಲ್ಲ ಅಂತಾ ಇಡೀ ಊರಿಗೆ ಗೊತ್ತೈತಿ.... ಸಂಘಟನೆ ಮಾಡೋರಿಗಾದ್ರು ಬಿಡ್ರಿ....

ಕೋಮುವಾದದ ವಿರುದ್ಧ ಹೋರಾಡಬೇಕಂದ್ರ ಬರೀ ನಾಸ್ತಿಕರಷ್ಟೇ ಇರ್ಬೇಕು ಅನ್ನೋ ಹೊಸ ಸೂತ್ರ ಯಾರು ಹೇಳಿಕೊಟ್ರು ನಿಮ್ಗ? ಅವ್ರು ಮನ್ಯಾಗ ಏನಾರಾ ಮಾಡಿಕೊಳ್ಳಿ... ಚೆಡ್ಡಿಗಳ ಸಿದ್ಧಾಂತ ವಿರೋಧ ಮಾಡ್ತಾರಲ್ಲ, ಅದು ಇಂಪಾರ್ಟೆಂಟು ಅಲ್ಲನ್ರಿ....

ಅಂದಂಗ ವೇದಿಕೆಯನ್ನು ನಕ್ಸಲರು ಹೈಜಾಕ್ ಮಾಡ್ಯಾರ ಅಂತಿರಲ್ಲ... ಭಜರಂಗಿ ಹೇಳೋ ಮಾತಿದು....

ಬದ್ಧತೆ, ಶ್ರಮ, ಇಚ್ಛಾಶಕ್ತಿ ಇಲ್ಲಂದ್ರ ಸಂಘಟನೆ ಮಾಡೋದು ಕಷ್ಟ ಅನ್ನೋದಕ್ಕ ನೀವೇ ಎಕ್ಸಾಂಪಲ್ಲು ನೋಡ್ರಿ.... ದಯವಿಟ್ಟು ನೀವು ಜಾಗ ಖಾಲಿ ಮಾಡಿ, ಯುವಕರಿಗೆ ಮುಂದ ಬಿಡ್ರಿ... ಆಗ ನಿಮ್ಗ ಫುಲ್ 'ಮಾರ್ಕ್ಸ್' ಸಿಗ್ತಾವು....

ಅಂದಂಗ, ನಿಮ್ಮ ಹೆಡ್‌ಆಫೀಸ್ ಇರೋ ಜಾಗ ಇನ್ಫೋಸಿಸ್‌ಗೆ ಬೇಕಂತ... ಯಾವಾಗ ಖಾಲಿ ಮಾಡ್ತೀರಿ ಕಾಮ್ರೆಡ್‌ರವರೆ...

–ಇತಿ ಮುನ್ನಿ
ಧಾರವಾಡ

ಒಂದು 'ಗಾದಿ' ಮಾತು

(ಚಾಮುಂಡೇಶ್ವರಿ ಎಲೆಕ್ಷನ್) ಸಿದ್ಧಾಂತ ಒಕ್ಕಾಲು, ಜಾತಿ ಮುಕ್ಕಾಲು!

ಸ್ವಾರ್ಥಿಗಳು ಇತರರನ್ನು ಪ್ರೀತಿಸಲಾಗುವುದಿಲ್ಲ; ಆದರೆ ಅವರಿಗೆ ತಮ್ಮನ್ನೂ ಪ್ರೀತಿಸಲಾಗುವುದಿಲ್ಲ

ಅವನತಿ: ಹೆಣ್ಣೆಷ್ಟು, ಗಂಡೆಷ್ಟು?

ಈತ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಮನುಷ್ಯ. ನನಗೆ ಆ ಹಳ್ಳಿಯಲ್ಲಿ ಈತನನ್ನು ಪರಿಚಯಿಸಿದಾಗ ಇವನು ತನ್ನ ಪುಟ್ಟ ಅಂಗಡಿಯಲ್ಲಿ ಕೂತಿದ್ದ. ನನ್ನ ಹೆಸರನ್ನೀತ ಕೇಳಿದಂತಿರಲಿಲ್ಲ. ಆದರೆ ನನಗೆ ಅದು ಮುಖ್ಯವಲ್ಲ. ಈತನ ಮನೆಯಲ್ಲಿ ನಮಗೆಲ್ಲ ಊಟದ ವ್ಯವಸ್ಥೆ ಮಾಡಿದ್ದರು. ಊಟಕ್ಕೆ ಮುಂಚೆ ಮಾತಾಡುವಾಗ ಈತ ತನ್ನ ಮೂವರು ಹೆಣ್ಣುಮಕ್ಕಳನ್ನು ಈಚೆಗೆ ಮದುವೆ ಮಾಡಿಕೊಟ್ಟಿದ್ದು ತಿಳಿಯಿತು. ಅರ್ಧ ವಿಷಾದ, ಅರ್ಧ ಹುಂಬತನದಿಂದ ಈತ ಒಬ್ಬೊಬ್ಬ ಅಳಿಯನಿಗೆ ಹತ್ತು ತೊಲ ಬಂಗಾರ, ಮೂವತ್ತು ಸಾವಿರ ನಗದು ಹಣ ಕೊಟ್ಟಿದ್ದಾಗಿ ಹೇಳಿದ. ಅದರ ಅನೀತಿಗಿಂತ ಹೆಚ್ಚಾಗಿ ಅಷ್ಟು ಹಣ ಎಲ್ಲಿ ಬಂತು ಎಂಬ ಕುತೂಹಲ ನನಗೆ; ಸ್ವಲ್ಪ ಜಮೀನು ಮಾರಿದ್ದ, ಕೂಡಿಟ್ಟ ಹಣ ಕೊಟ್ಟಿದ್ದ, ಸ್ವಲ್ಪ ಸಾಲ ಮಾಡಿದ್ದ. "ಮಾಯಕೊಂಡದಲ್ಲಿ ಅಧ್ಯಾಪಕನಾಗಿರುವ ಅಳಿಯನಿಗೇ ಹೆಚ್ಚು ಹೋಯಿತು" ಅಂದ ಈ ಮಾಜಿ ಸ್ವಾತಂತ್ರ್ಯ ಹೋರಾಟಗಾರ.

"ನೀವು ಹಾಗೆ ಹೇಳಬಾರದು ಅಲ್ವ- ಹೀಗೆ ಆತನಿಗೆ ವರದಕ್ಷಿಣೆ ಕೊಟ್ಟೆ ಅಂತ ಸಾರುತ್ತಾ ಹೋದರೆ ಅವನಿಗೆ ಮುಜುಗರ ಆಗಿ ನಿಮ್ಮ ಮಗಳಿಗೇ ತೊಂದರೆಯಾಗುತ್ತೆ" ಅಂದೆ.



"ಕೊಟ್ಟದ್ದೇ ನಿಜವಂತೆ, ಆಗಲಿ ಬಿಡಿ" ಅಂದ ಆತ ನಗುತ್ತಾ.


ಅವರ ಗೆಳೆಯ ಇದ್ದಕ್ಕಿದ್ದಂತೆ "ನಿಮಗೆಷ್ಟು ಜನ ಮಕ್ಕಳು?" ಅಂದ.

"ಮೂವರು" ಅಂದೆ.

"ಹೆಣ್ಣೆಷ್ಟು, ಗಂಡೆಷ್ಟು?" ಅಂದ.


ನಾನು ಯೋಚಿಸಿ, "ಹೇಳೋಲ್ಲ" ಅಂದೆ. ಅವರ ಉದ್ದೇಶ ನನಗೆ ಸ್ಪಷ್ಟವಾಗಿತ್ತು; ನಾನು ಕೂಡ ಎಷ್ಟು ಲಾಭದ, ಎಷ್ಟು ನಷ್ಟದ ಮಕ್ಕಳನ್ನು ಪಡೆದಿದ್ದೇನೆ ಎಂಬ ಪ್ರಶ್ನೆ ಅವರ ತಲೆಯಲ್ಲಿ. ನಾನು ಮುಂದುವರಿದು, "ನನಗೆ ಮೂವರೂ ಸಮಾನರು. ಅವರಿಂದ ನನಗೆ ಲಾಭವಾಗಲಿ, ನಷ್ಟವಾಗಲಿ ಇಲ್ಲ. ಹೀಗೆ ನೀವೂ ಯೋಚಿಸುವುದು ಕಷ್ಟವಾಗ್ತಿರಲಿಲ್ಲ, ಏನಾಗಿದೆ ನೋಡಿ, ನಿಮ್ಮ ಈ ಹಳ್ಳಿಗಳಲ್ಲಿ ಹೆಣ್ಣುಮಕ್ಕಳು ಓದುವುದೇ ಪಾಪವಾಗಿದೆ; ಆಕೆ ಸುಶಿಕ್ಷಿತಳಾದೊಡನೆ ಅವಳಿಗೆ ವಿದ್ಯಾವಂತ ಹುಡುಗರನ್ನು ತರಬೇಕು, ಆತ ನಿರುದ್ಯೋಗಿಯೋ ಬಡವನೋ ಆಗಿರುತ್ತಾನೆ, ಅವನಿಗೆ ವರದಕ್ಷಿಣೆ ಕೊಡಬೇಕು. ಓದಿದವಳಿಗೇ ತನ್ನ ಬದುಕನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯವಿಲ್ಲ, ಹುಡುಗರಾದೊಡನೆ ಓದು ಮುಗಿದೊಡನೆ ಉದ್ಯೋಗ ಹುಡುಕುತ್ತಾರೆ. ಹುಡುಗಿಯರಿಗಾಗಿ ವರನ ಶೋಧನೆ ಶುರುವಾಗುತ್ತೆ. ಆಕೆ ಕೂಡ ಓದುವಂತಿದ್ದರೆ, ಉದ್ಯೋಗ ಪಡೆಯುವಂತಿದ್ದರೆ, ಉದ್ಯೋಗಸ್ಥಳಾಗಿ ನಿಮ್ಮಿಂದ ದೂರ ಕೂಡ ಹೋಗಿ ಬದುಕುವ, ತನ್ನವನನ್ನು ಕಂಡು ತಿಳಿದು ವರಿಸುವ ಅವಕಾಶವಿದ್ದಿದ್ದರೆ-ಹೇಗಿರುತ್ತಿತ್ತು! ಈಗಿರುವಂತೆ ನಿಮ್ಮೂರ ಅಂಗನವಾಡಿ ಮೇಡಂ ಕೂಡ ನೆಮ್ಮದಿಯಾಗಿರುವುದಿಲ್ಲ, ಉದ್ಯೋಗಸ್ಥ ಮಹಿಳೆಯರ ರಕ್ಷಣೆ, ವಾಸ, ಉದ್ಯೋಗ ಯಾವುದೂ ನಿಮಗೆ ಅಗತ್ಯವೆನ್ನಿಸಿಲ್ಲ."

ಇಲ್ಲಿಯ ದುರಂತವೆಂದರೆ, ಗಾಂಧೀಜಿ ಸ್ವಾತಂತ್ರ್ಯ ಸಂಗ್ರಾಮವನ್ನು ವರದಕ್ಷಿಣೆ, ಹಿಂಸೆ, ಅವಿದ್ಯೆಯಿಂದ ಬಿಡುಗಡೆಯ ಸಂಗ್ರಾಮವೆಂದು ಕೂಡ ತಿಳಿದಿದ್ದರು. ಇಲ್ಲಿ ಗಾಂಧೀಜಿಯ ಅನುಯಾಯಿಯೇ ನಾಶವಾಗುತ್ತ ಹೋಗಿ ವರದಕ್ಷಿಣೆ, ಕಿರಾಣಿ ಅಂಗಡಿ, ಹಳ್ಳಿಯ ವ್ಯಾಜ್ಯಗಳಲ್ಲಿ ಮುಳುಗಿದ್ದ. ಅಷ್ಟೇ ಕ್ರೂರವಾದ ಇನ್ನೊಂದು ವಿಷಯ ಇವರೆಲ್ಲರ ಮನಸ್ಸಿನಲ್ಲಿತ್ತು. ಹುಡುಗಿ ಓದಿ ಉದ್ಯೋಗಸ್ಥೆಯಾಗಿ ಸ್ವತಂತ್ರಳಾದರೆ ಆಕೆ ಬೇರೆ ಜಾತಿಯವರನ್ನು ಮದುವೆಯಾಗುವಂತಾದರೆ? ತಮ್ಮ ಜಾತಿ ಕೆಟ್ಟುಹೋದರೆ? ಈ ಸಣ್ಣ ಭಯ ಕೂಡ ಅವರಲ್ಲಿತ್ತು. ಗುಮಾಸ್ತನಾಗಲು ಪುಢಾರಿಯ ಬೆನ್ನು ಹತ್ತಿದ ಮೂರ್ಖನ ಬೆಲೆ ಕೂಡ ಹತ್ತು ತೊಲ ಬಂಗಾರ, ಮೂವತ್ತು ಸಾವಿರ ಆಗಿತ್ತು. ●




ಆಗಸ್ಟ್ 28, 1988

ಒಂದು ಚುಟುಕ



ಗೊರ್‌ಬಚೋವ್, ರೊನಾಲ್ಡ್ ರೇಗನ್ ಮತ್ತು ರಾಜೀವ್‌ಗಾಂಧಿ ತಮ್ಮ ತಮ್ಮ ರಾಷ್ಟ್ರಗಳು ಎಂದು ಜಗತ್ತಿನ ಪರಮಶ್ರೇಷ್ಠ ರಾಷ್ಟ್ರಗಳಾಗುತ್ತವೆ ಎಂದು ಕೇಳಲು ದೇವರನ್ನು ಒಂದು ದಿನ ಭೇಟಿಯಾದರು.


"ದೇವರೇ, ಎಂದು ನನ್ನ ರಾಷ್ಟ್ರ ಅತ್ಯುತ್ತಮ ರಾಷ್ಟ್ರವಾಗುತ್ತದೆ?" ಎಂದು ಗೊರ್‌ಬಚೋವ್ ಕೇಳಿದ.



"ಇನ್ನು ಎಪ್ಪತ್ತೈದು ವರ್ಷಗಳಲ್ಲಿ" ಎಂದು ದೇವರು ಹೇಳಿದೊಡನೆ ಗೊರ್‌ಬಚೋವ್ "ಅಯ್ಯೋ, ಅದನ್ನು ನೋಡಲು ನಾನು ಆಗ ಬದುಕಿರುವುದಿಲ್ಲ!" ಎಂದು ಪರಿತಪಿಸಿದ.

ರೇಗನ್ "ನನ್ನ ರಾಷ್ಟ್ರ ಎಂದು ಅತ್ಯುನ್ನತ ರಾಷ್ಟ್ರವಾಗುತ್ತದೆ?" ಅಂದ.

"ಇನ್ನು ಇಪ್ಪತ್ತೈದು ವರ್ಷಗಳಲ್ಲಿ" ಎಂದು ದೇವರು ಹೇಳಿದ.




"ಅಯ್ಯೋ, ವೃದ್ಧನಾದ ನಾನು ಆಗ ಇರುವುದಿಲ್ಲವಲ್ಲ!" ಎಂದು ರೇಗನ್ ಅತ್ತ.

ರಾಜೀವ್, "ಸ್ವಾಮಿ, ನನ್ನ ಭಾರತ ಎಂದು ಮಹೋನ್ನತ ರಾಷ್ಟ್ರವಾಗಬಹುದು?" ಎಂದು ಕೇಳಿದ.

ದೇವರು ಕ್ಷಣ ಯೋಚಿಸಿ ಹೇಳಿದ, "ಆಗ ನಾನೇ ಬದುಕಿರುವುದಿಲ್ಲ." ●

ಅಪ್ಪ ಮಗನ ರಾಜಕೀಯ ಚದುರಂಗ ಇನ್ನೆಷ್ಟು ದಿನ?



ಡಿ.ಎಲ್. ನಾಗರಾಜ್, ಹರಪನಹಳ್ಳಿ
ನಿಸ್ವಾರ್ಥ ಸೇವೆಗೆ ಉಡುಗೊರೆ?
* ನಮ್ಮ ಜನಸಂಖ್ಯೆ.

ಮಂಚಾಲಿ ಗುರುರಾಜಚಾರು, ಬಳ್ಳಾರಿ
ಹೆಣ್ಣಿನ ಬಾಯಲ್ಲಿ ಗುಟ್ಟು ನಿಲ್ಲುವುದಿಲ್ಲವಂತೆ, ರಾಜಕೀಯ ನಾಯಕ ಬಾಯಲ್ಲಿ?
* ವಿರೋಧ ಪಕ್ಷದವರ ಗುಟ್ಟೆಲ್ಲಾ ರಟ್ಟು.

ಬಿ.ಚಂದ್ರೇಗೌಡ, ಬೆಂಗಳೂರು
ದೇವೇಗೌಡರು ಒಂದು ಸಿನಿಮಾ ನಿರ್ಮಿಸಿದರೆ ಏನೆಂದು ಹೆಸರಿಡಬಹುದು?
* ಸಧ್ಯಕ್ಕೆ 'ಚಾಮುಂಡೇಶ್ವರಿ ಮಹಿಮೆ'.

ಬಸವರಾಜ್ ಬೆಸ್ತರ್, ಗುಲ್ಬರ್ಗಾ
ನನಗೆ ರಾಜಕೀಯ ಗೊತ್ತಿಲ್ಲ ಎಂದು ಹೇಳುತ್ತಿದ್ದಾನಲ್ಲ ಅಂಬರೀಶ್?
* 'ಈಗಲಾದರೂ ತಿಳ್ಕೊ ಮಗನೆ' ಎನ್ನೋಣವೇ.

ದಿ.ಎಲ್. ಚಂದ್ರಿಕ, ಹರಪನಹಳ್ಳಿ
ಸಿಎಂ ಪುತ್ರನಿಂದಲೆ ದಾಂಧಲೆಯಾದರೆ?
* ಪೊಲೀಸರ ಮಾನ ಹರಾಜು.

ಕೆ.ಶ್ರೀನಿವಾಸ್, ಮಂಡ್ಯ
ಪಕ್ಷಾಂತರಕ್ಕೂ, ಮತಾಂತರಕ್ಕೂ ವ್ಯತ್ಯಾಸವೇನು?
* ಆಯಾ ರಾಮ್‌ಗೂ, ಬಸ್‌ಗಯಾ ರಹೀಮನಿಗೂ ಇರುವಷ್ಟೇ ವ್ಯತ್ಯಾಸ.

ರಾಮಚಂದ್ರ ಕೊಪ್ಪಲು, ತೀರ್ಥಹಳ್ಳಿ
ವಿಧಾನಸೌಧದ ಹತ್ತಿರ ಹೋದ್ರೆ ಎರಡು ಕಿವಿಗೂ 'ಹೂ' ಇಡ್ತಾರಂತೆ?
* ಕುಮಾರ ಬಂದ ಮೇಲೆ ಕಿವಿ ಮಾತ್ರವಲ್ಲ, ತಿ-ಕ್ಕೂ ಮು-ಕ್ಕೂ ಇಡುತ್ತಿದ್ದಾರೆ ಗೊತ್ತಾ.

ಬಸವರಾಜ ಹೂಗಾರ್, ಸವದತ್ತಿ
ಹೆಂಡತಿಗೂ ಅಯಸ್ಕಾಂತಕ್ಕೂ ಇರುವ ವ್ಯತ್ಯಾಸವೇನು?
* ಹೆಂಡತಿ ಕಬ್ಬಿಣಕ್ಕೆ ಸ್ಪಂದಿಸುವುದಿಲ್ಲ.

ಎಂ.ಎಸ್. ಪಾರ್ವತಿ, ಕುಮಟಾ
ಕನ್ನಡ boy, English ಹುಡುಗಿ ಜೋಡಿ ಹೇಗಿರುತ್ತೆ?
* "ಏನ್ ya!?"ನಂತಿರುತ್ತೆ.

ಎಂ.ಎನ್. ವಿನಯ್, ಕುಮಟಾ
ಕೋಮುವಾದ ಅಣುಬಾಂಬ್‌ಗಿಂತ ಹೆಚ್ಚು ಡೇಂಜರಂತೆ ಹೌದಾ?
* ಬಾಂಬ್ cancer ಆದರೆ, ಕೋಮುವಾದ AIDS ಇದ್ದಂತೆ.

ಎಚ್.ಸಿ. ಭಾಗ್ಯಕುಮಾರ್, ಬೆಂಗಳೂರು
ಹಗಲಿನ ಹಾಗೂ ಇರುಳಿನ Zero Hourಗೆ ಏನು ವ್ಯತ್ಯಾಸ?
* ವಾಟಿಸ್ಸೆ ಪ್ರಕಾರ ಆಗ ನೆರಳಿರಲ್ಲ, ಈಗ ನೆದಿರೇ ಇರಲ್ಲ.

ಎಂ. ಮಂಜುಳಾ, ಸಿದ್ದರಾಜು
ದೇವೇಗೌಡ್ರು ಪಿಎಂ ಆದ್ರು, ಮಗನನ್ನು ಸಿಎಂ ಮಾಡಿದ್ರು, ಮೊಮ್ಮಗನನ್ನು?
* ನಿಖಿಲ್ ಕರ್ನಾಟಕದ ರಣಧೀರ ಕಂಠೀರವ ಆಗುತ್ತಾನೆಂಬ ಭ್ರಮೆ, ಪಾಪ.

ಓದು ಸಿದ್ದೇಗೌಡ, ಕಬ್ಬೇಹಳ್ಳಿ
ಕವಿತಾ 'ಮಾತಿನಮಲ್ಲಿ'ಯಾದರೆ ಗೌರಿ?
* ಹೃದಯ ಮಿಡಿತ.

ಅಕ್ಬರ್ ಸಿ. ಕಾಲಿಮಿರ್ಚಿ, ಭಾಗ್ಯನಗರ
'ಬಂ' ಹಾಗೂ ಸಮಾಜವಾದಿ ಪಕ್ಷಕ್ಕೆ ಭವಿಷ್ಯ ಇದೆಯೆ?
* ಇದೆ, ಸ್ಟ್ಯಾಂಡ್ ಹಾಕಿಕೊಂಡು ಸೈಕಲ್ ತುಳಿಯೋದು.

ದಿ.ವೆಂಕಟೇಶ್, ದೇವದುರ್ಗ
ಗಂಡಸರು ಕುಸ್ತಿ ಆಡೋದಕ್ಕೆ ಮುಂಚೆ ತೊಡೆ ತಟ್ತಾರೆ, ಹೆಂಗಸರು?
* ಮಸೆಯೋದಕ್ಕೆ ಹಲ್ಲಿರುವಾಗ ಇನ್ನೇನು ಬೇಕು.

ಆ.ರಾ. ಮಂಜುನಾಥ, ಗೆದರೆ
ಇಂದಿನ ಹುಡ್ಗಿಯರ್ಗೂ ಅಂಟಿಯರ್ಗೂ ಇರೋ ವ್ಯತ್ಯಾಸ?
* ಇಂದಿನ ಹುಡುಗಿಯರು ನಾಳಿನ ಅಂಟಿಯರು ಅಷ್ಟೇ.

ದಿ.ಎಲ್.ಚಂದ್ರಿಕ, ಹರಪನಹಳ್ಳಿ
ಸದ್ದಾಂಗೆ ಮರಣದಂಡನೆ, ಜಾರ್ಜ್ ಬುಷ್‌ಗೆ?
* ಚರಮಗೀತೆ.

ಸಾಬಿಯಾ ಬೇಗಂ, ದೇವದುರ್ಗ
ಹೆಂಗಸರ ಬುದ್ಧಿ ಮಣ್‌ಕಾಲ್ ಕೆಳಗೆ, ಗಂಡಸರ ಬುದ್ಧಿ?
* ಮಣ್‌ಕಾಲ್‌ಗಳ ನಡುವೆ.

ಜೆ.ಎ. ಖಲಂದರ್ ಅಜೀಜ್, ಜಾವಗಲ್
ಚೆಡ್ಡಿಗಳಿಗೆ ಬುದ್ಧಿ ಬರುವುದೆಂದು?
* ಎಲ್ಲರೂ ಸೇರಿ ಅವರ ಚೆಡ್ಡಿ ಕಳಚಿದಾಗ.


ಕವಿತಾ ಮಧುಸೂದನ, ದಾವಣಗೆರೆ
ಕುಮಾರಸ್ವಾಮಿ ಅಧಿಕಾರ ಗಿಟ್ಟಿಸಲು ರೆಸಾರ್ಟ್-ಬೀಚ್ ಸುತ್ತಿದ್ದಾಯ್ತು. ಇದೀಗ ದೇವಸ್ಥಾನಗಳಿಗೆ ಲಗ್ಗೆ ಹಾಕುತ್ತಿರುವುದೇಕೆ?
* ರೆಸಾರ್ಟ್‌ಗಳಲ್ಲಿ ಶಾಸಕರಿಗೆ ತಿನ್ನಿಸಿದ್ದನ್ನೇ ದೇವಸ್ಥಾನಗಳಲ್ಲಿ ಪೂಜಾರಿಗಳಿಗೆ ತಿನ್ನಿಸುತ್ತಿದ್ದಾರೆ.

ಎಂ. ಶ್ರೀಧರ ಮಿರ್ಜಾನ, ಕುಮಟಾ
ಅಪ್ಪ ಮಗನ ರಾಜಕೀಯ ಚದುರಂಗ ಇನ್ನೆಷ್ಟು ದಿನ?
* ಮೆಟ್ಟಿಲಲ್ಲಿ ಮುಗ್ಗರಿಸುವ ತನಕ ಎಂಬುದೇ ಬೇಸರದ ಸಂಗತಿ.

ಬಹುಮಾನಿತ ಪ್ರಶ್ನೆ

ಛೀ ತುಂಟಿ!

ರಾತ್ರಿ ಎಷ್ಟು ಹೊತ್ತಾದರೂ ಗಂಡ, ಹೆಂಡತಿ ಜೋರಾಗಿ ಜಗಳವಾಡುತ್ತಿದ್ದರು. ಇದು ಪಕ್ಕದ ಮನೆಯ ಸುಬ್ಬನ ತಲೆ ಬಿಸಿ ಮಾಡಿತ್ತು. ಅವರ ಜಗಳವನ್ನು ಹೇಗೆ ನಿಲ್ಲಿಸಬೇಕೆಂದು ಸುಬ್ಬು ಚಿಂತಿಸುತ್ತಿರುವಾಗಲೇ ಉದ್ರೇಕಗೊಂಡಿದ್ದ ಗಂಡ "ನಿನ್ನನ್ನು ಎರಡು ತುಂಡಾಗಿ ಕೊಚ್ಚಿಹಾಕುತ್ತೇನೆ" ಎಂದು ಹೆಂಡತಿಯ ವಿರುದ್ಧ ಗುಡುಗಿದ.



ತಕ್ಷಣವೇ ಸುಬ್ಬು "ದಯವಿಟ್ಟು, ಕೆಳಗಿನ ತುಂಡನ್ನು ನನಗೆ ಕೊಡು" ಎಂದು ಜೋರಾಗಿ ಅರಚಿದ.

ಗಂಡ-ಹೆಂಡಿರ ಜಗಳ ಇದ್ದಕ್ಕಿದ್ದಂತೆ ನಿಂತಿತು!

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ಚಾಮುಂಡೇಶ್ವರಿ ಧರ್ಮಯುದ್ಧದಲ್ಲಿ ಅಪಹರಿಸಲ್ಪಟ್ಟ ಸೀತೆ ಯಾರು?

ನವೆಂಬರ್ 22ರ ಸಂಚಿಕೆಯ ನಮ್ಮ ಪ್ರಶ್ನೆ: ಕುವೆಂಪುರವರು ರೈತರೇ ಅನ್ನದಾತರೆನ್ನುತ್ತಾರೆ. ದ್ವಾರಕೀಶ್‌ರವರು ಚಿತ್ರ ನಿರ್ಮಾಪಕರೇ ಅನ್ನದಾತರೆನ್ನುತ್ತಾರೆ. ನೀವೇನಂತೀರಿ?


ನಿಮ್ಮ ಉತ್ತರ: ಅವರವರ ಎತ್ತರಕ್ಕೆ ತಕ್ಕಂತಹ ಮಾತುಗಳು ಬಿಡಿ.

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಎಚ್.ಸಿ. ಭಾಗ್ಯಕುಮಾರ್, ಬೆಂಗಳೂರು

ಸ್ವಾರ್ಥ ಎಂಬುದು ವ್ಯಕ್ತಿಯ ಇಚ್ಛೆಯಂತೆ ಬದುಕುವುದಲ್ಲ; ಅದು ಇತರರು ತಾನು ಬಯಸಿದಂತೆಯೇ ಬದುಕಬೇಕು ಎಂಬುದು -ಆಸ್ಕರ್ ವೈಲ್ಡ್

ಕೆಪಿಎಸ್‌ಸಿ

ಒಕ್ಕಲಿಗರಿಗೇ ಎಲ್ಲಾ ಹುದ್ದೆ!


ಕೃಷ್ಣ

ಇದು ಕೆಪಿಎಸ್‌ಸಿ ಅಧ್ಯಕ್ಷ ಡಾ. ಎಚ್.ಎನ್. ಕೃಷ್ಣನ ಕರ್ಮಕಾಂಡ.

ಜನವರಿ 7 ಕ್ಕೆ ರಿಟೈರ್ಡ್ ಆಗುವ ಮುನ್ನ ಮತ್ತೊಂದು ಕೆಎಎಸ್ ಬ್ಯಾಚ್ ನೇಮಕಾತಿ ಮಾಡಿಕೊಂಡು ಕೊಳ್ಳೆ ಹೊಡೆಯಲು ರೆಡಿಯಾಗಿರುವ ಈ ಪುಣ್ಯಾತ್ಮ, ಅನರ್ಹ ಒಕ್ಕಲಿಗರ ಅಭ್ಯರ್ಥಿಗಳನ್ನು ಅದ್ವೇಗೆ ಅಧಿಕಾರಿಗಳನ್ನಾಗಿ ಮಾಡಿದ ಎಂಬುದರ ವಿವರಗಳು ಬೆಚ್ಚಿ ಬೀಳಿಸುವಂತಿವೆ.

ಸಾವಿರಾರು 3A ಕೆಟಗರಿಯ ಒಕ್ಕಲಿಗರನ್ನು ಎಲ್ಲ ನಿಯಮ ಉಲ್ಲಂಘಿಸಿ ಕೆಎಎಸ್ ಆಫೀಸರ್ಸ್ ಮಾಡಿದ್ದಾನೆ ಈ ಕೃಷ್ಣ. ಭ್ರಷ್ಟತೆ, ಜಾತೀಯತೆಗಳ ಸಂಗಮದಂತಿರುವ ಈತ ಹೈಕೋರ್ಟ್‌ಗೂ ಸುಳ್ಳು ಹೇಳಬಲ್ಲ; ಜನರಲ್ ಕೆಟಗರಿಯಲ್ಲಿ ಆಯ್ಕೆಯಾಗಲು ಸಮರ್ಥರಲ್ಲದ ಒಕ್ಕಲಿಗರನ್ನು 3A ಕೆಟಗರಿಗೆ ತಂದು ಹುದ್ದೆ ನೀಡಬಲ್ಲ; ಜಾತಿ ಸಿಂಧುತ್ವ ಪ್ರಮಾಣಪತ್ರವನ್ನು ಕೆಲಸಕ್ಕೆ ಸೇರಿದ ನಂತರ ಕೊಟ್ಟರೂ ಓ.ಕೆ. ಎನ್ನಬಲ್ಲ.... ಆದರೆ ಅದು 3A ಕೆಟಗರಿ ಆಗಿರಬೇಕಷ್ಟೇ. DPAR ನಿಯಮವನ್ನೇ ಕಾಲಕಸ ಎನ್ನುವ ಈತ ಇಂಟರ್‌ವ್ಯೂಗೆ 90 ರ ಬದಲಾಗಿ 200 ಅಂಕ ನಿಗದಿ ಮಾಡಬಲ್ಲ.... ತನಗೆ ಬೇಕಾದ 3A ಕೆಟಗರಿಯವರಿಗೆ ಧಾರಾಳ ಅಂಕ ನೀಡಲು ಹಿಂದೇಟು ಹಾಕಲಾರ... ಒಕ್ಕಲಿಗ ಅಭ್ಯರ್ಥಿಗಳನ್ನೇ ಏಜಂಟರನ್ನಾಗಿ ಮಾಡಿಕೊಂಡು ಡೀಲು ಕುದುರಿಸಬಲ್ಲ! ಇಡೀ ಆಡಳಿತಯಂತ್ರವೇ ಒಕ್ಕಲಿಗರ ಆಧೀನದಲ್ಲಿರಬೇಕು ಎನ್ನುವ ಈ ಭ್ರಷ್ಟ ಜಾತಿವಾದಿಯಿಂದ ಕರ್ನಾಟಕದ ಲಕ್ಷಾಂತರ ಅರ್ಹ ಯುವಕರ ಕನಸುಗಳು ನುಚ್ಚುನೂರಾಗಿವೆ. ಬದುಕೇ ಮೂರಾಬಟ್ಟೆಯಾಗಿ ಹೋಗಿದೆ.

ರಾಜ್ಯದಲ್ಲಿ ಕೋ-ಜಾ ಸರ್ಕಾರ ಬಂದ ಮೇಲಂತೂ ಎಚ್.ಎನ್. ಕೃಷ್ಣ ತನ್ನ 'ಒಕ್ಕಲಿಗ ರಿಕ್ರೂಟ್‌ಮೆಂಟ್ ರ‍್ಯಾಲಿ'ಯನ್ನು ಜೋರಾಗಿಯೇ ನಡೆಸುತ್ತಿದ್ದಾನೆ. ಕುಮಾರಸ್ವಾಮಿ ಎಂಬ ಹುಂಬ ಒಕ್ಕಲಿಗನೇ ಸಿ.ಎಂ. ಆಗಿರುವಾಗ ಕೃಷ್ಣನನ್ನು ತಡೆಯುವವರ‍್ಯಾರು? ಇಂತಹ ಪುಣ್ಯಾತ್ಮ ಇದೀಗ ಡಿಸೆಂಬರ್ 9 ರಂದು ಕೆಎಎಸ್ ಮೇನ್ಸ್ ನಡೆಸಿ ಮತ್ತೊಂದು ಲೂಟಿಗೆ ತಯಾರಾಗಿದ್ದಾನೆ. ಇಂತಹ ಪರಮ ಭ್ರಷ್ಟ, 'ಒಕ್ಕಲಿಗ ಉದ್ಧಾರಕ'ನನ್ನು ದೇವೇಗೌಡರು ಮರೆಯುವುದುಂಟೆ? ಅವರೀಗಾಗಲೇ ಈತನಿಗೆ ಎಂಎಲ್‌ಸಿ ಪೋಸ್ಟ್ ಕೊಡುವ ಭರವಸೆ ನೀಡಿದ್ದಾರೆ.


ಕೃಷ್ಣನ ಈ ಕತೆಯ ಹಿಂದೆ ಗೌಡರ ರಾಜಪರಿವಾರದ ಜಾತಿವಾದದ ನೆರಳೂ ಇದೆ.

ಹೋಗಲಿ, ವಿರೋಧ ಪಕ್ಷಗಳು ಏನು ಮಾಡುತ್ತಿವೆ? ಕೆಪಿಎಸ್‌ಸಿ ಎಂಬುದು ಭ್ರಷ್ಟ ಗಂಗೋತ್ರಿ ಎಂಬುದು ಜಗಜ್ಜಾಹೀರಾದರೂ ವಿರೋಧ ಪಕ್ಷದ ನಾಯಕರು ಸುಮ್ಮನಿರುವುದೇಕೆ? ಈಗಲೂ ಕಾಲ ಮಿಂಚಿಲ್ಲ-ಕೃಷ್ಣನ ಅಧ್ವಾನಗಳಿಗೆ ಬ್ರೇಕ್ ಹಾಕಲು.

ಫೋರ್ ಪಾಯಿಂಟ್ ಪ್ರೋಗ್ರಾಮ್!

ಇದು ಒಕ್ಕಲಿಗ ಉದ್ಯೋಗ ಖಾತರಿ ಯೋಜನೆ! ಭ್ರಷ್ಟ, ಜಾತಿವಾದಿ ಎಂದಷ್ಟೇ ಬರೆದುಬಿಟ್ಟರೆ ಈ ಕೃಷ್ಣನಿಗೆ 'ಅನ್ಯಾಯ' ಮಾಡಿದಂತಾಗುತ್ತದೆ. ಈತ ಅದ್ವೇಗೆ ತನ್ನ ಕಾರ್ಯವಿಧಾನ (modus operandi) ರೂಪಿಸಿಕೊಂಡಿದ್ದಾನೆ ಎಂಬುದನ್ನು ದಾಖಲೆಗಳ ಸಮೇತ ವಿವರಿಸಿದಾಗಲೇ 'ಕೃಷ್ಣಾಧ್ಯಾಯ' ಪೂರ್ತಿ ಆಗೋದು.

ಈತನದು: ಫೋರ್ ಪಾಯಿಂಟ್ ಪ್ರೋಗ್ರಾಮ್!


ಪರೀಕ್ಷೆ ಪಾಸಾದರೇನು? ದುಡ್ಡು-ಜಾತಿ ಇದ್ದರೆ ಕೆಲಸ!

1. ಅಭ್ಯರ್ಥಿತನ (candidature) ವನ್ನೇ ಮ್ಯಾನಿಪುಲೇಟ್ ಮಾಡುವುದು!

ಬೆಂಗಳೂರು ಹೆಬ್ಬಾಳದ ನಿವಾಸಿ ಯೋಗಾನಂದ ಎಚ್.ಎನ್. ಕೃಷ್ಣಾಶೀರ್ವಾದದಿಂದ 'ಕ್ಲಾಸ್ 2' ಆಫೀಸರ್ ಆದ ಕತೆಯಿದು. ಹಾಗೆ ನೋಡಿದರೆ ಯೋಗಾನಂದನಿಗೆ ಇನ್ನೂ ಒಳ್ಳೆ ಪೋಸ್ಟ್ ಸಿಗಬೇಕಿತ್ತು! ಆತ 3A ಕೆಟಗರಿಯಿಂದ ದೊಡ್ಡ ಆಫೀಸರ್ ಆಗುವ 'ಅರ್ಹತೆ'(?) ಹೊಂದಿದ್ದ. ಆದರೆ ಎಚ್.ಎನ್. ಕೃಷ್ಣ ಆತನನ್ನು ಜಿ.ಎಮ್. ಕ್ಯಾಟಗರಿಗೆ ತಂದು ಹಾಕಿ ಕ್ಲಾಸ್ 2 ಆಫೀಸರ್ ಮಾಡಿದ್ದಾನೆ.

2001 ರ ಪ್ರಾವಿಷನಲ್ ಲಿಸ್ಟ್‌ನಲ್ಲಿ 3A

ಪಿ.ಕೆ. ಮಲ್ಲನಗೌಡರ್

ಕೆಟಗರಿ ಆಗಿದ್ದ ಯೋಗಾನಂದ 2006 ರ ಲಿಸ್ಟ್‌ನಲ್ಲಿ ಜಿ.ಎಮ್. ಕೆಟಗರಿಗೆ ಸೇರಿದ್ದ! ಇದೇ ಕೃಷ್ಣನ ಮ್ಯಾನಿಪುಲೇಷನ್! ಯೋಗಾನಂದನನ್ನು 3A ಕೆಟಗರಿಯಿಂದ ಆಯ್ಕೆ ಮಾಡದೇ, ಜಿ.ಎಮ್.ನಿಂದ ಆಯ್ಕೆ ಮಾಡುವುದರಿಂದ, 3A ಕೆಟಗರಿಯಿಂದ ಇನ್ನೊಬ್ಬ ಒಕ್ಕಲಿಗರನ್ನು ಆಯ್ಕೆ ಮಾಡಬಹುದು! ಅಂದರೆ ಜಿ.ಎಮ್. ಸೀಟೂ ಕಬಳಿಕೆ, 3A ಸೀಟೂ ಕಬಳಿಕೆ.

ಅಂದಂತೆ ನಿಯಮಗಳ ಪ್ರಕಾರ ಪೂರ್ವಭಾವಿ ಪರೀಕ್ಷೆಗೆ ಅರ್ಜಿ ತುಂಬುವಾಗ ಯಾವ ಕೆಟಗರಿ ಇರುತ್ತೋ ಅದರಲ್ಲೇ ಆಯ್ಕೆ ನಡೆಯಬೇಕು. ಆದರೆ ಇಲ್ಲಿ 3A ಕೆಟಗರಿ ಮೇನ್ಸ್ ಪರೀಕ್ಷೆಯ ಹ... ಜಿ.ಎಮ್. ಆಗಿಬಿಡುತ್ತದೆ! ಇದಕ್ಕಿಂತಾ ವಂಚನೆ ಬ...

ಇಲ್ಲಿ ಕೃಷ್ಣನಿಂದ ಲಾಭ ಪಡೆದಿರುವುದರಿಂ... ಅಲ್ಲವೆ ಯೋಗಾನಂದ ಉನ್ನತ ಹುದ್ದೆ ಬದಲು 2 ಹುದ್ದೆಗೆ ಒಪ್ಪಿಕೊಳ್ಳುವುದು? ಈ ರೀತಿ ಕೆಟಗರಿಗಳನ್ನೇ ಬದಲಿಸಿ ಮಾಡಿದ ಅಪರಾ ತಪ... ಸಂಖ್ಯೆ ಎಷ್ಟು? ನಮಗೆ ಸಿಕ್ಕ ಅಧಿಕೃತ ಮಾಹಿ... ಪ್ರಕಾರವೇ 20 ಕ್ಕೂ ಹೆಚ್ಚು! 3A, 3B, 2A ... ಕೊನೆಯಲ್ಲಿ ಜಿ.ಎಮ್. ಆಗಿರ‍್ತಾರೆ!

2. ಪುಶ್-ಪುಲ್ ಮೆಥಡ್!

ಇದು ಒಕ್ಕಲಿಗರಿಗಾಗಿಯೇ ರೂಪಿಸಿದ ವಿ... ಯೋಜನೆ. 1998 ರ ಪರೀಕ್ಷೆಯ ಲಿಸ್ಟ್‌ನಲ್ಲಿ... ಒಕ್ಕಲಿಗರನ್ನು 3A ಕೋಟಾದಿಂದ ಜಿ.ಎಮ್.ಗೆ ... ಮಾಡಲಾಗಿದೆ! ಇನ್ನೂ 34 ಒಕ್ಕಲಿಗರಿಗೆ 3A ಕೋ...ದಲ್ಲಿ ಅವಕಾಶ ನೀಡಲೆಂದು ಈ ಅಕ್ರಮ ಮೆ... ರೂಪಿಸಿದ್ದಾರೆ.

ಇನ್ನು ಪುಲ್ ಮೆಥಡ್ ಹೇಗಿರುತ್ತದೆ? ಜಿ.ಎ... ಕೆಟಗರಿಯಲ್ಲಿ ಆಯ್ಕೆಯಾಗಲು ಅಸಮರ್ಥ... ಒಕ್ಕಲಿಗರನ್ನು 3A ಕೆಟಗರಿಗೆ ಪುಲ್ ಮಾಡಿ ... ನೀಡುವುದು. ನಂತರ ನಕಲಿ ಸಿಂಧುತ್ವ ಪ್ರಮಾಣ... ಪಡೆದು ತಿಪ್ಪೆ ಸಾರಿಸುವುದು! ಅದೂ ನೇಮಕಾ... ಅಂತಿಮ ಹಂತದಲ್ಲಿ ದಿಢೀರ್ ಎಂದು ಕೆಟಗರಿ ಬ...ಗುತ್ತದೆ. ಹೀಗೆ ಆಯ್ಕೆಯಾದ ಬಹುತೇಕರು ಮೂ... ತಿಂಗಳ ಸಂಬಳ ಪಡೆದ ನಂತರ ಸಿಂಧುತ್ವ ಪ್ರಮಾಣ... ನೀಡುತ್ತಾರೆಂದರೆ ಎಂಥ ಬದ್ಮಾಷ್ ಇರಬೇಕು... ಕೃಷ್ಣ ನೋಡಿ.

3. Caste favouritism:

1998, 99, 2004 ರ ಬ್ಯಾಚ್‌ನಲ್ಲಿ ... ಕೆಟಗರಿಯಲ್ಲಿ 36, 24, 15 ಒಕ್ಕಲಿಗ ಕ್ಯಾಂಡಿಡೇ... ಸೆಲೆಕ್ಟ್ ಆಗಿದ್ದಾರೆ. ಒಕ್ಕಲಿಗರಿಗೆ ಯಾವುದೇ ಅಳುಕಿ... ಸಿಕ್ಕಾಪಟ್ಟೆ ಮಾರ್ಕ್ಸ್ ಕೊಡುವ ಮೆಥಡ್ ... DPAR ಆದೇಶದ ಪ್ರಕಾರ ಒಟ್ಟು ಅಂಕಗಳ ಶೇ...ರಷ್ಟು ಅಂಕಗಳನ್ನು ಸಂದರ್ಶನಕ್ಕೆ ನಿಗದಿ ಮಾಡಬ... ಆದರೆ ಕೆಪಿಎಸ್‌ಸಿ ಎಂಬುದು ಕೃಷ್ಣನ ಪಿತ್ರಾ... ಆಸ್ತಿಯಲ್ಲವೆ? ಸಂದರ್ಶನಕ್ಕೆ ಗರಿಷ್ಠ 90 ಅಂಕ... ನಿಗದಿ ಮಾಡದ ಈ ಕಿರಾತಕ ಕೃಷ್ಣ 200 ... ನಿಗದಿ ಮಾಡಿಬಿಟ್ಟ. ಜಿ.ಎಮ್. ಕೆಟಗರಿಯಲ್ಲಿ... ಒಕ್ಕಲಿಗರಿಗೆಲ್ಲ ಧಾರಾಳ ಮಾರ್ಕ್ಸ್! ಒಕ್ಕಲಿಗರ ಪತ್ಯದ ಆಡಳಿತಯಂತ್ರವೊಂದು ರೂಪುಗೊಳ್ಳಲು ... ಸಾಕಲ್ಲವೆ?

1998 ರ ಪರೀಕ್ಷೆಯ ಈ ಪ್ರಕರಣ ನೋ... ಒಟ್ಟು 187 ಹುದ್ದೆಗಳು ಜಿ.ಎಮ್. ಕೆಟಗರಿಗಿ... ಆದರೆ ಇಲ್ಲಿ ಅರ್ಧಕ್ಕರ್ಧ ಸೆಲೆಕ್ಟ್ ಆಗಿದ್ದು ಒಕ್ಕಲಿ... ಜಿ.ಎಮ್.ನಲ್ಲಿರುವ ಎಲ್ಲ ಜಾತಿಯವರಿಗೆ ... ಅರ್ಧ ಸೀಟುಗಳಷ್ಟೇ!

4. ಅಪ್ಲಿಕೇಶನ್ನೇ ರಾಂಗು; ಆದ್ರೂ ...

1998 ರಲ್ಲಿ ಪರೀಕ್ಷೆ ಬರೆದ 3A ಕೆಟಗ... ಹನುಮಂತೆಗೌಡ ಟಿ.ಎಸ್. (Reg No. 104... ಎಂಬಾತನಿಗೆ ಕೃಷ್ಣನ ದಯೆಯಿಂದ ಗ್ರೂಪ್-ಎ ... ದಕ್ಕಿದೆ. ಈ ಹನುಮಂತೇಗೌಡ ಎಂತಹ ಅ... ಎಂದರೆ ಅರ್ಜಿಗೆ ಫೋಟೊ ಲಗತ್ತಿಸುವುದನ್ನೇ ಮ... ಆದರೂ ರಿಜೆಕ್ಟ್ ಆಗಲಿಲ್ಲ. ಈಗ ಹನುಮಂತೇ... ಅಸಿಸ್ಟೆಂಟ್ ಕಂಟ್ರೋಲರ್ ಆಫ್ ಅಕೌಂಟ್ಸ್! ಆಕ... ಖಾಲಿಯಾಗಲು ಶುರುವಾಗಿರುತ್ತದಷ್ಟೇ. ಸಂದ... ಅರ್ಹತಾಪಟ್ಟಿಯಲ್ಲಿ ಇವನೂ 3Aಯಿಂದ ಜಿ.... ಜಿಗಿದ ಹನುಮಂತನೇ!

ಫ್ಲ್ಯಾಷ್‌ಬ್ಯಾಕ್: ಕೋರ್ಟಿಗೂ ದೋಖಾ

1998 ರಲ್ಲಿ ಕೆಪಿಎಸ್‌ಸಿ ಮಾಡಿದ ಅಧ್ವಾನಗಳಿಂದ ಸಾವಿರಾರು ಯುವಕರು ಪಾತಾಳಕ್ಕೆ ಕುಸಿದುಬಿಟ್ಟರು. ಕೆ.ಎಸ್. ರಾಮೇಶ್ವರಪ್ಪ, ಪ್ರೊ. ಶಿವಣ್ಣ ಮೋನಪ್ಪರೇನೋ ಸಸ್ಪೆಂಡ್ ಆದರು... ಆದರೆ ಪ್ರಾಮಾಣಿಕವಾಗಿ ಪರೀಕ್ಷೆ ಬರೆದು ಸೆಲೆಕ್ಟ್ ಆಗಿದ್ದ ಯುವಕರು ಬೀದಿಗೆ ಬೀಳುವಂತಾಯ್ತು. 1998 ರ ಪರೀಕ್ಷೆಯ ಪ್ರಾವಿಜನಲ್ ಲಿಸ್ಟ್ 2001 ರಲ್ಲಿ ಅನೌನ್ಸ್ ಆಯ್ತು. ಈ ಲಿಸ್ಟ್‌ನಲ್ಲಿ ಮುಕ್ಕಾಲು ಭಾಗ ಸಂದರ್ಶನ ಮಾಡಿದ್ದು ಹಿಂದಿನ ಅಧ್ಯಕ್ಷ ಪಂಚೆಗಟ್ಟಿ, ಇನ್ನುಳಿದ ಕಾಲುಭಾಗ ಸಂದರ್ಶನಗಳನ್ನು ಹೊಸದಾಗಿ ಅಧ್ಯಕ್ಷನಾದ ಕೃಷ್ಣ ಮಾಡಿದ್ದ.


ಗ್ರಾಮೀಣ ಕೋಟಾ, ಮಹಿಳಾ ಕೋಟಾಗಳಲ್ಲೆಲ್ಲ ಅಧ್ವಾನ ಮಾಡಿದ್ದ ಎಚ್.ಎನ್. ಕೃಷ್ಣ ಗಾಬರಿಬಿದ್ದ ಅಭ್ಯರ್ಥಿಗಳು ಕೆ.ಎ.ಟಿ.ಯ ಮೊರೆ ಹೋದರು. ಬೇಕುಬೇಕಾದವರನ್ನೆಲ್ಲ ಸೆಲೆಕ್ಟ್ ಮಾಡಿದ್ದನ್ನು ನೋಡಿದ ಕೆ.ಎ.ಟಿ.ಯ ತಲೆಯೇ ತಿರುಗಿಹೋಯ್ತು. ಇಡೀ ಲಿಸ್ಟನ್ನೇ ರದ್ದು ಮಾಡಿದ ಕೆ.ಎ.ಟಿ. ಎಲ್ಲಾ ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನ ಮಾಡುವಂತೆ ಸೂಚಿಸಿತು.

ಕೆ.ಎ.ಟಿ.ಯಿಂದ ಉಗಿಸಿಕೊಂಡಾಗಲೆಲ್ಲ ಹೈಕೋರ್ಟ್‌ಗೆ ಅಪೀಲ್ ಹೋಗುವುದು ಕೃಷ್ಣನ ಜಾಯಮಾನ. ಅನ್ಯಾಯವಾದಾಗ ಅಭ್ಯರ್ಥಿಗಳು ಕೋರ್ಟ್ ಮೊರೆ ಹೋಗೋದು ಕಾಮನ್. ಆದರೆ ಈ ಕೃಷ್ಣನೇ ಅರ್ಜೆಂಟಾಗಿ ಅಪೀಲ್ ಹೋಗುವುದರ ಹಿಂದೆಯೂ ಕುತಂತ್ರ ಅಡಗಿದೆ.

ಕೇವಲ 10 ಅಭ್ಯರ್ಥಿಗಳ ಆಯ್ಕೆ ಅಕ್ರಮ ಎಂಬುದು ಪತ್ತೆಯಾಗಿದ್ದು, ಎಲ್ಲಾ ಉತ್ತರ ಪತ್ರಿಕೆಗಳನ್ನು ಮರುಮೌಲ್ಯಮಾಪನ ಮಾಡುವುದು ಅವಶ್ಯವಿಲ್ಲ ಎಂದಿತು ಕೆಪಿಎಸ್‌ಸಿ. 20 ಅಂಕಗಳು ಅಥವಾ ಅದಕ್ಕಿಂತ ಹೆಚ್ಚು ವ್ಯತ್ಯಾಸವಾಗಿರೋದು ಕೇವಲ 661 ಉತ್ತರ ಪತ್ರಿಕೆಗಳಲ್ಲಿ ಮಾತ್ರ, ಆದ್ದರಿಂದ ಎಲ್ಲಾ 60 ಸಾವಿರ ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನ ಅವಶ್ಯವಿಲ್ಲ ಎಂದು ಕೆಪಿಎಸ್‌ಸಿ ಹೈಕೋರ್ಟ್‌ಗೆ ಸುಳ್ಳು ಮಾಹಿತಿ ನೀಡಿತು. ಹೈಕೋರ್ಟ್ ಮಾಡರೇಟ್ ಮಾಡಲು ಸೂಚಿಸಿತು.

ಅಷ್ಟೊತ್ತಿಗೆ ಅಭ್ಯರ್ಥಿಗಳು ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು. 2003 ರಲ್ಲಿ ಆ ಲಿಸ್ಟನ್ನು ಸುಪ್ರೀಂಕೋರ್ಟ್ ತಡೆಹಿಡಿಯಿತು. 6.10.2005 ರಂದು ಸುಪ್ರೀಂಕೋರ್ಟ್ ತೀರ್ಪು ಬಂದು ಕೆಪಿಎಸ್‌ಸಿ ಉಗಿಸಿಕೊಂಡಿತ್ತು. ಕೋರ್ಟ್ ಆದೇಶದಂತೆ ಕೆಪಿಎಸ್‌ಸಿ ಉತ್ತರ ಪತ್ರಿಕೆಗಳ moderation/scaling ಮಾಡಿತು. ಕೇವಲ ಒಂದೇ ತಿಂಗಳಲ್ಲಿ 60 ಸಾವಿರ ಉತ್ತರ ಪತ್ರಿಕೆಗಳ scaling ಫಿನಿಶ್! ನಿಜಕ್ಕೂ ಅದು ಸಾಧ್ಯವಾ? ಖಂಡಿತ ಇಲ್ಲ. ಕೃಷ್ಣ ಏನು ಮಾಡಿದ್ದ ಗೊತ್ತೆ? ಸುಪ್ರೀಂಕೋರ್ಟ್ ಆದೇಶ ಬರುವ ಮೊದಲೇ ಈ ಕೆಲಸ ಮಾಡಿ ಮುಗಿಸಿದ್ದ. ನೂರಾರು ಒಕ್ಕಲಿಗ (3A ಕೆಟಗರಿ) ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಕೆಪಿಎಸ್‌ಸಿಯ ನಿಯಮಗಳನ್ನು ಗಾಳಿಗೆ ತೂರಿದ್ದ.

6.10.2005 ಕ್ಕೆ ಸುಪ್ರೀಂಕೋರ್ಟ್ ಆದೇಶ ಬಂದಿದೆ, 26.11.2005 ಕ್ಕೆ ಪ್ರಾವಿಷನಲ್ ಲಿಸ್ಟ್ ರೆಡಿ! ನಂತರ ಇಂಟರ್‌ವ್ಯೂ ಹೇಗೆ ನಡೆದಿರಬೇಕು? ನೆಟ್ಟಗೆ 15 ದಿನಾನೂ ಮಾಡಿಲ್ಲ! 26.12.2005 ಕ್ಕೆ ಫೈನಲ್ ಲಿಸ್ಟ್ ಬಂದೇ ಬಿಡ್ತು. ಮೊಟ್ಟ ಮೊದಲಿನ ಪ್ರಾವಿಷನಲ್ ಲಿಸ್ಟ್‌ನಲ್ಲಿದ್ದ 403 ಅರ್ಹ ಅಭ್ಯರ್ಥಿಗಳ ಭವಿಷ್ಯ ನುಚ್ಚುನೂರಾಗಿತ್ತು, ಅದರಲ್ಲಿ 209 ಅಭ್ಯರ್ಥಿಗಳು ಪಟ್ಟಿಯಿಂದ ಬೀದಿಗೆ ಬಿದ್ದಿದ್ದರು.


ವೆಂಕಟಸ್ವಾಮಿ

1998, 1999, 2004 ರಲ್ಲಿ ನಡೆದ ಕೆಎಎಸ್ ಪರೀಕ್ಷೆಗಳ ಫೈನಲ್ ಸೆಲೆಕ್ಷನ್‌ಗೆ ಮುಕ್ತಿ ಸಿಕ್ಕಿದ್ದು 2006 ರಲ್ಲಿ, ಒಟ್ಟು 726 ಹುದ್ದೆಗಳು. ಎಲ್ಲಿ ನೋಡಿದರೂ 3A ಕೆಟಗರಿಯವರೇ! ಇದು ಕೃಷ್ಣನ ಒಕ್ಕಲಿಗ ಉದ್ಯೋಗ ಖಾತರಿ ಯೋಜನೆ.

ವಿಚಿತ್ರ ನೋಡಿ: 1998 ರ ಪರೀಕ್ಷೆಗೆ ಸಂಬಂಧಿಸಿದ ಫೈನಲ್ ಲಿಸ್ಟ್‌ಗೆ ಆಗ ಕೆಪಿಎಸ್‌ಸಿ ಮೆಂಬರುಗಳಾಗಿದ್ದ ದಾಸಯ್ಯ, ವೆಂಕಟಸ್ವಾಮಿ ಸಹಿ ಹಾಕಲು ಒಪ್ಪಲೇ ಇಲ್ಲ. ಆತ್ಮಸಾಕ್ಷಿ ಇರುವವರ‍್ಯಾರು ಸಹಿ ಹಾಕಲು ಒಪ್ಪದಂತಹ ಲಿಸ್ಟ್ ಅದು. ಅಧ್ಯಕ್ಷ ಡಾ. ಕೃಷ್ಣರೊಂದಿಗೆ ಮೇಯ್ದ ಮೆಂಬರುಗಳಾದ ಪಾಟೀಲ್, ಲಿಲಿಯನ್ ಜೇವಿಯರ್ ಈಗ ರಿಟೈರ್ಡ್ ಆಗಿದ್ದಾರೆ. ಹೊಸ ಮೆಂಬರುಗಳನ್ನು ಬುಟ್ಟಿಗೆ ಹಾಕಿಕೊಂಡಿರುವ ಕೃಷ್ಣನ ಹೊಸ ದರೋಡೆ ಸದ್ಯದಲ್ಲೇ ಶುರುವಾಗಲಿದೆ.

ಅಭ್ಯರ್ಥಿಗಳೇ ಏಜೆಂಟರು!



ಕರೀಗೌಡ

ಇದು ತೀರಾ ಅಪಾಯಕಾರಿ ಬೆಳವಣಿಗೆ. ತನ್ನ ಕುಲದ ಅಭ್ಯರ್ಥಿಗಳನ್ನೇ ಏಜಂಟರನ್ನಾಗಿ ಮಾಡಿಕೊಂಡು ದೀಲು ಕುದುರಿಸುತ್ತಿದ್ದಾನೆ ಕೃಷ್ಣ. 1998 ರ ಪರೀಕ್ಷೆಯಲ್ಲಿ ಆಗಿನ ಸೆಕ್ರೆಟರಿ ಮತ್ತು ಪ್ರಧಾನ ಪರೀಕ್ಷಾ ವ್ಯವಸ್ಥಾಪಕರ ಮಧ್ಯದ ಅಪವಿತ್ರ ಮೈತ್ರಿ ಬಯಲಾಗಿ, ಅದು ಪ್ರೂವ್ ಸಹ ಆಗಿತ್ತು.

ಈಗ ಅಭ್ಯರ್ಥಿಗಳೇ ಏಜಂಟರು! ಕರೀಗೌಡ ಎಂಬ ಚಿಲ್ಲರೆ ಗಿರಾಕಿ ಈಗ ಆಫೀಸರ್! ಈತ ಕೃಷ್ಣನಿಗೆ ಒಕ್ಕಲಿಗ ಅಭ್ಯರ್ಥಿಗಳನ್ನು ಲಿಂಕ್ ಮಾಡುವ ಏಜಂಟ್. ಈತನ ಹೆಂಡತಿ ಹರಿಣಿ ಸಹ ಉಪನೋಂದಣಿ ಅಧಿಕಾರಿ. ಇಬ್ಬರೂ ಕೃಷ್ಣನ ಶಿಷ್ಯರೇ. ತಹಸೀಲ್ದಾರ್‌ನಾಗಿದ್ದ ಕರಿಗೌಡ ಎರಡೇ ತಿಂಗಳಲ್ಲಿ ಅಸಿಸ್ಟೆಂಟ್ ಕಮಿಷನರ್ ಆಗಿದ್ದಾನೆ! ಕೃಷ್ಣನ ಚೇಲಾಗೆ ಅಷ್ಟೂ ಇಲ್ಲವೆಂದರೆ ಹೇಗೆ? ಚೇಲಾ ಕರಿಗೌಡನನ್ನು ಮೇಲೆತ್ತಲು ತನ್ನ ಕುಲಬಾಂಧವರನ್ನೂ ತುಳಿದ ಈ ಕೃಷ್ಣ. ಇದಕ್ಕೆ ಬಲಿಯಾದವರೆಂದರೆ ಯೋಗಾನಂದ್, ಮಧುಕೇಶ್ವರ, ನಾಗಹನುಮಯ್ಯ ಮತ್ತು ಆರ್. ನಿರಂಜನ. ಇವರೆಲ್ಲ ಕೃಷ್ಣನ ಅಣತಿಯಂತೆ ಆತ ಕೊಟ್ಟ ಹುದ್ದೆ ಒಪ್ಪಿಕೊಂಡಿದ್ದಾರೆ. ಹುಬ್ಬಳ್ಳಿ, ಬೆಂಗಳೂರು, ಮೈಸೂರುಗಳಲ್ಲಿ ವ್ಯವಸ್ಥಿತ ಏಜನ್ಸಿಗಳೇ ಇವೆ. ಆ ಮೂಲಕ ಕೃಷ್ಣ ಬರೀ 3A ಕೆಟಗರಿಯ ಒಕ್ಕಲಿಗರನ್ನೇ ತುಂಬುವ ಪರಿ ಹೀಗಿದೆ ನೋಡಿ:

ಕ್ರಸಂ.	ಹುದ್ದೆ	1998, 99, 2004 ರಲ್ಲಿ ತುಂಬಿದ ಹುದ್ದೆ ಸಂಖ್ಯೆ	3A ಕೆಟಗರಿ
1.	ಅಸಿಸ್ಟೆಂಟ್ ಕಮಿಷನರ್	60	20
2.	ಎ.ಸಿ. (ಕಮರ್ಷಿಯಲ್ ಟ್ಯಾಕ್ಸ್)	39	12
3.	DYSP	28	7
4.	ತಹಸೀಲ್ದಾರ್	170	45-55

ಗೋಲ್‌ಮಾಲ್‌ಗೊಂದು ದಾಖಲೆ!

ಮಾಡರೇಷನ್ ಮಾಡುವ ಮುನ್ನ 661 ಉತ್ತರ ಪತ್ರಿಕೆಗಳಲ್ಲಿ ಮಾತ್ರ +20 ಅಥವಾ -20 ವ್ಯತ್ಯಾಸ ಕಂಡುಬಂದಿತು ಎಂದು ಹೈಕೋರ್ಟ್‌ಗೆ ರೀಲು ಬಿಟ್ಟಿತ್ತಲ್ಲವೆ ಕೆಪಿಎಸ್‌ಸಿ?


ಈಗ ಮಾಹಿತಿ ಹಕ್ಕು ಕಾಯ್ದೆ ಪ್ರಕಾರ ಕೆಪಿಎಸ್‌ಸಿಯಿಂದ ಪಡೆದ ಅಂಕಿಅಂಶಗಳನ್ನು ನೋಡಿದರೆ ನೀವು ಬೆಚ್ಚಿಬೀಳುತ್ತೀರಿ.

1998 ರ ಮಾಡರೇಷನ್ನಿನಲ್ಲಿ ಬದಲಾದ ಮಾರ್ಕ್ಸ್‌ಗಳು

		ಕ್ಯಾಂಡಿಡೇಟ್ಸ್ ಸಂಖ್ಯೆ	
ಕ್ರ.ಸಂ.	ಮಾರ್ಕ್ಸ್‌ರೇಂಜ್	ಮಾರ್ಕ್ಸ್ ಹೆಚ್ಚಾಗಿದ್ದು	ಮಾರ್ಕ್ಸ್ ಕಡಿಮೆಯಾಗಿದ್ದು
1	1-20	445	793
2	21-50	3516	11302
3	51-100	266	4421
4	101-150	4	210

ಈ ಮೇಲಿನ ಅಂಕಿಅಂಶಗಳ ಪ್ರಕಾರವೇ 20,957 ಉತ್ತರ ಪತ್ರಿಕೆಗಳ ಅಂಕಗಳಲ್ಲಿ ಅಗಾಧ ವ್ಯತ್ಯಾಸವಾಗಿದೆ. ಹೈಕೋರ್ಟ್ ಮುಂದೆ ಕೆಪಿಎಸ್‌ಸಿ ಹೇಳಿದ್ದೆಷ್ಟು? only six hundred and sixty one!

1999 ರ ಬ್ಯಾಚ್‌ನ ಮಂಜುನಾಥ್ ಕೆ.ಡಿ. (Reg No. 571144) ಪೂರ್ವಭಾವಿ ಪರೀಕ್ಷೆಯ ಹೊತ್ತಿನಲ್ಲಿ 3A ಎಂದು ನಮೂದಿಸಿ, ಮೇನ್ಸ್ ಹೊತ್ತಿಗೆ ಜಿ.ಎಮ್. ಎಂದು ನಮೂದಿಸುತ್ತಾನೆ. ಎಲ್ಲಿ ಹೋಯ್ತು ನಿಯಮ? ಆಟೊಮ್ಯಾಟಿಕ್ಕಾಗಿ ಆತನ ಕ್ಯಾಂಡಿಡೇಚರ್ ರಿಜೆಕ್ಟ್ ಆಗಬೇಕು. ಮತ್ತೆ ಕೃಷ್ಣಾವತಾರ! ಮಂಜುನಾಥನೀಗ ಎಂಪ್ಲಾಯ್‌ಮೆಂಟ್ ಆಫೀಸರ್. ಈ ಮಂಜುನಾಥನಿಂದ ರಿಕ್ರೂಟ್‌ಮೆಂಟ್‌ನಲ್ಲಿ ಇನ್ನೆಂತಹ ಗೋಲ್‌ಮಾಲ್‌ಗಳಾಗುತ್ತವೆಯೊ? 2004 ರ ನೋಟಿಫಿಕೇಷನ್ ಪ್ರಕಾರ District Marketing Officer (DMO) ಪೋಸ್ಟು ಜಿ.ಎಮ್. ಕ್ಯಾಟಗರಿಗಿತ್ತು. ಆದರೆ ತುಂಬಿದ್ದು 3A ಕೆಟಗರಿಯ ಶ್ರೀನಿವಾಸ ರೆಡ್ಡಿ ಎಂಬಾತನನ್ನು! ಗೆಜೆಟ್ಟಿಗೂ ಕೇರ್ ಮಾಡಲ್ಲ ಕೃಷ್ಣ ಸಾಹೇಬರು!


ಕರ್ನಾಟಕ ಸರ್ಕಾರ
ನಮೂನೆ-1
"ಸಿಂಧುತ್ವ ಪ್ರಮಾಣ ಪತ್ರ"
ಗದಗ
5-4-2006

ಕೆಲಸ ಸಿಕ್ಕ ಮೇಲೆ ಸಿಂಧುತ್ವ ಪ್ರಮಾಣ ಪತ್ರ ತಂದಿರುವುದು!

ವಿಟೋ ಪವರ್ ದುರ್ಬಳಕೆ!

ತಾನು ಹೇಳಿದಂತೆಯೇ ಆಗಬೇಕು ಎಂಬ ಸರ್ವಾಧಿಕಾರಿ ಕೃಷ್ಣ ಕೆಪಿಎಸ್‌ಸಿ ಮೀಟಿಂಗುಗಳಲ್ಲಿ ತನಗೆ ಬೇಕಾದಂತೆ ಅಜೆಂಡಾ ಹೊರಡಿಸುತ್ತಾನೆ. ತನ್ನ ವಿಟೊ ಪವರ್ ಬಳಸಿ ಇತರರನ್ನು ಬಾಯಿ ಮುಚ್ಚಿಸುತ್ತಾನೆ. ಇಲ್ಲಾ ಅವರ ಬಾಯಿಗೆ ತುಪ್ಪ ಹಚ್ಚುತ್ತಾನೆ. ಹಾಗೆಯೇ ಅವೈಜ್ಞಾನಿಕ ಮಾಡರೇಷನ್, ಸ್ಕೇಲಿಂಗ್ ವಿಧಾನಗಳನ್ನೇ ಕೃಷ್ಣ ಆಯ್ದುಕೊಳ್ಳುತ್ತಾನೆ.


ಲಾಸ್ಟ್ ಚಾನ್ಸ್.....

ಇಷ್ಟಾದರೂ ಸರ್ಕಾರ ಈತನನ್ನು ಸಹಿಸಿಕೊಂಡು ಕೂತರೆ ಅದು ಕರ್ನಾಟಕದ ಯುವ ಜನತೆಗೆ ಬಗೆದ ಮಹಾನ್ ದ್ರೋಹ ಆಗುತ್ತದೆ. ಇಲ್ಲಿ ನಾವು ಕೆಲವೇ ಸ್ಯಾಂಪಲ್‌ಗಳನ್ನು ನೀಡಿದ್ದೇವೆ. ಕೆಪಿಎಸ್‌ಸಿಯ ಭಾನಗಡಿಗಳ ಕುರಿತು ಉನ್ನತ ತನಿಖೆ ಆಗದೇ ಹೋದರೆ ಇದೀ ಆಡಳಿತಯಂತ್ರವೇ ಗಬ್ಬೆದ್ದು ಹೋಗಲಿದೆ. ಭ್ರಷ್ಟರು, ಜಾತಿವಾದಿಗಳನ್ನೆಲ್ಲ ತಂದು ಆಯಕಟ್ಟಿನ ಹುದ್ದೆಗಳಲ್ಲಿ ಕೂರಿಸುತ್ತಿರುವ ಇಂತಹ ಮನೆಹಾಳನನ್ನು ದೇವೇಗೌಡರು ಎಂಎಲ್‌ಸಿ ಮಾಡಲಿದ್ದಾರಂತೆ! ಸದ್ಯಕ್ಕೆ ಜನವರಿ 7 ಕ್ಕೆ ಕೃಷ್ಣನ ಅವಧಿ ಮುಗಿಯುತ್ತದೆ. ಆದರೆ ಆತ ಮತ್ತೊಂದು ಪೀರಿಯಡ್‌ಗೆ ಮುಂದುವರೆಯುವ ಸಾಧ್ಯತೆಗಳೂ ಇವೆ.ಏಕೆಂದರೆ ಈ ಸಮ್ಮಿಶ್ರ ಸರ್ಕಾರವೇ ಮಹಾನ್ ಖದೀಮರ ಕೂಟವಲ್ಲವೆ?

ಅಲ್ಲಿಗೆ ಎಲ್ಲಿ ನೋಡಿದರೂ ಒಕ್ಕಲಿಗ ಅಧಿಕಾರಿಗಳೇ! ಶೇಮ್ ಟು ದಿಸ್ ಗೌರ್ನಮೆಂಟ್! ■

ಧರ್ಮಯುದ್ಧ ಮುಗಿಯಲಿ!

ಚಾಮುಂಡೇಶ್ವರಿ ಕ್ಷೇತ್ರದ ಬ್ರಾಹ್ಮಣ ಮತಗಳೆಲ್ಲಾ ಪೇಜಾವರ ಸ್ವಾಮಿ ಕೈಯಲ್ಲಿವೆ ಎಂದು ಯಾರು ಹೇಳಿದರೊ ಏನೊ ಸಿದ್ಧರಾಮಯ್ಯ ಎದ್ದು ಬಿದ್ದು ಓಡುತ್ತ ಪೇಜಾವರರ ಕಾಲ ಬಳಿ ಮುಗ್ಗರಿಸಿದರಂತಲ್ಲಾ, ಪೇಜಾವರರು ಎಂದಿನಂತೆ ತಮ್ಮ ಪಾದಗಳ ಕಡೆಗೆ ಬರುವ ಕೈಗಳನ್ನು ವಿಶೇಷ ಗೌರವದಿಂದ ಕಾಣುತ್ತ "ಸಿದ್ಧರಾಮಯ್ಯನ ಬಗ್ಗೆ ನನಗೆ ವಿಶೇಷ ಗೌರವವಿದೆ. ಏಕೆಂದರೆ ಆತ ಕನಕದಾಸರ ಕಡೆಯವನು, ನಾನು ಕೃಷ್ಣನ ಕಡೆಯವನು" ಎನ್ನುವಂತೆ ಅರ್ಥಗರ್ಭಿತವಾಗಿ ಆಶೀರ್ವದಿಸಿದರಂತಲ್ಲಾ, ಇದನ್ನು ಕೇಳಿ ತಿಳಿದ ಕುಮಾರಸ್ವಾಮಿ ಮತ್ತು ರೇವಣ್ಣ ಕೂಡಲೇ ಓಡಿ ಹೋಗಿ ಪೇಜಾವರರ ಪಾದಗಳ ಮೇಲೆ ಬಿದ್ದು ಸುಧರಾಯಿಸಿಕೊಳ್ಳುತ್ತಿರಬೇಕಾದರೆ, ಉಕ್ಕಿ ಬಂದ ವೈದಿಕ ವ್ಯಂಗ್ಯದ ನಗುವನ್ನು ಕಷ್ಟಪಟ್ಟು ತಡೆದುಕೊಂಡ ಪೇಜಾವರ ಸ್ವಾಮಿ "ಏಳಿ, ಮೇಲೇಳಿ. ಭಯಪಡುವ ಅಗತ್ಯವಿಲ್ಲ. ನಿಮಗೂ ಒಳ್ಳೆಯದಾಗಲಿ" ಎಂದು ಅಂಡಬಂಡ ಬಣ್ಣದ ಶಾಲುಗಳಿಂದ ಅದರ ದೇಹಗಳನ್ನು ಮುಚ್ಚಿ ನಿಲ್ಲಿಸಿದರಂತಲ್ಲಾ, ಆ ಶಾಲುಗಳಲ್ಲಿ ರೇವಣ್ಣ ಮತ್ತು ಕುಮಾರಣ್ಣ ಕಂಬಳಕ್ಕಾಗಿ ನಿಂತ ಕೋಣಗಳಂತೆ ಕಂಡು, ಉಡುಪಿ ಕಡೆ ಬ್ರಾಹ್ಮಣರು ಹೊಟ್ಟೆ ಹಿಡಿದು ನಕ್ಕರಂತಲ್ಲಾ, ಥೂತ್ತೇರಿ!





* * * * * * *

ಚಾಮುಂಡೇಶ್ವರಿ ಕ್ಷೇತ್ರದ ತುಂಬ ಮೈಮೇಲೆ ಚಾಮುಂಡಿ ಬಂದಂತೆ ತಿರುಗುತ್ತಿರುವ ದೇವೇಗೌಡರು, ಎದುರು ಸಿಕ್ಕ ಎಲ್ಲರನ್ನು ತಬ್ಬಿಕೊಂಡು ಗೋಳಾಡಿ, ಗೊಣ್ಣೆ ವರೆಸಿ ಮುಂದೆ ಹೋಗುತ್ತಿರಬೇಕಾದರೆ, ಕ್ಷೇತ್ರದ ಜನ ಕನಿಕರದಿಂದ ಲೊಚಗರಿದರಂತಲ್ಲಾ. ಇತ್ತ ಡಿ. ಮಂಜುನಾಥ್ ಎಂಬ ಮುದಿ ಎತ್ತಿನಿಂದ ಹಿಡಿದು, ಚಲುವ ಚೆನ್ನಿಗ ಎಂಬ ಚಪಲರವರೆಗೂ ದಂಡು ಕಟ್ಟಿಕೊಂಡು ಚಾಮುಂಡೇಶ್ವರಿಗೆ ಹೋಗಿರುವ ಲೀಡರುಗಳು "ದೇವೇಗೌಡನ ಈ ಆಟವೆಲ್ಲಾ ಮಂದಮತಿಯಂತಿರುವ ರೇವಣ್ಣನನ್ನ ಮುಂದೆ ಮುಖ್ಯಮಂತ್ರಿ ಮಾಡುವಂತಹ ಸಂಚಿನಿಂದ ಕೂಡಿರುವುದೇ ಆಗಿದೆ" ಎಂದು ಅರಿವಾಗಿ ಏನು ಮಾಡಿದರೂ ದೇವೇಗೌಡರೊಂದಿಗೆ ಹೆಜ್ಜೆ ಹಾಕುತ್ತಿಲ್ಲವಂತಲ್ಲಾ, ಎಲ್ಲರನ್ನು ತನ್ನ ಕಣ್ಣಾವಲಲ್ಲೇ ಇರುವಂತೆ ನೋಡಿಕೊಂಡು ನಿಜಕ್ಕೂ ಕುರಿ ಮಂದೆಯ ಲೀಡರಾಗಿರುವ ಗೌಡರು, ಕುರುಬರ ಲೀಡರನ್ನು ಶತಾಯ ಗತಾಯ ಸೋಲಿಸಲೇಬೇಕೆಂದು ಹಠ ತೊಟ್ಟಿದ್ದಾರಂತಲ್ಲಾ, ಈ ಮಧ್ಯೆ "ಈ ಜೆಡಿಎಸ್ ಅಭ್ಯರ್ಥಿ ಸೋತರೆ ಮುಖ್ಯಮಂತ್ರಿ ರಾಜೀನಾಮೆ ಕೊಡಬೇಕಾಗುತ್ತವೆ" ಎಂದು ಸಿದ್ಧರಾಮಯ್ಯ ಹೇಳಲಾಗಿ, "ರಾಜೀನಾಮೆ ಕೊಡಲು ನಾನೇನು ಚುನಾವಣೆಗೆ ನಿಂತಿದ್ದೇನೆಯೆ" ಎಂದು ಸಿದ್ಧರಾಮಯ್ಯನ ದಡ್ಡತನ ಗೊತ್ತಾದವರಂತೆ ಕುಮಾರಣ್ಣ ಮತ್ತು ರೇವಣ್ಣ ಕುಣಿದಾಡಿ ನಕ್ಕರಂತಲ್ಲಾ, ಥೂತ್ತೇರಿ!

* * * * * * *

ನೋಡಿದು ನೋಡುತ್ತಿದ್ದಂತೆಯೇ ಚಿಕ್ಕಮಗಳೂರು ಶಾಸಕನ ತಲೆ ಕೆಟ್ಟು ಕೆರಳಿಹಿಡಿದು ಹೋಯ್ತೆಂದು ಚೆಡ್ಡಿಗಳೇ ಆಡಿಕೊಳ್ಳತೊಡಗಿದ್ದಾರಂತಲ್ಲಾ, ಹರಿಗಿರಿ ಜನರನ್ನು ದೇವಸ್ಥಾನದ ಆವರಣಕ್ಕೂ ಬಿಟ್ಟುಕೊಳ್ಳದಂತಹ ಸ್ಥಿತಿ ಇರುವಾಗ "ಮಸೀದಿ ಒಳಗಡೆ ನಾನು ಗಂಟೆ ಅಲ್ಲಾಡಿಸಿ ಮಂಗಳಾರತಿ ಮಾಡಲು ಅವಕಾಶ ಕೊಡಿ, ಹಾಗೆಯೇ ನಿಮಗೆ ದೇವಸ್ಥಾನದಲ್ಲಿ ನಮಾಜು ಮಾಡಲು ಅವಕಾಶ ಕೊಡುತ್ತೇನೆ" ಎಂದು ಬೊಬ್ಬೆ ಹೊಡೆಯುತ್ತಿದ್ದಾನಲ್ಲ, ಇದನ್ನು ನೋಡಿ "ಈತ ಯಾವ ದೇವಸ್ಥಾನದ ಪೂಜಾರಿ? ಶತಮಾನಗಳಿಂದಲೂ ದೇವಸ್ಥಾನಗಳೆಲ್ಲಾ ಇನ್ನೂ ಜನಿವಾರಿಗಳ ಕೈಲೇ ಇದ್ದು, ರವಿಯಂತವನು ಊಳಿಗ ಮಾಡುತ್ತಿದ್ದು, ಊಳಿಗದ ಕೆಲಸ ಬಿಟ್ಟು ಪೂಜೆ ವಿಷಯ ಇವನಿಗೇತಕ್ಕೆ?" ಎಂದು ಭಯಂಕರ ಚೆಡ್ಡಿಗಳೇ ಆಡಿಕೊಳ್ಳುತ್ತಿದ್ದಾವಂತಲ್ಲಾ, ಅದ್ಯಾವುದಕ್ಕೂ ಕೇರ್ ಮಾಡದ ರವಿ ಏಕಕಾಲಕ್ಕೆ ಮುಸ್ಲಿಮರ ವಿರುದ್ಧ ಮತ್ತು ಚಿಕ್ಕಮಗಳೂರಿನ ಶಿವಶರಣರ ವಿರುದ್ಧವೂ ಪಿತೂರಿ ಶುರು ಮಾಡಿದ್ದಾನಂತಲ್ಲಾ, ಚಿಕ್ಕಮಗಳೂರಿನ ಶಿವಶರಣರು ತಲೆಕೆಟ್ಟ ರವಿ ಕೆಲಸಗಳಿಗೆ ಒಂದಿಷ್ಟೂ ಸಹಕಾರ ಕೊಡದೆ, ತಮ್ಮಷ್ಟಕ್ಕೆ ತಾವಿರುವುದೇ ಒಂದು ಸಮಸ್ಯೆಯಾಗಿ, ರವಿ ತಲೆ ಇನ್ನೂ ಕೆಟ್ಟರೆ ಅದರಿಂದ ಆಗುವ ಅನಾಹುತ ಅವನಿಗೇ ಮುಳುವಾಗುತ್ತೆಂದು ಶರಣರು ಸುಮ್ಮನಿದ್ದಾರಂತಲ್ಲಾ, ಥೂತ್ತೇರಿ!!

* * * * * * *

ಸಿಕ್ಕ ಸಿಕ್ಕಲ್ಲೆಲ್ಲಾ ಕಾಯಿಕೊಂಡು, ರಾಶಿ ಹಾಕಿಕೊಂಡು, ಕೊಬರಿ ಮಾಡಿ, ಚೆಚ್ಚಿ ಮೂಟೆ ಬಿಗಿದುಕೊಂಡು ತಿಪಟೂರಿಗೆ ಬಂದ ರೈತರು, ಕೊಬರಿ ರೇಟು ಕೇಳಿ ಬರಿಯಾನಿ ತಿನ್ನುವುದರ ಬದಲು ಕಡ್ಡಿಪುರಿ ತಿನ್ನುವಂತಾಗಿದೆಯಂತಲ್ಲಾ, ಇದನ್ನು ನೋಡಲಾರದ ಕುಮಾರಸ್ವಾಮಿ ಸರಿಯಾದ ದರ ನಿಗದಿ ಮಾಡಿ ಅತ್ತ ಚಾಮುಂಡೇಶ್ವರಿ ಚುನಾವಣೆಗೆ ತೆರಳಿದರೆ, ಇತ್ತ ಅಧಿಕಾರಿಗಳು ಮುಖ್ಯಮಂತ್ರಿಯ ಆದೇಶವನ್ನು ಅಂಡಿನಡಿ ಹಾಕಿ ಕುಳಿತುಕೊಂಡು "ಮುಖ್ಯಮಂತ್ರಿ ಹೇಳ್ದನೆ ಅಂದ್ರೆ ನಾವು ಅಂಗೆ ಮಾಡಕ್ಕಾಗುತ್ತೇನ್ರಿ?" ಎಂದರಂತಲ್ಲಾ, ಅತ್ತ ಬೆಳಗಾವಿಯ ಕಬ್ಬು ಬೆಳೆಗಾರರ ಕತೆಯೂ ಇದೇ ಆಗಿ, ಅವರೆಲ್ಲಾ ಸೇರಿ ಎರೆಮಣ್ಣಿನ ಮಗ ದೇವೇಗೌಡರನ್ನು ಕೇಳಲಾಗಿ, ದೇವೇಗೌಡ ಕಣ್ಣು ತೆರೆಯದೆ "ಈ ಧರ್ಮಯುದ್ಧ ಮುಗಿಯಲಿ. ನಂತರ ಕೊಬರಿಯನ್ನು ಮತ್ತು ಕಬ್ಬನ್ನು ನನ್ನ ಮಕ್ಕಳೇ ಬಂದು ಖರೀದಿಸುತ್ತಾರೆ" ಎಂದರಂತಲ್ಲಾ, ಈ ಮಾತಿನ ಅರ್ಥ ತಿಳಿಯದ ರೈತರು ಅಲ್ಲೇ ನಿಂತರಲಾಗಿ, ಎಲ್ಲಿಗೋ ಫೋನ್ ಮಾಡಿದ ಗೌಡರು "ದರ್ಟಿ ಫೆಲೋಸ್, ಈ ದೇವೇಗೌಡನ ಪ್ರಾಮಾಣಿಕತೆನ ಪ್ರಶ್ನೆ ಮಾಡಬೇಡಿ" ಎನ್ನುತ್ತಾ ಎದ್ದು ಗಲ್ಲಿಬಿದ್ದು ಹೋದರಂತಲ್ಲಾ, ಥೂತ್ತೇರಿ!!

-ಯಾತೂ

ಮನುಷ್ಯನ ಇತಿಹಾಸ ಎಂಬುದು ಪ್ರತಿಯೊಬ್ಬರೂ ತಮಗಾಗಿಯೇ ಹುಡುಕಾಡುವುದರ ದುಃಖದ ಫಲಿತಾಂಶ -ಜ್ಯೂಲಿಯೊ ಕಾರ್ಟೆಜಾರ್

'ಲಂಕೇಶ್' ಪ್ರಶ್ನೆಗಳು

ದೇವೇಗೌಡ ಉತ್ತರ ಕೊಡಲಿ

ಸಿದ್ಧರಾಮಯ್ಯ ಈಗ ಒಬ್ಬ ಮಾಮೂಲಿ ಚುನಾವಣಾ ಅಭ್ಯರ್ಥಿಯಲ್ಲ. ಚಾಮುಂಡೇಶ್ವರಿ ಉಪಚುನಾವಣೆ ಆಗಾಗ್ಗೆ ಬಂದು ಹೋಗುವ ಚುನಾವಣೆಯೂ ಅಲ್ಲ.

-ಇದು ವಾಸ್ತವ.

ಬಹುಶಃ ಕರ್ನಾಟಕ ರಾಜ್ಯದ ರಾಜಕೀಯ ನಕ್ಷೆಯನ್ನೇ ಬದಲಾಯಿಸಲಿದೆ ಈ ಚುನಾವಣೆ. ಹಾಗಾಗಿಯೇ ಈ ಎಲೆಕ್ಷನ್‌ನಲ್ಲಿ ಅಹಿಂದ, ಒಳಮೀಸಲಾತಿ, ಕನಕಗೋಪುರ, ಅಲ್ಪಸಂಖ್ಯಾತರ ವಿಚಾರಗಳೆಲ್ಲಾ ಹಾರಾಡುತ್ತಿವೆ.


ಸಿದ್ಧರಾಮಯ್ಯನವರನ್ನು ಸೋಲಿಸಲೇಬೇಕೆಂದು ಹಠ ತೊಟ್ಟಿರುವ ದೇವೇಗೌಡರ ನಿಲುವಿಗೆ ಚಾಮುಂಡೇಶ್ವರಿ ಜನ ಒಪ್ಪಿಗೆ ಸೂಚಿಸಿದರೆ ಅದು ಬೇರೆ ಮಾತು. ಆದರೆ ಜೆಡಿಎಸ್ ಅಭ್ಯರ್ಥಿ ಯಾಕೆ ಗೆಲ್ಲಬೇಕೆಂದು ವಾದಿಸುವಷ್ಟು ನೈತಿಕತೆ ಗೌಡರಿಗಿದೆಯಾ?

ಈ ಹಿನ್ನೆಲೆಯಲ್ಲಿ ಕರ್ನಾಟಕದ ಜನತೆಯ ಪರವಾಗಿ ದೇವೇಗೌಡರಿಗೆ 'ಲಂಕೇಶ್' ಈ ಪ್ರಶ್ನೆಗಳನ್ನು ಕೇಳುತ್ತಿದೆ.

- ರಾಜೀವ್ ಚಂದ್ರಶೇಖರ್ ಎಂಬ ಉದ್ಯಮಿಯ ಹತ್ತಿರ ಹಣ ಪಡೆದು ರಾಜ್ಯಸಭಾ ಸೀಟು ಮಾರಿಕೊಂಡಿದ್ದು ಸರಿಯೇ?
- ಗೌಡರೆ, ನಿಮ್ಮ ಮಕ್ಕಳು ಬಿಎಸ್‌ಕೆ ಟ್ರೇಡಿಂಗ್ ಕಂಪನಿ ಮೂಲಕ ನಡೆಸಿರುವ ಕೋಟ್ಯಾಂತರ ರೂಪಾಯಿ ಅವ್ಯವಹಾರಗಳ ಬಗ್ಗೆ ಕರ್ನಾಟಕದ ಜನತೆಗೆ ಏನೆಂದು ಉತ್ತರಿಸುತ್ತೀರಿ?
- ನಿಮ್ಮ ಕುಟುಂಬದ ಹೆಣ್ಣುಮಕ್ಕಳಾದ ಕವಿತಾ, ಅನಸೂಯ, ಭವಾನಿ, ಅನಿತಾ ಮುಂತಾದವರು ನೂರಾರು ಕೋಟಿ ಬೆಲೆಯ ಜಮೀನು, ಕಟ್ಟಡಗಳನ್ನು ಖರೀದಿಸಿದ್ದಾರೆ. ಅಷ್ಟು ದುಡ್ಡು ಅವರಿಗೆ ಎಲ್ಲಿಂದ ಬಂತು?
- ನಿಮ್ಮ ಅಳಿಯ ಡಾ. ಮಂಜುನಾಥ ಹತ್ತಾರು ಕೋಟಿ ನೀಡಿ ಟ್ರಿನಿಟಿ ಹಾಸ್ಪಿಟಲ್ ಖರೀದಿಸಿದ್ದಾರೆ ಎನ್ನಲಾಗಿದೆ. ಇಷ್ಟು ದುಡ್ಡು ಆತನಿಗೆ ಎಲ್ಲಿಂದ ಬಂತು?
- ಮಂಗಳೂರು ಗಲಭೆಯಲ್ಲಿ ನಿಮ್ಮ ಮಗನ ಕೋ-ಜಾ ಸರ್ಕಾರ ಮುಸ್ಲಿಮರನ್ನು ಬೇಟೆಯಾಡಿತು. ಈಗಲೂ ಸೆಕ್ಯುಲರ್ ಶಂಖ ಊದುವ ನೀವು ಅದನ್ನು ಖಂಡಿಸಲಿಲ್ಲ ಏಕೆ?
- ಸಿದ್ಧರಾಮಯ್ಯನವರನ್ನು ಮುಗಿಸಲು ಒಳಮೀಸಲಾತಿ ವಿಚಾರ ಎತ್ತುತ್ತಿದ್ದೀರಿ, ಆದರೆ ಎಲ್ಲಾ ಅಧಿಕಾರ-ಸಂಪತ್ತನ್ನು ನಿಮ್ಮ ಕುಟುಂಬದವರಿಗೆಂದೇ ಮೀಸಲಿಡುತ್ತಿದ್ದೀರಲ್ಲ, ಇದೇನಾ ನಿಮ್ಮ ಸಾಮಾಜಿಕ ನ್ಯಾಯ?
- ಇಷ್ಟರ ಮೇಲೆ ಸಿದ್ಧರಾಮ್ಯಯ ಯಾಕೆ ಸೋಲಬೇಕು ಹೇಳಿ?

ಅವರೇನಾದರೂ ನಿಮ್ಮ ಮಕ್ಕಳಂತೆ ಅದಿರು ಕದ್ದಿದ್ದಾರಾ? ನೂರಾರೂ ಕೋಟಿ ಅಕ್ರಮ ಆಸ್ತಿ ಮಾಡಿ ನಿಮ್ಮ ಮಕ್ಕಳಂತೆ ಸಿಕ್ಕಿಬಿದ್ದಿದ್ದಾರಾ? ನಿಮ್ಮ ರೀತಿ ಜಾತಿ ಜಾತಿಗಳನ್ನು ಎತ್ತಿ ಕಟ್ಟುತ್ತಿದ್ದಾರಾ? ನೋಟು ಎಸೆದು ಓಟು ಬಾಚಬಹುದೆಂದು ಅಂದುಕೊಂಡಿದ್ದಾರಾ?

ದೇವು-ಕುಮಾರಸ್ವಾಮಿ ಗೂಂಡಾಗಿರಿ



ಎಂತಾ ಆಶ್ಚರ್ಯ ನೋಡಿ: ಗೌಡರ ಒಬ್ಬ ಮಗ ಈಗ ಮುಖ್ಯಮಂತ್ರಿ, ಇನ್ನೊಬ್ಬ ಮಗ ಕ್ಯಾಬಿನೆಟ್ ಸಚಿವ ಹಾಗೂ ನಂದಿನಿ ಡೈರಿ ಅಧ್ಯಕ್ಷ. ಇನ್ನಿಬ್ಬರು ಮಕ್ಕಳು ನೂರಾರು ಕೋಟಿಯ ಅದಿರು ದಂಧೆ ಮಾಡುತ್ತಿರುವವರು, ಹೆಣ್ಣು ಮಕ್ಕಳು-ಸೊಸೆಯಂದಿಯರೆಲ್ಲಾ ಇವತ್ತು ಕೋಟ್ಯಾಧೀಶರು. ಇಷ್ಟೆಲ್ಲಾ 'ಸೌಭಾಗ್ಯ' ಸಿಕ್ಕಮೇಲೂ ದೇವೇಗೌಡ ಅತ್ತರೆ ಜನ ನಂಬುತ್ತಾರಾ? ಒಂದು ಕಡೆ ಅಳುತ್ತಾ ಬಾಯಲ್ಲಿ ಬೆಣ್ಣೆಯಂತಾ ಮಾತಾಡುತ್ತಿರುವ ಗೌಡರು ಮತ್ತೊಂದೆಡೆ ಬಗಲಲ್ಲಿ ದೊಣ್ಣೆ ಇಟ್ಟುಕೊಂಡೇ ಚಾಮುಂಡೇಶ್ವರಿ ಎಲೆಕ್ಷನ್ ಅಖಾಡಕ್ಕಿಳಿದಿದ್ದಾರೆ. ಹೇರಳ ದುಡ್ಡು ಜಾತಿ ಹಾಗೂ ಗೂಂಡಾಗಿರಿಗಳೇ ಈಗ ಗೌಡರ ಕೈಲಿರುವ ಅಸ್ತ್ರಗಳಾಗಿವೆ.

'ಕೇಡುಗಾಲ ಬಂದಾಗ ಕುದುರೆ ಮೊಟ್ಟೆ ಇಡ್‌ತಂತೆ'

ನಟ ರತ್ನಾಕರ ದೇವೇಗೌಡ ಅಳುವುದು, ಪುಂಡ ಮುಖ್ಯಮಂತ್ರಿ ಕುಮಾರಸ್ವಾಮಿ ವಿನಯ ಪ್ರದರ್ಶಿಸುವುದು, ಹುಂಬ ಮಂತ್ರಿ ಚೆನ್ನಿಗಪ್ಪ ನೂರರ ನೋಟುಗಳನ್ನು ಗಾಳಿಯಲ್ಲಿ ಎಸೆಯುವುದು, ಜೆಡಿಎಸ್‌ನ ಪುಡಿ ಲೀಡರ್‌ಗಳು ಅನ್ಯಪಕ್ಷದ ಅಭ್ಯರ್ಥಿಗಳ ಗ್ರಾಮ ಪ್ರವೇಶಕ್ಕೆ ತಡೆಯೊಡ್ಡಿ ಗೂಂಡಾಗಿರಿ ಮಾಡುವುದು....

ಚಾಮುಂಡೇಶ್ವರಿ ಉಪಚುನಾವಣೆ ಎಂಬ ಯುದ್ಧದಲ್ಲಿ ದೇವೇಗೌಡರ ಗ್ಯಾಂಗ್‌ನ ಇವೆಲ್ಲಾ ವರ್ತನೆಗಳೂ ಕೂಡ ಕೇಡುಗಾಲಕ್ಕೆ ಕುದುರೆ ಮೊಟ್ಟೆ ಇಡುವ ರೀತಿಯಲ್ಲೇ ಇವೆ.

ಜೆಡಿಎಸ್‌ನಿಂದ ಉಚ್ಚಾಟಿಸುವಾಗ ಸಿದ್ಧರಾಮಯ್ಯ ಯಾವ ಮಹಾ ಲೀಡರ್ ಎಂಬ ಉಡಾಫೆ ತೋರಿಸಿದ್ದ ಅಪ್ಪ-ಮಕ್ಕಳಿಗೀಗ ಪ್ರಾಣ ಸಂಕಟ.

ಬಳಿದಾಳೆ ಈಶ

ಈ ದುಷ್ಟ ಕುಟುಂಬದ ಕೈ ಸೇರಿರುವ ಅಧಿಕಾರ-ಅಕ್ರಮ ಸಂಪತ್ತುಗಳು ಉಳಿಯಬೇಕೆಂದರೆ ಅವರಿಗೆ ಸಿದ್ಧರಾಮಯ್ಯ ಸೋಲಲೇಬೇಕು.

ಹೋಗಲಿ, ಈ ಚುನಾವಣೆ ಎಂದಿನಂತೆ ಒಂದು ರಾಜಕೀಯ ಸಂಘರ್ಷ ಎಂದಿಟ್ಟುಕೊಂಡರೂ ದೇವೇಗೌಡರ ಕುಟುಂಬದವರು ತತ್ವ, ಸಿದ್ಧಾಂತ, ಜನಪರತೆ ಇಟ್ಟುಕೊಂಡು ಎಲೆಕ್ಷನ್‌ಗೆ ಇಳಿದಿದ್ದಾರಾ ಎಂದು ನೋಡಿದರೆ ಅಲ್ಲೂ ಮೋಸ!



ಆಳು-ಆಮಿಷಗಳ ನಾಟಕ

2006 ರ ಫೆಬ್ರವರಿ 3 ನೇ ತಾರೀಖು ಕುಮಾರಸ್ವಾಮಿ ಕೋ-ಜಾ ಸರ್ಕಾರದ ಮುಖ್ಯಮಂತ್ರಿಯಾದಾಗ ದೇವೇಗೌಡ ವಿಪರೀತ ಅತ್ತಿದ್ದರು. ತಮ್ಮ ಪಾರ್ಟಿಯ ಸೆಕ್ಯುಲರ್ ಆಶಯಗಳಿಗೆ ಮಗ ದ್ರೋಹ ಮಾಡಿದನೆಂದು 40 ಶಾಸಕರ ಸಹಿತ ಎಲ್ಲರನ್ನು ಉಚ್ಚಾಟಿಸಿದ್ದರು. ಆದರೆ ಇವತ್ತು ಅದೇ ದೇವೇಗೌಡ-ಕುಮಾರಸ್ವಾಮಿ ಜೋಡಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮನೆ ಮನೆಗೆ ನುಗ್ಗಿ ಓಟಿನ ಭಿಕ್ಷೆ ಬೇಡುತ್ತಿದೆ.



ಹಾಗಾದರೆ ಜನ ದೇವೇಗೌಡ ಜಾತ್ಯತೀತ ಎಂದು ಓಟು ಹಾಕಬೇಕೊ ಇಲ್ಲಾ ಕುಮಾರಸ್ವಾಮಿ ಕೋಮುವಾದಿ ಎಂದು ಓಟು ಹಾಕಬೇಕೊ?

ದೇವೇಗೌಡರ ಹತ್ತಿರ ಇದಕ್ಕೆ ಉತ್ತರವಿದೆಯಾ?

ಕಳೆದ ವಾರ ಮೈಸೂರಿನಲ್ಲಿ ಪ್ರಚಾರ ಸಭೆ ಕಾರ್ಯಕ್ರಮದಲ್ಲಿ ವೇದಿಕೆ ಮೇಲೆ ಗೌಡರು ಮತ್ತೊಮ್ಮೆ ಗಳಗಳನೆ ಅತ್ತರೆಂದು ವರದಿಗಳು ಪ್ರಕಟವಾದವು.

ಅಲ್ಲಾ, ಎಂತಾ ಆಶ್ಚರ್ಯ ನೋಡಿ: ಗೌಡರ ಒಬ್ಬ ಮಗ ಈಗ ಮುಖ್ಯಮಂತ್ರಿ, ಇನ್ನೊಬ್ಬ ಮಗ ಕ್ಯಾಬಿನೆಟ್ ಸಚಿವ ಹಾಗೂ ನಂದಿನಿ ಡೈರಿ ಅಧ್ಯಕ್ಷ. ಇನ್ನಿಬ್ಬರು ಮಕ್ಕಳು ನೂರಾರು ಕೋಟಿಯ ಅದಿರು ದಂಧೆ ಮಾಡುತ್ತಿರುವವರು, ಹೆಣ್ಣು ಮಕ್ಕಳು-ಸೊಸೆಯಂದಿಯರೆಲ್ಲಾ ಇವತ್ತು ಕೋಟ್ಯಾಧೀಶರು. ಇಷ್ಟೆಲ್ಲಾ 'ಸೌಭಾಗ್ಯ' ಸಿಕ್ಕಮೇಲೂ ದೇವೇಗೌಡ ಅತ್ತರೆ ಜನ ನಂಬುತ್ತಾರಾ?

ಗೌಡರಿಗೆ ಇಂತಾ ಸೂಕ್ಷ್ಮಗಳೆಲ್ಲಾ ಗೊತ್ತಾಗುವುದಿಲ್ಲ ಎಂದು ಜನ ಅಂದುಕೊಂಡರೆ ಅವರಂತ ದಡ್ಡರು ಯಾರೂ ಇಲ್ಲ ಎನ್ನಬೇಕಿದೆ.

ಏಕೆಂದರೆ ಒಂದು ಕಡೆ ಅಳುತ್ತಾ ಬಾಯಲ್ಲಿ ಬೆಣ್ಣೆಯಂತಾ ಮಾತಾಡುತ್ತಿರುವ ಗೌಡರು ಮತ್ತೊಂದೆಡೆ ಬಗಲಲ್ಲಿ ದೊಣ್ಣೆ ಇಟ್ಟುಕೊಂಡೇ ಚಾಮುಂಡೇಶ್ವರಿ ಎಲೆಕ್ಷನ್ ಅಖಾಡಕ್ಕಿಳಿದಿದ್ದಾರೆ. ಹೇರಳ ದುಡ್ಡು ಜಾತಿ ಹಾಗೂ ಗೂಂಡಾಗಿರಿಗಳೇ ಈಗ ಗೌಡರ ಕೈಲಿರುವ ಅಸ್ತ್ರಗಳಾಗಿವೆ.

ಬಳ್ಳಾರಿ ಗಣಿ ಲಂಚದ ಚಾಂಪಿಯನ್ ಸಚಿವ ಚೆನ್ನಿಗಪ್ಪ ಮೊನ್ನೆ ಮೋಟಗಳ್ಳಿ ಸ್ಲಂನಲ್ಲಿ ಪ್ರಚಾರ ಸಭೆ ನಡೆಸುವಾಗ ನೂರು ರೂಪಾಯಿಗಳ ಒಂದಿಡೀ ನೋಟಿನ ಬಂಡಲ್ ಅನ್ನು ಗಾಳಿಯಲ್ಲಿ ಮೇಲಕ್ಕೆಸೆದು ಸುದ್ದಿ ಮಾಡಿದ್ದಾನೆ. ಓಟಿಗಾಗಿ ನೋಟು ಎರಚುವ ಇಂತದ್ದೇ ಕೆಲಸವನ್ನು ಹೆಬ್ಬಾಳು, ಬೆಲವತ್ತಗಳಲ್ಲೂ ಚೆನ್ನಿಗಪ್ಪ ಮಾಡಿ ತೋರಿಸಿದ್ದಾನೆ. ಈಡುಗಾಯಿ ಚೂರು ಆಯ್ದುಕೊಳ್ಳುವಂತೆ ಸ್ಲಂನ ಬಡಜನ ಮುಗಿಬಿದ್ದು ನೋಟುಗಳನ್ನು ಆಯ್ದುಕೊಂಡಿದ್ದಾರೆ.

ದೇವೇಗೌಡ ಗ್ಯಾಂಗ್‌ನ ಎಲೆಕ್ಷನ್ ಪ್ರಚಾರದ ಸಣ್ಣ ಸ್ಯಾಂಪಲ್ ಇದು.



ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಲೀಡರ್ ಸತ್ಯಪ್ಪ ಎಂಬುವವರನ್ನು ಜೆಡಿಎಸ್‌ಗೆ ಎಳೆದುಕೊಳ್ಳಲು ಅನಾಮತ್ತು ಇಪ್ಪತ್ತೈದು ಲಕ್ಷದ ಆಮಿಷವೊಡ್ಡಿದ್ದರೂ ಸತ್ಯಪ್ಪ ಇವರ ಕೈಗೆ ಸಿಗದೆ ತಪ್ಪಿಸಿಕೊಂಡು ಹೋಗಿದ್ದಾರೆ. ಅದೇ ರೀತಿ ಆನಂದೂರು ರಾಮೇಗೌಡರಿಗೆ ಒಂದು ಸಾವಿರ ಓಟು ತರುವಷ್ಟು ಪ್ರಭಾವವಿದೆ ಎಂದು ಗೊತ್ತಾಗಿ ಆತನಿಗೂ ಹಣದ ಆಮಿಷವೊಡ್ಡಲು ಹುಡುಕಾಡಿದ್ದಾರೆ ಜೆಡಿಎಸ್ ಲೀಡರ್‌ಗಳು. ಲಾರಿ ಸ್ವಾಮಿ ಎಂಬ ಇನ್ನೊಬ್ಬ ಲೀಡರ್‌ನನ್ನು ಹೈಜಾಕ್ ಮಾಡಲೂ ಯತ್ನಿಸಿ ಗೌಡರ ಬಣ ವಿಫಲವಾಗಿದೆ.

ನಾನೊಬ್ಬ ಲೀಡರ್ ಎಂದು ಯಾರೇ ಬಂದರೂ ಸ್ಥಳದಲ್ಲೇ ಎರಡು ಸಾವಿರ ಕೊಡುತ್ತಿದ್ದಾರೆ ಜೆಡಿಎಸ್‌ನವರು. ಕ್ಷೇತ್ರದ ಬಡ ಮುಸ್ಲಿಮರನ್ನು ಒಲೈಸಲು ಎಲೆಕ್ಷನ್ ಮುಗಿದ ಕೂಡಲೇ ತಲಾ ಐದೈದು ಸಾವಿರ ಸಾಲ ಕೊಡಿಸುವುದಾಗಿಯೂ ಆಮಿಷ ನೀಡಲಾಗುತ್ತಿದೆ. ಜೆ.ಪಿ. ನಗರ, ಮೇಟಗಳ್ಳಿ ಏರಿಯಾಗಳಲ್ಲಿ ಐದು

ಸ್ವಾರ್ಥವು ಧರ್ಮದ ಅವಳಿ ಸಹೋದರಿ -ಪರ್ಸಿ ಶೆಲ್ಲಿ

ಕಡೆಗೂ ಗೋಣಿಚೀಲದಿಂದ ಬೆಕ್ಕು ಹೊರ ಬಂದಿದೆ: ಮೈಸೂರಿನ ಚಾಮುಂಡೇಶ್ವರಿ ಉಪ ಚುನಾವಣೆಯಲ್ಲಿ "ಅಸಲೀ ಜೆಡಿಎಸ್ ಅಭ್ಯರ್ಥಿ ನಾನೇ. ಶಿವಬಸಪ್ಪ ಅಲ್ಲ" ಎಂದು ಸ್ವತಃ ಮುಖ್ಯಮಂತ್ರಿ ಕುಮಾರಸ್ವಾಮಿಯವರೇ ಸಾರ್ವಜನಿಕ ಸಭೆಯಲ್ಲಿ ಘೋಷಿಸಿಕೊಂಡಿದ್ದಾರೆ.

ಅಲ್ಲಿಗೆ ಈ ಜುಜುಬಿ ಉಪಚುನಾವಣೆಯನ್ನು "ಧರ್ಮಯುದ್ಧ", "ಕಟ್ಟಕಡೆಯ ಹೋರಾಟ" ಇತ್ಯಾದಿಯಾಗಿ ಅವರ ಪಿತಾಶ್ರೀ ದೇವೇಗೌಡರು ಸಾಕ್ಷಾತ್ ಚಾಮುಂಡೇಶ್ವರಿ ದೇವಿಯ ಸನ್ನಿಧಾನದ ಎದುರೇ ಬಣ್ಣಿಸಿದ್ದು ಸುಮ್ಮನೆ ಔಪಚಾರಿಕವಾಗಲ್ಲ ಎಂಬುದು ಖಚಿತವಾದಂತಾಯಿತು....

ಹಾಗೆಯೇ ಕರ್ನಾಟಕದ ಹಾಲಿ ರಾಜಪರಿವಾರದ ತಂದೆ-ಮಕ್ಕಳು ಸದರಿ ಉಪಚುನಾವಣೆಯನ್ನು ಇಂತಹ ಒಂದು ಜೀವನ್ಮರಣದ ಸಂಗ್ರಾಮವನ್ನಾಗಿ ಯಾತಕ್ಕಷ್ಟು ಗಂಭೀರವಾಗಿ ಪರಿಗಣಿಸಿದ್ದಾರೆಂಬುದರ ಉದ್ದೇಶವೂ ಅವರ ಬಾಯಿಂದಲೇ ಪ್ರಕಟಗೊಂಡಿದೆ: "ನಾನಿರುವಷ್ಟು ದಿನವೂ ನನ್ನ ಕುರ್ಚಿ ಗಟ್ಟಿಯಾಗಿರ ಬೇಕಿದ್ದಲ್ಲಿ ದಯವಿಟ್ಟು ನಮ್ಮ ಅಭ್ಯರ್ಥಿಯನ್ನು ಗೆಲ್ಲಿಸಿ" ಎಂದೂ ಕುಮಾರಣ್ಣನೇ ಸ್ಪಷ್ಟಪಡಿಸಿದ್ದಾರೆ.


ಅರ್ಥಾತ್ ಇದು ಕುಮಾರಸ್ವಾಮಿಗೆ ಯಕಃಶ್ಚಿತ್ ಕುರ್ಚಿ ಉಳಿಸಿಕೊಳ್ಳುವ ಹೋರಾಟ.... ಅವರ ತಂದೆ ದೇವೇಗೌಡ್ರಿಗೆ ಇದು ತಮ್ಮ ಕುಟುಂಬದ ಅಧಿಕಾರ, ಪ್ರತಿಷ್ಠೆ ರಕ್ಷಿಸಿಕೊಳ್ಳುವ ಹೋರಾಟ... ಅಷ್ಟೇ! ಅಲ್ಲಿ ಅವರ ಜಾತ್ಯತೀತ ಜನತಾದಳವೆಂಬ ರಾಜಕೀಯ ಪಕ್ಷದ ಅಸ್ತಿತ್ವ, ಮಾನ, ಮರ್ಯಾದೆಗಳ್ಯಾವುವೂ ಮುಖ್ಯವಲ್ಲವೇ ಅಲ್ಲ.... ಕೇವಲ ಇದೊಂದು ತಮ್ಮ ಕೌಟುಂಬಿಕ ಪಾಳೇಗಾರಿಕೆಯನ್ನು ಭದ್ರಗೊಳಿಸಿ ಕೊಳ್ಳಲು ಅನಿವಾರ್ಯವಾದ ಸೆಣಸಾಟವಷ್ಟೇ... ಕರ್ನಾಟಕ ಅಭಿವೃದ್ಧಿ ರಂಗ ಎಂಬ ಹೆಸರಲ್ಲಿ ರಾಜ್ಯ ಸರ್ಕಾರದ ಮೇಲಿನ ತಮ್ಮ ಪರಿವಾರದ ಆಧಿಪತ್ಯ ವನ್ನು ಅಬಾಧಿತವಾಗಿ ಮುಂದುವರಿಸಿಕೊಂಡು ಹೋಗುವುದಷ್ಟೇ ಈ ತಂದೆ-ಮಗ ಜೋಡಿಯ ಚುನಾವಣಾ ಪ್ರಣಾಲಿಕೆ, ಸಿದ್ಧಾಂತ, ತತ್ವ ಎಲ್ಲವೂ!!

ಹೀಗೆ ತಮ್ಮ ಕುಟುಂಬದ ರಾಜಕೀಯ ಏಕಸ್ವಾಮ್ಯದ ಉಳಿವಿಗಾಗಿ ಏನೆಲ್ಲವನ್ನೂ ಮಾಡಲು ಸಿದ್ಧತೆ ಮಾಡಿಕೊಂಡಿರುವಂತೆ ಕಾಣುತ್ತಿರುವ ದೇವೇ ಗೌಡಾಜಿ ಮತ್ತು ಕುಮಾರಣ್ಣಗಳಿಗೆ ಈ ಘನೋದ್ದೇಶದ ಈಡೇರಿಕೆಗಾಗಿ ಸಿದ್ಧರಾಮಯ್ಯ ಎಂಬ ತಮ್ಮ ಸುದೀರ್ಘ ಕಾಲದ ರಾಜಕೀಯ ಒಡನಾಡಿಯನ್ನು ದಯನೀಯವಾಗಿ ಸೋಲಿಸಿ ಅವರನ್ನು ಶಾಶ್ವತವಾಗಿ ವನವಾಸಕ್ಕಟ್ಟುವುದೊಂದೇ ತತ್‌ಕ್ಷಣಕ್ಕೆ ಗೋಚರಿಸುತ್ತಿರುವ 'ಪವಿತ್ರ'ವಾದ ರಾಜಧರ್ಮ.....

ಇಂತಹ ತಂದೆ-ಮಕ್ಕಳ ರಾಜಕೀಯಕ್ಕೆ ಜೋತು ಬಿದ್ದು ಮೈಸೂರು ಜಿಲ್ಲೆಯಲ್ಲಿ ತಮ್ಮ ಗೌರವ, ಘನತೆಯನ್ನುಳಿಸಿಕೊಳ್ಳಬಹುದೆಂಬ ಭ್ರಮೆಗೆ ಬಲಿಯಾಗಲಿರುವ ಹಿರಿಯ ಮುತ್ಸದ್ದಿ ರಾಜಶೇಖರ ಮೂರ್ತಿಯವರಿಗೆ ಚಾಮುಂಡೇಶ್ವರಿ ಚುನಾವಣೆ ಅವರ 55 ವರ್ಷಗಳ ಸುದೀರ್ಘ ಸಾರ್ವಜನಿಕ ಬದುಕಿನ ಅತ್ಯಂತ ಕಳಂಕಮಯ ಅಧ್ಯಾಯವಾಗಲಿದೆ ಎಂಬ ಅರಿವೇ ಇದ್ದಂತಿಲ್ಲ...

ಚಾಮುಂಡೇಶ್ವರಿ ಉಪಚುನಾವಣೆ:

ಧರ್ಮಯುದ್ಧವೆಂಬ ಕರ್ಮಕಾಂಡ!



ಹಾಗೆಯೇ ಕೇವಲ ಲಿಂಗಾಯತ ಎಂಬ ಜಾತಿಲೇಬಲ್ಲಿನಿಂದಾಗಷ್ಟೇ ಜಾತ್ಯತೀತ ಜನತಾದಳದ ಟಿಕೆಟ್ಟು ಪಡಕೊಂಡು ಸಂಭ್ರಮದಿಂದ ಬೀಗುತ್ತಿರುವ 70 ರ ಹರೆಯದ ಕ್ಲಾಸ್ ಒನ್ ಕಂಟ್ರಾಕ್ಟರ್ ಶಿವಬಸಪ್ಪನವರಿಗೂ ಅವರ ನಾಯಕ ಕುಮಾರಣ್ಣನೇ "ನಾನೇ ನಿಜವಾದ ಅಭ್ಯರ್ಥಿ, ಅವರಲ್ಲ..." ಎಂದು ಘೋಷಿಸಿದ್ದು ಭಾರೀ ಅವಮಾನ, ಅವಹೇಳನವೆಂದು ಭಾಸವಾಗಲೇ ಇಲ್ಲ....

ಇದು ಕೇವಲ ಎರಡೂವರೆ ವರ್ಷಗಳ ಹಿಂದಷ್ಟೇ ಅಂದರೆ ಏಪ್ರಿಲ್ 2004 ರ ಸಾರ್ವತ್ರಿಕ ಚುನಾವಣೆಯಲ್ಲಿ ಅಂದಿನ ಕಾಂಗ್ರೆಸ್‌ನ ಎಸ್.ಎಂ. ಕೃಷ್ಣರ ಹೈಟೆಕ್ ರಾಜಕಾರಣದ ಸೋಗಲಾಡಿತನಕ್ಕೆ ಬುದ್ಧಿ ಕಲಿಸಿದ ಜನಶಕ್ತಿಯ ಪ್ರತೀಕವೆನಿಸಿದ್ದ ಜೆಡಿಎಸ್ ಎಂಬ ಪಾರ್ಟಿ ಅಧಿಕಾರದ ಅಮಲು ಮತ್ತು ಕೌಟುಂಬಿಕ ಯಜಮಾನಿಕೆಯ ಮತ್ತಿನಲ್ಲಿ ತಲುಪಿರುವ ಅಧೋಗತಿಯ ರಸಾತಳವೆಂಬಂತಾಗಿದೆ....

ಈ ರಂಪ-ರಾದ್ಧಾಂತದ ನಡುವೆ ದೇವೇಗೌಡ್ರು "ನಾನು ಜಾತಿವಾದಿಯಾಗಿದ್ರೆ ಸಿದ್ಧರಾಮಯ್ಯ ಉಪಮುಖ್ಯ ಮಂತ್ರಿ ಆಗ್ತಾನೇ ಇರ್‍ಲಿಲ್ಲ" ಎಂದು ಫರ್ಮಾನು ಹೊರಡಿಸಿದ್ದಾರೆ ಬೇರೆ.... ಬೇಷ್ ಗೌಡ್ರೇ... ತಮ್ಮಂತಹ ಜಾತ್ಯತೀತತೆಯ ದಾರ್ಶನಿಕನನ್ನು ಬಹುಶಃ ಕರ್ನಾಟಕ ಮಾತೆ ಹಿಂದೆಂದೂ ಪಡೆದಿರಲಾರಳು, ಮುಂದೆಂದಿಗೂ ಪಡೆಯುವುದು ಸಾಧ್ಯವೂ ಇಲ್ಲ!

ಜಾತ್ಯಾತೀತತೆ ಎಂದರೆ ಎಲ್ಲ ಬಗೆಯ ಸ್ವಜನಪಕ್ಷಪಾತವನ್ನು ಧಿಕ್ಕರಿಸಿ ನಿಲ್ಲುವುದು ಎಂಬ ಅರ್ಥವೇ ದೇವೇಗೌಡ್ರಿಗೆ ಅಪಥ್ಯವೆನಿಸುವುದು ಸಹಜವೇ... ಯಾಕೆಂದರೆ ಅವರೀಗ ಜಾತಿಯತೆಗಿಂತಲೂ ಅಸಹ್ಯಕರವಾದ ಕುಟುಂಬಪ್ರೇಮ ಮತ್ತು ವಂಶಪಾರಂಪರ್ಯ ಆಳ್ವಿಕೆಯ ಮಾಯಾಜಾಲದಲ್ಲಿ ಸಿಲುಕಿಬಿದ್ದಿದ್ದಾರೆ...

ನಿಜ, 1980 ರಿಂದ 2004 ರವರೆಗೂ ದೇವೇಗೌಡರ ರಾಜಕೀಯ ಒಡನಾಟದಲ್ಲಿ ನಾಯಕತ್ವದ ಮುಂಚೂಣಿ ಗೇರಿದವರೆಲ್ಲ ಬಹುತೇಕ ಅನ್ಯಜಾತಿಯವರೇ ಪ್ರಭಾವಿಗಳೆನಿಸಿದ್ದರು... ಪಿ.ಜಿ.ಆರ್. ಸಿಂಧ್ಯಾ, ಸಿದ್ಧರಾಮಯ್ಯ, ರಮೇಶ್ ಕುಮಾರ್, ಸಿ.ಎಂ. ಇಬ್ರಾಹಿಂ, ಎ.ಲಕ್ಷ್ಮೀಸಾಗರ್, ಕೋದಂಡರಾಮಯ್ಯ ಅವರಾದಿಯಾಗಿ ತೀರ ಇತ್ತೀಚಿನ ದಿನಗಳಲ್ಲಿ ಶಾಸಕತ್ವ-ವಕ್ತಾರತ್ವ ಪಡೆದುಕೊಂಡ ವೈ.ಎಸ್.ವಿ. ದತ್ತರವರೆಗೂ ಎಲ್ಲರೂ ಅವರ ಒಕ್ಕಲಿಗ ಜಾತಿಯ ಸಹೋದ್ಯೋಗಿಗಳಿಗಿಂತ ಹೆಚ್ಚಿನ ವರ್ಚಸ್ಸು ಪ್ರತಿಭೆ ಮತ್ತು ಸಾಮರ್ಥ್ಯವುಳ್ಳವರೇ ಆಗಿದ್ದುದೂ ಸತ್ಯವೇ....

ಆದರೆ ಹೀಗೆ ಹಲವು ಹತ್ತು ವಿಭಿನ್ನ ಜಾತಿ ಜನಾಂಗಗಳ ರಾಜಕೀಯ ಪ್ರತಿಭಾಶಾಲಿಗಳನ್ನೆಲ್ಲ ಏತಕ್ಕೆ ದೇವೇಗೌಡರೇ ಹಂತಹಂತವಾಗಿ ದೂರವಿಡುತ್ತ ಬಂದು ಅಂತಿಮವಾಗಿ ತಮ್ಮ ಪುತ್ರದ್ವಯರಾದ ರೇವಣ್ಣ-ಕುಮಾರಣ್ಣಗಳ ಏಳಿಗೆಗೋಸ್ಕರ ಅವರುಗಳನ್ನು ವ್ಯವಸ್ಥಿತವಾಗಿ ಮೂಲೆಗುಂಪು ಮಾಡಿದರು.....

ಯಾವತ್ತು ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರದ ಆರಂಭದಲ್ಲಿಯೇ ತಮ್ಮ ಪಾರ್ಟಿಯ ರಾಜ್ಯಾಧ್ಯಕ್ಷತೆಯಿಂದ ಸಿದ್ಧರಾಮಯ್ಯನವರನ್ನು ಅವರ ಹುಟ್ಟುಹಬ್ಬದ ದಿನದಂದೇ ಹಠಾತ್ತನೇ ಉಚ್ಚಾಟಿಸಿ ಮತ್ತದೇ ಲಿಂಗಾಯತರ ಓಲೈಕೆ ಹೆಸರಲ್ಲಿ ತಿಪ್ಪಣ್ಣ ಎಂಬ 'ಅಂಟ ಕೈಮ್ಯಾಕ್ಸ್' ಆಸಾಮಿಯನ್ನು ಪ್ರತಿಷ್ಠಾಪಿಸಿದರೋ ಅವತ್ತೇ ದೇವೇಗೌಡರ ಜಾತ್ಯತೀತತೆಯ ಅವಸಾನ ಆರಂಭವಾಗಿತ್ತು,

ಮುಂದೆ ಅತೀ ಅವಸರದಲ್ಲಿ ರೇಸ್‌ಕೋರ್ಸ್ ರಸ್ತೆಯ ಜೆಡಿಎಸ್ ಕಚೇರಿಯಲ್ಲಿ ಭಾರೀ ಸಡಗರದಿಂದ ಹೋಮ, ಹವನ, ಯಜ್ಞಾದಿಗಳನ್ನು ಜರುಗಿಸಿ ತಮ್ಮ ತೃತೀಯ ಪುತ್ರ ಕುಮಾರಣ್ಣನನ್ನು ಪಾರ್ಟಿ ಕಾರ್ಯಾಧ್ಯಕ್ಷ ಪಟ್ಟಕ್ಕೇರಿಸಿದರೋ ಅವತ್ತೇ ಗೌಡರು ಜಾತ್ಯತೀತತೆಯ ಪೂರ್ಣಾಹುತಿ ತೆಗೆದುಕೊಂಡಿದ್ದಾಗಿತ್ತು....!

ಅಲ್ಲಿಂದಾಚೆ ಅವರ ಪಾರ್ಟಿ ಮತ್ತು ಸರ್ಕಾರಗಳಲ್ಲಿ ಅವರ ಮಕ್ಕಳು, ಅಳಿಯಂದಿರು ಮತ್ತು ಸೊಸೆಯಂದಿರ ಕಾರುಬಾರು, ಕಾರ್ಯಾಚರಣೆಗಳೇ ಪ್ರಧಾನವೆನಿಸಿಬಿಟ್ಟವು.

ಇವತ್ತು ಚಾಮುಂಡೇಶ್ವರಿ ಅಸೆಂಬ್ಲಿ ಕ್ಷೇತ್ರದ ಮತದಾರನೆದುರಿಗಿರುವ ಅತ್ಯಂತ ನಿರ್ಣಾಯಕ ಸವಾಲೇನೆಂಬುದು ನಿಚ್ಚಳವಾಗಿದೆ: ರೈತರ ಉದ್ಧಾರ, ಮುಖ್ಯಮಂತ್ರಿಯ ಗ್ರಾಮವಾಸ್ತವ್ಯ, ಬಡವರ ಮಕ್ಕಳಿಗೆ ಬೈಸಿಕಲ್ಲು, ಐಟಿ-ಬಿಟಿ ಧಣಿಗಳಿಗೆ ಭರ್ಜರಿ ಸನ್ಮಾನ, ಸುವರ್ಣ ಕರ್ನಾಟಕದ ಆಚರಣೆಯ ಅದ್ದೂರಿ ಆಡಂಬರ.... ಇತ್ಯಾದಿಗಳಿಂದ ಮೈಮರೆತು ಜೆಡಿಎಸ್‌ನ ಶಿವಬಸಪ್ಪ ಎಂಬ ವಯೋವೃದ್ಧ ಡಮ್ಮಿ ಅಭ್ಯರ್ಥಿಯನ್ನು ಗೆಲ್ಲಿಸಿಬಿಡುವುದೇ, ಅಥವಾ ಇಂತಹ ಕಣ್ಣುಕಟ್ಟು ಕಾರ್ಯಕ್ರಮಗಳ ಮೂಲಕ ತಮ್ಮ ಸ್ವಂತ ಕುಟುಂಬದ ರಾಜಕೀಯ ಸರ್ವಾಧಿಕಾರವನ್ನು ಭದ್ರಪಡಿಸಿಕೊಳ್ಳಬೇಕೆಂಬ ಗೌಡರ ಪರಿವಾರದ ಕೌಟುಂಬಿಕ ಪಾಳೇಗಾರಿಕೆಯ ಹುನ್ನಾರವನ್ನು ಭಗ್ನಗೊಳಿಸುವುದೇ ಎಂಬುದು....

ಕರ್ನಾಟಕವನ್ನು ಕೌಟುಂಬಿಕ ಆಳ್ವಿಕೆಯ ಅಪಾಯದಿಂದ ಪಾರುಮಾಡಿ ಇಲ್ಲಿ ಆರೋಗ್ಯವಂತ ಪ್ರಜಾತಂತ್ರ ವ್ಯವಸ್ಥೆಯನ್ನು ಮತ್ತೆ ಪುನಶ್ಚೇತನಗೊಳಿಸಬೇಕಾದ ಐತಿಹಾಸಿಕ ಜವಾಬ್ದಾರಿಯನ್ನು ಚಾಮುಂಡೇಶ್ವರಿಯ ಮತದಾರ ನಿರ್ವಹಿಸಬೇಕಾಗಿದೆ....

ಇಂತಹ ಒಂದು ಇತಿಹಾಸ ನಿರ್ಮಾಣದ ಘಟ್ಟದಲ್ಲಿ ಮೈಸೂರಿನ ಮತದಾರನೆದುರು ಸಹಜ ಆಯ್ಕೆಯಾಗಿ ಅವತರಿಸಿದ್ದಾರೆ ಸಿದ್ಧರಾಮಯ್ಯ! ಯಾರೆಷ್ಟೇ ಆತನನ್ನು ದುರಹಂಕಾರಿ, ಸೋಮಾರಿ, ಸ್ವಪ್ರತಿಷ್ಠೆಯ ಮನುಷ್ಯ ಎಂದು ಮೂದಲಿಸಿದರೂ, ಸಿದ್ದು ಒಬ್ಬ ಸಮಾಜವಾದಿ ಜಾಯಮಾನದ, ಸಾಮಾಜಿಕ ನ್ಯಾಯದ ಪರ ಪ್ರಾಮಾಣಿಕ ಬದ್ಧತೆ ಮತ್ತು ಜನಪರ ಕಾಳಜಿಯುಳ್ಳ ನಿಯತ್ತಿನ ನಾಯಕ ಎಂಬುದನ್ನಂತೂ ಅವರ ಶತ್ರುಗಳೂ ನಿರಾಕರಿಸಲಾರರು......

-ರವೀಂದ್ರ ರೇಶ್ಮೆ

[illegible]ಪಿರ ಸಾಲ ಕೊಡಿಸುವ ಆಶ್ವಾಸನೆ ನೀಡುತ್ತಾ [illegible]ಪಿರಾರು ಅರ್ಜಿ ಫಾರಂಗಳನ್ನು ವಿತರಿಸಲಾಗಿದೆ.

ಇಷ್ಟು ಸಾಲದೆಂಬಂತೆ ಜಿ.ಟಿ. ದೇವೇಗೌಡರ ಪತ್ನಿ [illegible]ಶೋಧಮ್ಮನವರು; ಕಲ್ಲೂರು ನಾಗನಹಳ್ಳಿ, ಚತ್ರ, [illegible]ಹಂದೂರುಗಳ ಸ್ತ್ರೀಶಕ್ತಿ ಸಂಘಗಳಿಗೂ ಹೋಗಿ ತಲಾ [illegible]ರಡು ಸಾವಿರದಂತೆ 'ಜೆಡಿಎಸ್ ಲೋನ್' ಹಂಚಿ[illegible]ದಿದ್ದಾರೆ.

[illegible]

ಗೌಡರ ಆಳು-ಆಮಿಷದ ರಾಜಕೀಯ ಮೀರಿ [illegible]ದುಬಂದಿರುವ ಇನ್ನೊಂದು ಕರಾಳ ಮುಖವೆಂದರೆ [illegible].

[illegible]ದಿಕಾರದ ಪಾಳೇಗಾರಿಕೆ ಮೀರಿಸುವಂತೆ ಗೌಡರ [illegible] ತೋಳೇರಿಸಿಕೊಂಡು ನಿಂತಿದ್ದು ಪ್ರಜಾಪ್ರಭುತ್ವದ [illegible]ಣಕವಾಡಿದಂತಿದೆ. ಜೆಡಿಯು ಅಭ್ಯರ್ಥಿ ಗುರುಸ್ವಾಮಿ [illegible]. ಭೋಗಾದಿಗೆ ಪ್ರಚಾರಕ್ಕೆಂದು ಹೋದಾಗ [illegible] ಮಹೇಶ್ ಹಾಗೂ ರಮೇಶ್ ಎಂಬ [illegible] ಲೀಡರ್‌ಗಳು ತಡೆಯೊಡ್ಡಿದ್ದಾರೆ. ಅದೇ ರೀತಿ [illegible]ಂಗ್ರೆಸ್ ಶಾಸಕ ಮುಳವಳ್ಳಿಯ [illegible] [illegible]ಗೆ ಹೋದಾಗಲೂ ಜೆಡಿಎಸ್‌ನ ಪುಂಡ [illegible] ಗುಂಪು ಬೆದರಿಕೆ ಹಾಕಿದೆ.

[illegible] ಪಾರ್ಟಿ ಅಭ್ಯರ್ಥಿಗಳ ಪ್ರಚಾರಕ್ಕೆ ಅವಕಾಶ [illegible]ದೆಂದು ಗ್ರಾಮ ಪಂಚಾಯ್ತಿಯಲ್ಲಿ ನಿರ್ಣಯ [illegible] ಈ ಪುಢಾರಿಗಳು.

[illegible] ಗ್ರಾಮ ಪಂಚಾಯತಿಗಳೆಂದರೆ ದೇವೇಗೌಡರ ... ಜಹಗೀರೆಂದು ಇವರು ಭಾವಿಸಿದಂತಿದೆ.

'ದೀಪ ಆರಿ ಹೋಗುವ ಮುನ್ನ ಜೋರಾಗಿ ಉರಿಯುತ್ತದೆ'

[illegible] ರಾಜಕೀಯ ಮಾಡುತ್ತಿರುವ ದೇವೇಗೌಡ ಅಂಡ್ ಸನ್ಸ್‌ಗೆ ಇದು ಅರಿವಾದರೆ ಸರಿ.



[illegible]

[illegible]



ಕಂಟ್ರಾಕ್ಟರ್‌ಗಿರಿ ಮಾಡಿಕೊಂಡಿದ್ದ ಜೆಡಿಎಸ್ ಅಭ್ಯರ್ಥಿ ಶಿವಬಸಪ್ಪನವರಿಗೆ 'ಓ' ಅಂದರೆ 'ಠೊ' ಅನ್ನಲು ಬರುವುದಿಲ್ಲ, ಆದರೆ ಈ ಎಲೆಕ್ಷನ್ ಸೋಲಲಿ ಅಥವಾ ಗೆಲ್ಲಲಿ ಶಿವಬಸಪ್ಪನವರ ಬಹುತೇಕ ಹಣಕಾಸಿನ ಸಮಸ್ಯೆಗಳಂತೂ ಬಗೆಹರಿಯಲಿದೆ.

ಸರ್ಕಾರಿ ಕಾಮಗಾರಿ ಮಾಡಿಸಿದ್ದ ಬಾಬ್ತು ಅರವತ್ತು ಲಕ್ಷದವರೆಗೂ ಬಿಲ್ ಹಣ ಶಿವಬಸಪ್ಪನವರಿಗೆ ಬರಬೇಕಿತ್ತು. ಈಗ ಕುಮಾರಸ್ವಾಮಿ ಕೃಪೆಯಿಂದ್ಲ ಅಷ್ಟೂ ಹಣ ನಯಾಪೈಸೆ ಪರ್ಸೆಂಟೇಜ್ ಖರ್ಚಿಲ್ಲದೆ ಶಿವಬಸಪ್ಪನ ಜೇಬು ಸೇರಲಿದೆ. ಇದರ ಜೊತೆಗೆ ಪೆಟ್ರೋಲ್ ಬಂಕು ಇದು ಎಂದು ಒಂದು ಕೋಟಿಯವರೆಗೂ ಈತನಿಗೆ ಸಾಲವಿದೆ. ಅವೆಲ್ಲವೂ ಈಗ ತೀರುವಷ್ಟು ಹಣ ಜೆಡಿಎಸ್ ಅಭ್ಯರ್ಥಿ ಸುತ್ತಾ ಹರಿದಾಡುತ್ತಿದೆ.

ಅಸಲಿ ತಮಾಷೆ ಏನೆಂದರೆ ಕ್ಷೇತ್ರದ ಜನ 'ರಾಜಶೇಖರ ಮೂರ್ತಿಗಳು ಶಿವಬಸಪ್ಪನಿಗೆ ಇದಕ್ಕಿಂತಾ [illegible] ಉಪಕಾರ ಮಾಡಲು ಸಾಧ್ಯ' ಎಂದು [illegible] ಆಡಿಕೊಳ್ಳಲು ಶುರು ಮಾಡಿದ್ದಾರೆ. ಅಷ್ಟೇ ಅಲ್ಲ, [illegible] ಏಟು ಬಿದ್ದಂತೆ ತಾನೆ?

'ಬೀಳಲಿ ಬಿಡಿ ನನಗೇನೂ' ಎಂಬ ಉದಾಸೀನ [illegible] ಪಾರ್ಟಿಗೆ ಸೇರಿ ಮುಖ್ಯಮಂತ್ರಿ ಆಗಿ' ಎಂದು [illegible] ಮಾಡಿ [illegible]

ಈ [illegible] ಬಗ್ಗೆ [illegible]

ಒಕ್ಕಲಿಗರನ್ನೇ ತುಳಿಯುವ ಗೌಡ

ದೇವೇಗೌಡ ಕರ್ನಾಟಕ ಕಂಡ ಒಕ್ಕಲಿಗರ ಚಾಂಪಿಯನ್ ನಾಯಕ ಎಂಬ ನಂಬಿಕೆ ಇವತ್ತು ಒಕ್ಕಲಿಗರಲ್ಲೇ ಉಳಿದಿಲ್ಲ. ಇದಕ್ಕೆ ಗೌಡರ ಸ್ವಕುಟುಂಬ ಪ್ರೇಮವೇ ಮೂಲ ಕಾರಣ.


ವೈ.ಕೆ. ರಾಮಯ್ಯ, ಭೈರೇಗೌಡ, ಬಿ.ಎಲ್. ಶಂಕರ್, ಶಿವರಾಮೇಗೌಡ ಮುಂತಾದವರನ್ನೆಲ್ಲಾ ತುಳಿದು ಮೇಲೆ ಬಂದ ದೇವೇಗೌಡ ಈಗ ತಮ್ಮ ಮಕ್ಕಳು ಹಾಗೂ ಸೊಸೆಯಂದಿರಿಗಾಗಿ ಹೊಸ ತಲೆಮಾರಿನ ಒಕ್ಕಲಿಗ ಲೀಡರ್‌ಗಳನ್ನು ಮುಗಿಸುವ ಸ್ಕೆಚ್ ಹಾಕುತ್ತಿದ್ದಾರೆ. ಹಾಸನ, ಕೋಲಾರ, ಮಂಡ್ಯ, ಮೈಸೂರು ಜಿಲ್ಲೆಗಳ ರಾಜಕೀಯದೊಳಗೆ ಒಮ್ಮೆ ಕಣ್ಣು ಹಾಯಿಸಿದರೆ ಇವಕ್ಕೆಲ್ಲಾ ಸಾಕ್ಷಿಗಳು ಸಿಗುತ್ತವೆ.



ಭವಾನಿ



ಅನಿತಾ



ಬಾಲಕೃಷ್ಣೇಗೌಡ

ಹಾಸನ ಜಿಲ್ಲಾ ರಾಜಕೀಯದಲ್ಲಿ ರೇವಣ್ಣನ ಜೊತೆಗೆ ಬಾಲಕೃಷ್ಣೇಗೌಡನಿಗೂ ಜಾಗ ಮಾಡಿಕೊಡಲು ಗೌಡರು ಬಹಳ ಹಿಂದೆಯೇ ತಯಾರಿ ಮಾಡಿದ್ದಾರೆ.

ಹೊಳೇನರಸೀಪುರ ತಾಲ್ಲೂಕಿನ ಹಳ್ಳಿ ಮೈಸೂರು ಕುರುಬರ ಪ್ರಾಬಲ್ಯವಿರುವ ಹೋಬಳಿ. ಹಾಗಾಗಿ ಅವರನ್ನು ಒಲೈಸುವ ತಲೆನೋವೇ ಬೇಡವೆಂದು ಇಡೀ ಹೋಬಳಿಯನ್ನೇ ಅರಕಲಗೂಡು ಕ್ಷೇತ್ರಕ್ಕೆ ಹಾಕಸಲಾಗಿದೆ. ಅದೇ ರೀತಿ ಹಾಸನ ತಾಲ್ಲೂಕಿನ ಭಾಗವಾಗಿರುವ ಶಾಂತಿ ಗ್ರಾಮ ಹೋಬಳಿಯಲ್ಲಿ ಒಕ್ಕಲಿಗರ ಪ್ರಾಬಲ್ಯ ವಿರುವುದರಿಂದ ಅದನ್ನು ಹೊಳೆನರಸಿಪುರಕ್ಕೆ ಲಿಂಕ್ ಮಾಡಲಾಗಿದೆ.

ಮುಂದಿನ ಎಲೆಕ್ಷನ್‌ನಲ್ಲಿ ಬಾಲಕೃಷ್ಣೇಗೌಡನನ್ನು ಹೊಳೇನರಸೀಪುರದಿಂದಲೂ, ರೇವಣ್ಣನನ್ನು ಹಾಸನ ದಿಂದಲೂ ಕಣಕ್ಕಿಳಿಸುವ ದೂರಾಲೋಚನೆಯಿಂದ ಗೌಡರು ಈ ವ್ಯವಸ್ಥೆ ಮಾಡಿದ್ದಾರೆ ಎನ್ನಲಾಗಿದೆ.

ಅಷ್ಟೇ ಅಲ್ಲ, ಗೌಡರ ಅಳಿಯ ಡಾ. ಮಂಜುನಾಥರ ತಮ್ಮ ಒಬ್ಬ ಚೆನ್ನರಾಯಪಟ್ಟಣದಿಂದ ಜಿಲ್ಲಾ ಪಂಚಾಯ್ತಿ ಮೆಂಬರ್ ಆಗಿದ್ದು ಅವನಿಗೆ ಮುಂದೆ ಅಸೆಂಬ್ಲಿ ಟಿಕೆಟ್ ಕೊಡಿಸುವ ಉದ್ದೇಶದಿಂದ ಪುಟ್ಟೇಗೌಡರಿಗೆ ಟಿಕೆಟ್ ತಪ್ಪಿಸುವ ಸ್ಕೆಚ್ ಈಗಾಗಲೇ ರೆಡಿಯಾಗಿದೆ.

ಮಂಡ್ಯ ಜಿಲ್ಲೆಯ ಮದ್ದೂರಿನಲ್ಲಿ ಕಳೆದ ವಿಧಾನಸಭಾ ಎಲೆಕ್ಷನ್‌ನಲ್ಲಿ ಗೌಡರು ಆಡಿದ ನಾಟಕವನ್ನು ಜನ ಇನ್ನೂ ಮರೆತಿಲ್ಲ. ಕಾಂಗ್ರೆಸ್ ಅಭ್ಯರ್ಥಿಯಾಗಿದ್ದರೂ ತಮ್ಮ ಷಡ್ಡನೆಂಬ ಕಾರಣಕ್ಕೆ ಡಿ.ಸಿ. ತಮ್ಮಣ್ಣನನ್ನು ಗೆಲ್ಲಿಸಲು ಗೌಡರು ತಮ್ಮ ಪಾರ್ಟಿಯ ಅಭ್ಯರ್ಥಿಯನ್ನೇ ಬಲಿ ಕೊಟ್ಟಿದ್ದರು. ಬಲಿಷ್ಠ ಅಭ್ಯರ್ಥಿ ಸಿದ್ಧರಾಜುಗೆ ಜೆಡಿಎಸ್‌ನಿಂದ ನಾಮಪತ್ರ ಹಾಕಲು ಸೂಚಿಸಿ ಕೊನೆಗೆ ಆತನಿಗೆ ಕೈಕೊಟ್ಟು ಡಮ್ಮಿ ಕ್ಯಾಂಡಿಡೇಟ್ ವಿವೇಕಾನಂದನಿಗೆ ಬಿ-ಫಾರಂ ಕೊಟ್ಟಿದ್ದರು. ಕೊನೆಗೆ ಗೌಡರ ಒಳ ಆಸೆಯಂತೆ ಕಾಂಗ್ರೆಸ್‌ನ ತಮ್ಮಣ್ಣ ಗೆದ್ದಿದ್ದರು.

ಮೈಸೂರು ಜಿಲ್ಲೆಯಲ್ಲಿ ದೇವೇಗೌಡರ ಕುಟುಂಬ ಪ್ರೇಮದ ರಾಜಕೀಯಕ್ಕೆ ಬಲಿಯಾಗಲಿರುವ ಯುವ ಲೀಡರ್ ಎಂದರೆ ಸಾ.ರಾ. ಮಹೇಶ್. ಅಗರ್ಭ ಶ್ರೀಮಂತ ಸಾ.ರಾ. ಮಹೇಶ್ ಕೆ.ಆರ್. ನಗರದಿಂದ ಸ್ಪರ್ಧಿಸುವ ಕನಸು ಕಾಣುತ್ತಿದ್ದಾರೆ. ಆ ಕಾರಣಕ್ಕಾಗೇ ಈಗ ಚಾಮುಂಡೇಶ್ವರಿ ಎಲೆಕ್ಷನ್‌ನಲ್ಲಿ ಗೌಡರ ಅಭ್ಯರ್ಥಿ ಪರವಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ಕೆ.ಆರ್. ನಗರವನ್ನು ತಮ್ಮ ಸೊಸೆ ಭವಾನಿಗೆಂದು ಗೌಡರು ಈಗಾಗಲೇ ಒಳಮೀಸಲಾತಿ ಕಲ್ಪಿಸಿಬಿಟ್ಟಿದ್ದಾರೆ. ಸಾ.ರಾ. ಮಹೇಶ್ ಹತ್ತಿರ ಸಾಧ್ಯವಾದಷ್ಟೂ ಖರ್ಚು ಮಾಡಿಸಿ, ಕೆಲಸವನ್ನು ಮಾಡಿಸಿ ಕೊನೆಗೆ ಮೋಕ್ಷ ತೋರಿಸಲು ಗೌಡರ ಕುಟುಂಬ ಯೋಚಿಸಿಕೊಂಡಿದೆ.

ಒಳಮೀಸಲಾತಿ- ಗೌಡ ಪ್ರಾಮಾಣಿಕತೆ

ದೇವೇಗೌಡರು ಒಳಮೀಸಲಾತಿ ವಿಚಾರ ... ಸಿದಾಗೆಲ್ಲಾ ಬಹಳ ಜನ ನಂಬದೆ ಗೇಲಿ ಮಾಡು... ತ್ತಾರೆ. ಆದರೆ ಗೌಡರ ಬಗ್ಗೆ ಅಪನಂಬಿಕೆ ... ಕಾರಣಗಳಿಲ್ಲ. ಏಕೆಂದರೆ ಹೊಳೆನರಸೀಪುರ... ಬಾಲಕೃಷ್ಣೇಗೌಡನಿಗೆ, ಹಾಸನವನ್ನು ರೇವಣ... ರಾಮನಗರವನ್ನು ಕುಮಾರಸ್ವಾಮಿಗೆ, ಕೆ.ಆರ್. ... ಕ್ಷೇತ್ರ ಭವಾನಿಗೆ, ಕೋಲಾರ ಜಿಲ್ಲೆಯ ಕ್ಷೇತ್ರವೊ... ಇನ್ನೊಬ್ಬ ಸೊಸೆ ಅನಿತಾಗೆಂದು ಗೌಡರು ಈಗಾ... ಮೀಸಲಿರಿಸಿಬಿಟ್ಟಿದ್ದಾರೆ.

ಇದು ಒಳಮೀಸಲಾತಿಯಲ್ಲದೆ ಇನ್ನೇನು...

ಮುಂದಿನ ಎಲೆಕ್ಷನ್ ಬರುವಷ್ಟರಲ್ಲಿ ... ಮೊಮ್ಮಗ ಸದ್ಗುಣ ಸಂಪನ್ನ ನಿಖಿಲ್ ಗೌಡ... ಬೆಂಗಳೂರು ನಗರದ ಉತ್ತರಹಳ್ಳಿ ಕ್ಷೇತ್ರ ಮೀಸ... ಕಬ್ಬಡಿ ಬಾಬು ಮುಂತಾದ ಗೂಂಡಾಗಳ ... ಪಡೆದು ಗೆಲ್ಲಿಸಬಹುದಲ್ಲ!

ಹೀಗೆ ತಮ್ಮ ಕುಟುಂಬದವರೇ ಎಂಟ್ಹತ್ತು ... ಗೆದ್ದು ಶಾಸಕರಾಗಿ ಬಿಟ್ಟರೆ ಸಾಕಲ್ಲವೆ, ಸ... ಸರ್ಕಾರಗಳ ಈ ಕಾಲದಲ್ಲಿ ಏನು ಆಟ ಬೇಕಾ... ಆಡಬಹುದು ಎಂಬುದೇ ಗೌಡರ ಈ ಒಳಮೀ... ಲೆಕ್ಕಾಚಾರ.

ಅದೇ ರೀತಿ ಕೋಲಾರದಲ್ಲಿ ಸೊಸೆ ... ಕುಮಾರಸ್ವಾಮಿಗೆ ರಾಜಕೀಯ ವೇದಿಕೆ ರೆಡಿ ಮಾ... ತ್ತಿದ್ದಾರೆ.

ಒಟ್ನಾರೆ ಮುಂದಿನ ದಿನಗಳಲ್ಲಿ ಜಾ... ದಳವೆಂದರೆ ದೇವೇಗೌಡರ ಕುಟುಂಬದ ಆ... ಜೆಡಿಎಸ್ ಪಾರ್ಟಿಯೊಳಗೆ ಕೇವಲ ಗೌಡರ ಮ... ಸೊಸೆಯಂದಿರಷ್ಟೇ ಉಳಿಯುವ ದಿನಗಳು ... ದ್ದಂತಿಲ್ಲ.

ಕೋಮುವಾದಿ ಸರ್ಕಾರಕ್ಕೆ ಒಂದು ಎಚ್ಚರಿಕೆ

(3ನೇ ಪುಟದಿಂದ)

ಇದನ್ನು ಮುಂದುವರೆಸುತ್ತಿರುವ ನಿಮಗೆಲ್ಲ ನನ್ನ ಹಾರ್ದಿಕ ಅಭಿನಂದನೆಗಳು. ನಮ್ಮ ಸುತ್ತಲಿನ ದೇಶಗಳ ರಾಜಕೀಯ ದುರವಸ್ಥೆ ನೋಡಿದಾಗ ಸೆಕ್ಯುಲಾರ್ ಡೆಮಾಕ್ರಸಿಯ ಪ್ರಜೆಗಳಾದ ನಾವು ಎಷ್ಟು ಅದೃಷ್ಟವಂತರು ಎಂಬ ಮಾತು ಕಣ್ಣಿಗೆ ಕಟ್ಟುತ್ತದೆ. ಕರ್ನಾಟಕದಲ್ಲಿ ಬಾಬಾಬುಡನ್‌ಗಿರಿ ಸೂಫಿ ಸಂಪ್ರದಾಯದ ಜೀವಂತ ಸಂಕೇತ. ಇಂದು ನಮ್ಮ ಸೆಕ್ಯುಲರಿಸಂ ಹಾಗೂ ಡೆಮಾಕ್ರಸಿ ಈ ಎರಡೂ ಆಯಾಮಗಳನ್ನು ನಾಶಗೊಳಿಸಲು ದುಷ್ಟ ಶಕ್ತಿಗಳು ಕಾರ್ಯೋನ್ಮುಖವಾಗಿರುವಾಗ ಬಾಬಾಬುಡನ್‌ಗಿರಿ ಈ ವಿನಾಶಕ ಶಕ್ತಿಗಳ ಕಾರಾಸ್ಥಾನಕ್ಕೆ ಗುರಿಯಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ. ನಮ್ಮ ರಾಜ್ಯವ್ಯವಸ್ಥೆಯು ಈ ಎರಡು ಮೌಲ್ಯಗಳನ್ನು ಉಳಿಸಿಕೊಂಡು ಹೋಗದಿದ್ದರೆ ನಮ್ಮ ಮುಂದಿನ ಪೀಳಿಗೆ ನಮ್ಮನ್ನೆಂದೂ ಕ್ಷಮಿಸಲಾರದು. ನಾವು ಈ ವಿಷಯದಲ್ಲಿ ಹೋರಾಡಲೇಬೇಕು-ವಿಜಯ ಸಾಧಿಸಲೇಬೇಕು. ನಿಮಗೆ ನನ್ನ ಶುಭಾಷಯಗಳು.

-ಗಿರೀಶ್ ಕಾರ್ನಾಡ್



* * * * *

ಕರ್ನಾಟಕದ ಇತಿಹಾಸದಲ್ಲೇ ಕೋಮುವಾದದ ವಿರುದ್ಧ ಇಷ್ಟೊಂದು ಜನ ಸೇರಿರುವುದು, ಅವರನ್ನೆಲ್ಲ ನಮ್ಮ ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಸಂಘಟಿಸಿರುವುದು ಇದೇ ಮೊದಲನೇ ಬಾರಿ. ಇದು ಜಾತ್ಯತೀತ ಹೆಸರಿನಲ್ಲಿ ಮತ ಪಡೆದ, ಈಗ ಬಿಜೆಪಿಯೊಂದಿಗೆ ಅನೈತಿಕ ಸಂಬಂಧ ಹೊಂದಿರುವ ಕುಮಾರಸ್ವಾಮಿ/ದೇವೇಗೌಡರ ಸಂತಾನಕ್ಕೆ ಮುಂದೆ ಬರಲಿರುವ ಜನಾದೇಶದ ಎಚ್ಚರಿಕೆ ಮಾತ್ರವಲ್ಲ; ಬಸವಣ್ಣ, ಕುವೆಂಪು, ಶಿಶುನಾಳ ಷರೀಫರ ಪರಂಪರೆಯ ಈ ರಾಜ್ಯವನ್ನು ಎಂದೂ ಗುಜರಾತಿನ ನರೇಂದ್ರ ಮೋದಿಸ್ತಾನವನ್ನಾಗಿಸಲು ಬಿಡುವುದಿಲ್ಲ ಎಂಬ ಸಂದೇಶವೂ ಆಗಿದೆ.

ಕರ್ನಾಟಕದ ಇತಿಹಾಸದಲ್ಲೇ ಮೊಟ್ಟಮೊದಲನೆಯ ಬಾರಿ ಸರ್ಕಾರಕ್ಕೆ 'ಎಚ್ಚರಿಕೆ' ನೀಡುವ ಮತ್ತು ಸೌಹಾರ್ದ ಪರಂಪರೆಯನ್ನು ಎತ್ತಿಹಿಡಿಯುವ ಬೃಹತ್ ಸಮಾವೇಶ ನಡೆಯುತ್ತಿರುವಾಗ ಒಂದು ಅಪಸ್ವರವನ್ನು ಸಿಪಿಐಎಂ ಪಕ್ಷದ ನಾಯಕ ಜಿ.ಎನ್. ನಾಗರಾಜ್‌ರವರು ಎತ್ತಿದ್ದಾರೆ. ನಮ್ಮ ವೇದಿಕೆಯ ಈ ಹೋರಾಟದಲ್ಲಿ ನಕ್ಸಲರೂ, ಮುಸ್ಲಿಮ್ ಮೂಲಭೂತವಾದಿಗಳೂ ಸೇರಿದ್ದಾರೆಂದು ಹೇಳಿರುವ ನಾಗರಾಜ್‌ರವರ ಮಾತಿಗೂ ಅದನ್ನೇ ಹೇಳುತ್ತಿರುವ ಸಿ.ಟಿ. ರವಿಗೂ ಯಾವುದೇ ವ್ಯತ್ಯಾಸವಿಲ್ಲದಿರುವುದೇ ವಿಪರ್ಯಾಸ. ಕರ್ನಾಟಕಕ್ಕೆ ಇದಕ್ಕಿಂತ ಇನ್ನೊಂದು ದುರಂತ ಎದುರಾಗಿರಲಾರದು. ಸಿಪಿಎಂ ಪಕ್ಷದಲ್ಲಿ ನಮ್ಮ ಹಲವಾರು ಮಿತ್ರರಿದ್ದಾರೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳುತ್ತಾ ನಾಗರಾಜ್‌ರವರ ಗಮನಕ್ಕೆ ಕೆಲವು ಅಂಶಗಳನ್ನು ತರಲು ಯತ್ನಿಸುತ್ತೇನೆ.

ಯಾವ ಮಂಗಳೂರು ಇವತ್ತು ಸಂಘಪರಿವಾರದ ಕಾರಸ್ಥಾನವಾಗಿದೆಯೋ, ಯಾವ ಕರಾವಳಿ ಇಂದು ಕೋಮುಗಲಭೆಗಳಲ್ಲಿ ಬೆಂದು ಹೋಗುತ್ತಿದೆಯೋ, ಇದೇ ಮಂಗಳೂರಿನಲ್ಲಿ ಹಿಂದೊಮ್ಮೆ ಸಿಪಿಎಂ ಪಕ್ಷ ಪ್ರಭಾವಶಾಲಿ ಆಗಿತ್ತು. ಆದರೆ ಕಮ್ಯುನಿಸ್ಟ್ ಪಕ್ಷದ ನಾಯಕರ ಮೊಂಡುತನ, ಅರಾಜಕತೆ ಮತ್ತು ಭಾಷಣಗಳ ಮೂಲಕ ಬದಲಾವಣೆ ತರುತ್ತೇವೆಂಬ ನಂಬಿಕೆಯಿಂದಾಗಿ ಇವತ್ತು ಅಲ್ಲೆಲ್ಲ ಸಂಘಪರಿವಾರ ಗಟ್ಟಿಗೊಂಡಿದೆ. ಇದಕ್ಕೆ ಕಾರಣಗಳೇನು ಎಂದು ವಿಶ್ಲೇಷಿಸುವ ಬದಲು ಜಿ.ಎನ್. ನಾಗರಾಜ್‌ರವರು ಸಿ.ಟಿ. ರವಿ ಜೊತೆಗೂಡಿ ನಮ್ಮ ಹೋರಾಟದ ಮೇಲೆ ಮಣ್ಣೆರಚಲು ಪ್ರಯತ್ನಿಸುತ್ತಿದ್ದಾರೆ. ಇದರಿಂದಾಗಿ ಕೋಮುವಾದದ ವಿರುದ್ಧ ಹೋರಾಡುವ ನಮ್ಮ ವೇದಿಕೆಯ ದಿಟ್ಟನಿಲುವು ಬದಲಾಗುವುದಿಲ್ಲ. ಆದರೆ ನಾಗರಾಜ್‌ರವರ ಇಂತಹ ವಾದಗಳಿಂದಾಗಿ ನಮ್ಮ ರಾಜ್ಯದಲ್ಲಿ ಕೋಮುಶಕ್ತಿಗಳು ಬೆಳೆಯುತ್ತವೆ ಎಂಬ ಅರಿವು ಅವರಿಗಾಗಲಿ ಎಂದು ಆಶಿಸುತ್ತೇನೆ.

-ಗೌರಿ ಲಂಕೇಶ್

ಮಾನವ ಜನಾಂಗಕ್ಕೆ ಅತಿ ದೊಡ್ಡ ಶಾಪವೆಂದರೆ ಸ್ವಾರ್ಥ -ವಿಲಿಯಂ ಗ್ಲ್ಯಾಡ್‌ಸ್ಟೋನ್

ಯಡ್ಡಿ V/s ಅನಂತ್

ಸ್ಫೋಟಗೊಳ್ಳಲಿದೆ ಬಿಜೆಪಿ ಭಿನ್ನಮತ!

ರಾಜ್ಯದಲ್ಲಿ ಮೊದಲ ಬಾರಿ ಅಧಿಕಾರದ ರುಚಿ ಕಾಣುತ್ತಿರುವ ಬಿಜೆಪಿಯಲ್ಲಿನ ಭಿನ್ನಮತ ಸ್ಫೋಟಗೊಳ್ಳುವ ಕಾಲ ಸನ್ನಿಹಿತವಾಗುತ್ತಿದೆ.




ಸದ್ಯ ರಾಜ್ಯ ಬಿಜೆಪಿಯಲ್ಲಿ ಯಡಿಯೂರಪ್ಪ ಬಣದ ಪ್ರಾಬಲ್ಯ ದಿನೇದಿನೇ ಹೆಚ್ಚುತ್ತಿರುವುದು ಸಹಜವಾಗಿ ಅನಂತ್‌ಕುಮಾರ್ ಬಣಕ್ಕೆ ಇರಿಸುಮುರಿಸು ಉಂಟು ಮಾಡುತ್ತಿದೆ. ರಾಜ್ಯ ಬಿಜೆಪಿಯ ಮೇಲೆ ಸಂಪೂರ್ಣ ಹಿಡಿತ ಸಾಧಿಸಲು ಈ ಬಣಗಳ ನಡುವೆ ನಡೆಯುತ್ತಿರುವ ಕಿತ್ತಾಟ ಮೊನ್ನೆ ಲಾಲಕೃಷ್ಣ ಅದ್ವಾನಿ ಬಂದಾಗ ಬಹಿರಂಗಗೊಂಡಿದೆ.


ಜಿಲ್ಲಾಧ್ಯಕ್ಷ ಪೋಸ್ಟ್ ಯಡ್ಡಿಮಯ...

ರಾಜ್ಯ ಬಿಜೆಪಿ ಚುನಾವಣಾ ಅಧಿಕಾರಿಯನ್ನು ಕೇರ್ ಮಾಡದೇ 23 ಜಿಲ್ಲಾಧ್ಯಕ್ಷರ ನೇಮಕ ಮಾಡಿಬಿಟ್ಟಿತು ಯಡಿಯೂರಪ್ಪ ಬಣ. ಹೀಗೆ ಬಹುತೇಕ ಜಿಲ್ಲೆಗಳಲ್ಲಿ ಬಿಜೆಪಿಯ ಮೇಲೆ ಯಡಿಯೂರಪ್ಪ ಬಣ ಹಿಡಿತ ಸಾಧಿಸಲು ನೋಡಿದ್ದೇ ಅನಂತ್ ಬಣದವರ ಕಣ್ಣುಗಳನ್ನು ಕೆಂಪಗೆ ಮಾಡಿಬಿಟ್ಟಿದೆ.

ರಾಜ್ಯ ಬಿಜೆಪಿ ಚುನಾವಣಾಧಿಕಾರಿ ರಘುನಾಥರಾವ್ ಮಲ್ಕಾಪುರೆ ಸಮ್ಮುಖದಲ್ಲೇ ಎಲ್ಲ ಜಿಲ್ಲಾಧ್ಯಕ್ಷರ ನೇಮಕವಾಗಬೇಕಿತ್ತು. ಆದರೆ ಸದಾನಂದಗೌಡ, ಯಡಿಯೂರಪ್ಪರು ರಘುನಾಥರಾವ್ ಮಲ್ಕಾಪುರೆಗೆ ಒಂದು ಮಾತೂ ಕೇಳದೇ, ಎಲ್ಲ ನೇಮಕಾತಿಗಳನ್ನು ಏಕಪಕ್ಷೀಯವಾಗಿ ಮಾಡಿಬಿಟ್ಟರು. ಯಡಿಯೂರಪ್ಪ ಬಣ ತರಾತುರಿಯಲ್ಲಿ ಜನಬೆಂಬಲವೇ ಇಲ್ಲದ ಪುಡಿನಾಯಕರನ್ನು ಜಿಲ್ಲಾಧ್ಯಕ್ಷರನ್ನಾಗಿ ಮಾಡಿದ್ದು, ಅನಂತ್ ಬಣದ ವಿರೋಧಕ್ಕೆ ಸಮರ್ಥನೆಯಾಗಿಬಿಟ್ಟಿತು. ಮಂಡ್ಯದ ಕೆರಗೋಡು ಕ್ಷೇತ್ರದಲ್ಲಿ ಎರಡು ಸಾರಿ ಠೇವಣಿ ಕಳೆದುಕೊಂಡಿರುವ ನಾಗರಾಜಪ್ಪನೇ ಮಂಡ್ಯ ಜಿಲ್ಲಾಧ್ಯಕ್ಷ. ಚಿತ್ರದುರ್ಗ ಜಿಲ್ಲೆಯ ಬಿಜೆಪಿ ಅಧ್ಯಕ್ಷರಾಗಬೇಕಿದ್ದ ಸಂಭಾವಿತ ಬಸವರಾಜ ಮಂಡಿಮಠಗೆ ಕೊಕ್ ಕೊಟ್ಟು, ಸಂಸದ ಜಿ.ಎಂ. ಸಿದ್ದೇಶ್ವರ ಮನುಷ್ಯ ಜಿ.ಎಂ. ಸುರೇಶ್‌ರವರನ್ನು ಜಿಲ್ಲಾಧ್ಯಕ್ಷರನ್ನಾಗಿ ಮಾಡಿದ್ದು ಪಕ್ಷದಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ. ಬಾಗಲಕೋಟೆಯಲ್ಲಿ ಯಡಿಯೂರಪ್ಪರ ಬೆಂಬಲಿಗ, ಜಮಖಂಡಿ ಶಾಸಕ ಸಿದ್ದು ಸವದಿಯನ್ನು ಜಿಲ್ಲಾಧ್ಯಕ್ಷನನ್ನಾಗಿ ಮಾಡಿದ್ದು, ಲಿಂಬಾವಳಿಗೆ ಕಿರಿಕಿರಿ ಮಾಡುತ್ತಿದೆ. ಇಂತಹ ವಿವಾದಾತ್ಮಕ ನೇಮಕಾತಿಗಳೇ ಅಧಿಕವಾಗಿವೆ.



ಅರವಿಂದ ಲಿಂಬಾವಳಿ




ವಿಶ್ವೇಶ್ವರ ಭಟ್

ರಾಜ್ಯ ಬಿಜೆಪಿ ಚುನಾವಣಾಧಿಕಾರಿಯನ್ನಾಗಿ ಮೈಸೂರಿನ ತೋಂಟದಾರ್ಯ ಅಥವಾ ಧಾರವಾಡದ ನಿಂಬಣ್ಣವರ್ ಅವರನ್ನು ನೇಮಿಸಬಹುದೆಂದು ಸದಾನಂದಗೌಡ ಸೂಚಿಸಿದ್ದರು. ಹೆಚ್ಚಾಗಿ ಅಧ್ಯಕ್ಷರು ಸೂಚಿಸಿದ ವ್ಯಕ್ತಿಯೇ ಚುನಾವಣಾಧಿಕಾರಿ ಆಗುವುದು ಸಾಮಾನ್ಯ. ಆದರೆ ದೆಹಲಿ ಮಟ್ಟದಲ್ಲಿ ಲಾಬಿ ಮಾಡಿದ ಅನಂತ್ ಗ್ಯಾಂಗ್ ತಮ್ಮ ಬೆಂಬಲಿಗ ರಘುನಾಥರಾವ್ ಮಲ್ಕಾಪುರೆಯವರನ್ನು ಚುನಾವಣಾಧಿಕಾರಿಯನ್ನಾಗಿ ನೇಮಕ ಮಾಡಿಕೊಂಡಿತು. ಆದರೆ ಇದಕ್ಕೆ ಯಡಿಯೂರಪ್ಪ ಬಣ ತಿರುಗೇಟು ನೀಡಿಬಿಟ್ಟಿತು. ಅನಂತ್ ಶಿಷ್ಯ ರಘುನಾಥರಾವ್ ಮಲ್ಕಾಪುರೆಯವರನ್ನು ಒಂದಿಷ್ಟೂ ಪರಿಗಣಿಸದೇ, ಎಲ್ಲಾ ಜಿಲ್ಲಾಧ್ಯಕ್ಷರ ನೇಮಕ ಮಾಡಿಬಿಟ್ಟಿತು.

ಮೊನ್ನೆ ಅದ್ವಾನಿ ಬೆಂಗಳೂರಿಗೆ ಬಂದಾಗ ಅನಂತ್ ಬಣ ಈ ವಿಷಯ



ಪ್ರಸ್ತಾಪ ಮಾಡಿದೆ. ಕರ್ನಾಟಕ ಬಿಜೆಪಿ ಉಸ್ತುವಾರಿ ನೋಡಿಕೊಳ್ಳುವ ಸಾವಂತ್ ಗೆಲ್ಹೋಟರ ಎದುರೇ ಈ ಕುರಿತು ಚರ್ಚೆಯಾಗಿದೆ. ಅವಿರೋಧವಾಗಿ ಆಯ್ಕೆಯಾಗಿರುವ ಬೆಂಗಳೂರು ನಗರ ಜಿಲ್ಲಾಧ್ಯಕ್ಷ ಬಿ.ಎನ್. ವಿಜಯಕುಮಾರ್ ಒಬ್ಬರನ್ನು ಬಿಟ್ಟು ಉಳಿದವರೆಲ್ಲರನ್ನೂ ಬದಲಾಯಿಸಲು ತೀರ್ಮಾನಿಸಲಾಗಿದೆ. ಆದರೆ ಇದಕ್ಕೆ ಯಡಿಯೂರಪ್ಪ, ಸದಾನಂದಗೌಡರ ಟೀಮು ಅಡ್ಡಗಾಲು ಹಾಕುವುದು ಖಂಡಿತ. ಅಲ್ಲಿಗೆ ರಾಜ್ಯ ಬಿಜೆಪಿಯ ಎರಡೂ ಬಣಗಳು ಬಹಿರಂಗ ಕದನಕ್ಕೆ ನಿಲ್ಲುವುದು ಖಚಿತ.



ಇಂದು (ಭಾನುವಾರ) ನಡೆಯಲಿರುವ ರಾಷ್ಟ್ರೀಯ ಅಧ್ಯಕ್ಷರ ಚುನಾವಣೆ ಮುಗಿದ ನಂತರ ರಾಜ್ಯ ಬಿಜೆಪಿಯಲ್ಲಿ ತೀವ್ರ ಭಿನ್ನಮತ ಚಟುವಟಿಕೆಗಳು ಶುರುವಾಗಲಿವೆ. ಏಕೆಂದರೆ ಆಗ ಸದಾನಂದಗೌಡರ ತಾತ್ಕಾಲಿಕ ಅಧ್ಯಕ್ಷಾವಧಿ ಮುಗಿಯುತ್ತ ಬರುತ್ತದೆ. ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನಕ್ಕಾಗಿ ಅನಂತ್, ಯಡ್ಡಿ ಬಣಗಳು ಪೈಪೋಟಿಗೆ ಬೀಳುವುದು ಈಗಲೇ ನಿಚ್ಚಳವಾಗಿದೆ. ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸ್ಥಾನ ಬಿಡಲೊಲ್ಲದ ಅನಂತ್‌ಕುಮಾರ್ ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ಬರುವ ಮನಸ್ಸು ಮಾಡುತ್ತಿಲ್ಲ, ಆದರೆ ಅನಂತ್‌ರ ಶಿಷ್ಯ ನೆಚ್ಚಿನ ಆರ್. ಅಶೋಕ್‌ರಿಗೆ ಸಚಿವ ಸ್ಥಾನದ ಮೋಹದಿಂದ ಹೊರಬರಲಾಗುತ್ತಿಲ್ಲವಾದ್ದರಿಂದ, ಅವರೂ ಅಧ್ಯಕ್ಷ ಗಾದಿಯನ್ನು ನಿರಾಕರಿಸುತ್ತಿದ್ದಾರೆ. ಸದ್ಯದ ಸುದ್ದಿಯ ಪ್ರಕಾರ ಅನಂತ್ ಶಿಷ್ಯರಾದ ಕಾಗೇರಿ ವಿಶ್ವೇಶ್ವರ ಭಟ್ ಅಥವಾ ಅರವಿಂದ ಲಿಂಬಾವಳಿ ಅಧ್ಯಕ್ಷ ಸ್ಥಾನದ ಸ್ಪರ್ಧೆಗೆ ಧುಮುಕಲಿದ್ದಾರೆ.

ಸದಾನಂದ ಗೌಡರ ಕಾರ್ಯವೈಖರಿಯೂ ಬಹುತೇಕ ಬಿಜೆಪಿ ಕಾರ್ಯಕರ್ತರಲ್ಲಿ ಅಸಮಾಧಾನ ಮೂಡಿಸಿದಂತಿದೆ. ಯಡಿಯೂರಪ್ಪ, ಸದಾನಂದಗೌಡರು ದೇವೇಗೌಡರ ಅಣತಿಯಂತೆ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಹೈಕಮಾಂಡ್‌ಗೆ ಮನವರಿಕೆ ಮಾಡಲು ಅನಂತ್ ಗ್ಯಾಂಗ್ ಯತ್ನಿಸುತ್ತಿದೆ. ಅಧ್ಯಕ್ಷರಾದ ಈ ಒಂಭತ್ತು ತಿಂಗಳಲ್ಲಿ ಸದಾನಂದಗೌಡರು ಕೇವಲ ಏಳು ಸಲ ಮಾತ್ರ ಪದಾಧಿಕಾರಿಗಳ ಮೀಟಿಂಗ್ ಕರೆದಿರುವುದು, ಆ ಮೀಟಿಂಗುಗಳನ್ನು ಪಕ್ಷದ ಕಚೇರಿಯಲ್ಲಿ ನಡೆಸದೇ ಯಡಿಯೂರಪ್ಪನವರ ಮನೆಯಲ್ಲೇ ನಡೆಸಿರುವುದು, ಸದಾನಂದಗೌಡರು ಬೆಂಗಳೂರು, ಮಂಗಳೂರು ಬಿಟ್ಟು ಬೇರೆ ಜಿಲ್ಲೆಗಳ ಪ್ರವಾಸ ಮಾಡದಿರುವುದು, ಪವರ್‌ಫುಲ್ ಅಲ್ಲದ ಸದಾನಂದಗೌಡರ ಆರೋಗ್ಯವೂ ಸರಿಯಾಗಿಲ್ಲದಿರುವುದು... ಇವೆಲ್ಲ ಕಾರಣಗಳನ್ನು ಮುಂದೊಡ್ಡಿ ಸದಾನಂದಗೌಡರ ಎತ್ತಂಗಡಿಗೆ, ಆ ಮೂಲಕ ಯಡಿಯೂರಪ್ಪ ಬಣದ ಪ್ರಾಬಲ್ಯವನ್ನು ಕಡಿತಗೊಳಿಸಲು ಅನಂತ್‌ಕುಮಾರ್ ಬಣ ತೀವ್ರ ಕಾರ್ಯಾಚರಣೆಗೆ ಇಳಿಯಲಿದೆ. ಇತ್ತ ಅಧಿಕಾರದ ಸವಿರುಚಿಯಲ್ಲಿರುವ ಯಡಿಯೂರಪ್ಪ ಬಣ ಸದಾನಂದಗೌಡರನ್ನೇ ಮುಂದುವರೆಸುವ ಮೊಂಡಾಟ ಮಾಡಲಿದೆ.

ಚಾಮುಂಡೇಶ್ವರಿ ಉಪಚುನಾವಣೆ ಮುಗಿದ ನಂತರ ಬಿಜೆಪಿಯೊಳಗೆ ಶುರುವಾಗಲಿದೆ ಬಹಿರಂಗ ಕದನ..... ಅಧಿಕಾರಕ್ಕಾಗಿ, ಪ್ರಾಬಲ್ಯಕ್ಕಾಗಿ ಕಿತ್ತಾಟ.... ಅದೂ ಬಹುತೇಕ ದೇವೇಗೌಡರ ಪರವಿರುವ ಬಿಜೆಪಿ ಹಾಗೂ ಒರಿಜಿನಲ್ ಬಿಜೆಪಿ ಎಂಬ ಜಗಳವಾಗಿರುತ್ತದೆ.

– ಪಿ.ಕೆ.ಮಲ್ಲನಗೌಡರ್

ಕುಂಬಳಕಾಯಿ ಕಳ್ಳ ಎಂದರೆ...

ಒಂದು ಪತ್ರ

ಟಿಪ್ಪು ಸುಲ್ತಾನನ ಹೆಸರನ್ನು ಕನಸಲ್ಲೂ ಕನವರಿಸುವವರಿದ್ದರೆ ಅದು ಖಂಡಿತ ಶ್ರೀಯುತ ಚಿದಾನಂದ ಮೂರ್ತಿಗಳಲ್ಲದೇ ಬೇರಾರೂ ಆಗಲಾರರು. ಮೊನ್ನೆ 'ಪ್ರಜಾವಾಣಿ' (18.11.06) ಯಲ್ಲಿ ತಮ್ಮ ಅದೇ ಹಳೇ ರಾಗವನ್ನೇ ಅವರು ಎಳೆಯ ಹೋದದ್ದು ತಮಾಷೆಯಾಗಿತ್ತು.

ಟಿಪ್ಪು ಮತಾಂಧ ಎನ್ನಲು ಶ್ರೀಯುತ ಸಂಶೋಧಕರು ಕೊಟ್ಟ ಕಾರಣ ಎಷ್ಟು ಬಾಲಿಶವಾಗಿತ್ತೆಂದರೆ ಇವರು ನಿಜಕ್ಕೂ ಸಂಶೋಧಕರೇ ಎಂಬ ಅನುಮಾನ ಬರುವಂತಿತ್ತು. ಶಾಸನ ಹಾಗು ಖಡ್ಗದಲ್ಲಿ ಕಾಫಿರರ ವಿರುದ್ಧ ಹೋರಾಡಿ, ಕಾಫಿರರನ್ನ ಕೊಲ್ಲಿ ಎಂಬ ಸಂಗತಿ ಬರೆದಿದ್ದೇ. ಆತ ಹಿಂದೂ ದ್ವೇಷಿ ಮತಾಂಧ ಎಂದೆನ್ನಲು ಸಾಕಂತೆ. ಕುಂಬಳಕಾಯಿ ಕಳ್ಳ ಅಂದಾಗ ಯಾರೋ ಹೆಗಲು ಮುಟ್ಟಿಕೊಂಡರಂತೆ ಹಾಗಿದೆ ಮೂರ್ತಿಯವರ ವಾದ. ಅಲ್ಲಾ ಸಂಶೋಧಕರೆ, ಈ ಕಾಫಿರರೆಂದರೆ ಹಿಂದೂಗಳೆಂದದ್ದು ಯಾರು? ಈ ಬಗ್ಗೆ ಒಂದು ಸಂಶೋಧನೆಯಾಗಬೇಕಲ್ಲ! ಈ ಜೆಹಾದ್, ಕಾಫಿರ ಮುಂತಾದ ಪದಗಳು ಮೂಲ ಅರ್ಥಕ್ಕಿಂತ ಅಪಾರ್ಥಗೊಂಡಿದ್ದೇ ಹೆಚ್ಚು (ಇದಕ್ಕೆ ಲಾಡೆನ್‌ನಂತ ಮುಸ್ಲಿಮರ ಕೊಡುಗೆಯೂ ಇದೆ). ಕಾಫಿರ ಅರ್ಥಾತ್ ಧರ್ಮ ವಿರೋಧಿ, ನಾಸ್ತಿಕ, ಅವಿಶ್ವಾಸಿಗಳು ಕೇವಲ ಇಸ್ಲಾಂ ಧರ್ಮದ ಸೊತ್ತೇನಲ್ಲ, ಕ್ರಿಶ್ಚಿಯನ್, ಅಷ್ಟೇ ಏಕೆ ಎಲ್ಲಕ್ಕಿಂತ ಹೆಚ್ಚಾಗಿ ಹಿಂದೂ ಧರ್ಮದಲ್ಲೇ ಈ ಕಾಫಿರ ತತ್ವ ಪ್ರಚಾರದಲ್ಲಿದೆ. ಹಿಂದೂಗಳ ಸ್ಮೃತಿ, ನೀತಿ ಶಾಸ್ತ್ರ ಪುರಾಣ ಗ್ರಂಥ ಇತ್ಯಾದಿಗಳಲ್ಲೂ ಧರ್ಮ ವಿರೋಧಿಗಳನ್ನು ರಾಜನಾದವನು ಬಗ್ಗು ಬಡಿಯಬೇಕೆಂಬ ಸಂಗತಿಯ ಉಲ್ಲೇಖಗಳಿವೆ.

ರಾಮಾಯಣದಲ್ಲಿ ಧರ್ಮಸಮ್ಮತವಲ್ಲದಂತೆ ಶೂದ್ರನೊಬ್ಬ ತಪಸ್ಸನ್ನಾಚರಿಸಿದ್ದಕ್ಕಾಗಿ ಧರ್ಮ ವಿರೋಧಿ ನೆಪದಲ್ಲಿ ರಾಮನು ಶಂಭೂಕನನ್ನು ಕೊಂದದ್ದು ಈ ಕಾಫಿರ ತತ್ವದ ಆಧಾರದಲ್ಲೇ. ಯುದ್ಧ ಮುಗಿಸಿ ಮರಳಿದ ಧರ್ಮರಾಯನನ್ನು ದ್ವೇಶಿಸಿ-ಸಂಬಂಧಿಗಳನ್ನೆಲ್ಲಿ ಕೊಂದು ರಕ್ತಪಾತ ನಡೆಸಿದೆ ನೀನು ಎಂದು ಜರೆದ ಚಾರ್ವಾಕ ಎಂಬುವವನನ್ನು ಧರ್ಮರಾಯನ ಸುತ್ತಲಿದ್ದ ಹೊಗಳುಭಟ ಬ್ರಾಹ್ಮಣರು ಸೇರಿ ಧರ್ಮ ವಿರೋಧಿಯ ನೆಪದಲ್ಲಿ ಬಡಿದು ಕೊಲ್ಲುತ್ತಾರೆ. (ಮಹಾಭಾರತ ಶಾಂತಿ ಪರ್ವ 38 ನೇ ಅಧ್ಯಾಯ) ವೈದಿಕ ಧರ್ಮವನ್ನು ಅಲುಗಾಡಿಸಿದ ಬೌದ್ಧ ಧರ್ಮವನ್ನು ಅದು ಹುಟ್ಟಿದ ನಾಡಿನಿಂದಲೇ ಓಡಿಸಿದ್ದು, ಅದರ ಕುರುಹುಗಳನ್ನು ಧ್ವಂಸಗೊಳಿಸಿದ್ದು, ಬುದ್ಧನನ್ನ ನಾಸ್ತಿಕನೆಂದು ಜರೆದಿದ್ದು (ದಶಾವತಾರದ ಬುದ್ಧ ಗೌತಮ ಬುದ್ಧ ಒಂದೇ ಅಲ್ಲ, ಬೆತ್ತಲೆ ನಿಂತ ಆ ಬುದ್ಧನ ಕತೆಯೇ ಬೇರೆ ಇದೆ) ಎಲ್ಲ ಈ ಕಾಫಿರ ತತ್ವದ ಆಧಾರದ ಮೇಲೆಯೇ. ಅಷ್ಟೇ ಯಾಕೆ. ಮಾಧ್ವರು ಶಂಕರಾಚಾರ್ಯರ ತತ್ವವನ್ನು, ಶಂಕರಾಚಾರ್ಯರನ್ನು ನೇರವಾಗಿ ಅತೀ ಕೀಳಾಗಿ ಟೀಕಿಸುವ ಸಂಪ್ರದಾಯ ಒಂದೆಡೆ ಇದೆ. ಧಾರ್ಮಿಕವಾಗಿ ಒಬ್ಬರ ತತ್ವವನ್ನು ಇನ್ನೊಬ್ಬರು ಕಡೆಗಣಿಸುವುದು ಸ್ವಲ್ಪ ಮಟ್ಟಿನ ಸಹಜ ಸಂಗತಿಯಾಗಿದೆ. ಇಲ್ಲೆಲ್ಲ ಧಾರ್ಮಿಕ ನೇತಾರರ [illegible] ಇದ್ದಿರುವುದೇ ದೊರೆಯ [illegible] ಪ್ರಾಮುಖ್ಯತೆ ಇರಲಾರದು. ವಿಷಯ ಅತಿರೇಕಕ್ಕೆ ಹೋದಲ್ಲಿ ದೊರೆಯು ಪಾತ್ರವನ್ನು ವಿಶ್ಲೇಷಿಸಬಹುದೇ [illegible] ಶಾಸನ, ಖಡ್ಗದ ಬರಹದ ಆಧಾರದಲ್ಲೇ ನೇರವಾಗಿ ರಾಜನನ್ನು ಅಳೆಯುವುದು ಸಂಶೋಧಕ ಎನಿಸಿಕೊಂಡವರಿಗೆ ಹೇಳಿಸಿದಲ್ಲ, ಅಷ್ಟಕ್ಕೂ ಇತಿಹಾಸ ಸಂಶೋಧನೆ ಎಂದರೆ ತನ್ನ ಮೂಗಿನ ನೇರಕ್ಕೆ ತೋರಿದಂತೆ ವ್ಯಾಖ್ಯಾನಿಸುವುದು ಅಲ್ಲವೆಂಬುದನ್ನು ಶ್ರೀಯುತರು [illegible].

– [illegible]

ಕಳ್ಳಭಟ್ಟಿ ರಾಣಿಯರ ಕಾಳಗ

ರಿವೇಂಜ್ ಕಿಲ್ಲಿಂಗ್ಸ್ 6

ರಾ. ಸೋಮನಾಥ್

ಆಂಜನಪ್ಪ ಗಾರ್ಡನ್ ಸ್ಲಮ್ಮಿನ ಮಹಿಮೆಯೇ ಅಂಥದ್ದು. ಅಲ್ಲಿ ರೌಡಿಸಂ ಮೊದಲು ಹುಟ್ಟಿತೋ ಅಥವಾ ಕಳ್ಳಭಟ್ಟಿ ಮೊದಲು ಹುಟ್ಟಿತೋ ಗೊತ್ತಿಲ್ಲ. ಆದರೆ ಇಲ್ಲಿನ ಬಹುತೇಕ ಪಾತಕಿಗಳೆಲ್ಲ ತಾಯಿಯ ಹಾಲಿಗೆ ಬದಲಾಗಿ ಭಟ್ಟಿ ಸಾರಾಯಿ ಕುಡಿದೇ ಬೆಳೆದರು ಮತ್ತು ಅದಕ್ಕಾಗಿಯೇ ಇಲ್ಲಿನ ತಮಿಳು ಗ್ಯಾಂಗುಗಳ ಮಧ್ಯೆ ಭಯಂಕರ ಯುದ್ಧ ಗಳಾದವು. ಮೊದಲು ಗಾರ್ಡನ್ ಮಣಿಯ ಹತ್ಯೆ ಆನಂತರ ಗಾರ್ಡನ್ ದಾಸ್, ತದನಂತರ ಅಲ್ಲೈಮಣಿ, ಇದಾದ ಮೇಲೆ ಜೋಪಡಿ ರಾಜೇಂದ್ರನ ಮರ್ಡರ್; ಹೀಗೆ ಈತನಕ ಆಂಜನಪ್ಪ ಗಾರ್ಡನ್ನಿನಲ್ಲಿ ಸಂಭವಿಸಿದ ರಕ್ತಪಾತಗಳೆಲ್ಲಕ್ಕೂ ಕಳ್ಳಭಟ್ಟಿ ದಂಧೆಯೇ ಕಾರಣವಾಯಿತು.


ಬೆಂಗಳೂರಿಗೆ ಒಬ್ಬ ಮಾರಿಮುತ್ತುವೇ ಜೇರ್ಣವಾಗ ಲಿಲ್ಲ. ಟ್ಯಾನರಿ ರೋಡ್ ಏರಿಯಾದಲ್ಲಿ ಆಕೆಯ ಕಳ್ಳಭಟ್ಟಿ ಜಾಲವಿತ್ತಾದರೂ ಯಾವತ್ತಿಗೂ ಆಕೆ ಕೊಲೆ ಮಾಡಿದ್ದಾಗಲಿ, ಮಾಡಿಸಿದ್ದಾಗಲಿ ಇರಲಿಲ್ಲ. ಆದರೆ ಆಂಜನಪ್ಪ ಗಾರ್ಡನ್ ಮಾರಿಮುತ್ತುವನ್ನೇ ಮೀರಿಸಬಲ್ಲ, ಕೊಲ್ಲಬಲ್ಲ, ಕೊಲ್ಲಿಸಬಲ್ಲ ಕೈಯಾರೆ ಲಾಂಗ್ ಹಿಡಿದು ಕತ್ತರಿಸಬಲ್ಲ ನಾಲ್ವರು ಸಾರಾಯಿ ರಾಣಿಯರನ್ನು ಹುಟ್ಟ ಹಾಕಿತು. ಈ ಪೈಕಿ ಮೊದಲ ಸಾರಾಯಿ ರಾಣಿಯೇ ಇಂದ್ರಾಣಿ. ಆಂಜನಪ್ಪ ಗಾರ್ಡನ್ ಸ್ಲಮ್ಮಿನ ಬಂಡೆಯ ಮೇಲೆ ಇವತ್ತಿಗೂ ತನ್ನ ಸಾರಾಯಿ ಸಾಮ್ರಾಜ್ಯವನ್ನು ನಿರಾತಂಕವಾಗಿ ನಡೆಸುತ್ತಿರುವ ಮಾಲಾ ಆಕೆಯ ತಂಗಿಯ ಮಗಳು. ಅಲ್ಲಿ ಮೊದಲು ಕೊಲೆಯಾದ ರೌಡಿ ಗಾರ್ಡನ್ ಮಣಿಯ ಪತ್ನಿ ಭವಾನಿ ಆಕೆಗೆ ಎದುರಾಳಿಯಾಗಿ ಹುಟ್ಟಿಕೊಂಡ ಮತ್ತೊಬ್ಬ ಸಾರಾಯಿ ರಾಣಿ. Of course ಗಾರ್ಡನ್ ಮಣಿಯ ಹತ್ಯೆ ನಡೆದದ್ದು ಕೂಡ ಕಳ್ಳಭಟ್ಟಿಯ ಕಾರಣಕ್ಕೇ!



ಗಾರ್ಡನ್ ಮಣಿ

ಗಾರ್ಡನ್ ಮಣಿಯನ್ನು ಅಲಸೂರಿನ ನಾಗಾ ಥೇಟರಿನ ಗೇಟಿನಲ್ಲೇ ಚಾಮರಾಜು ಮತ್ತು ಕುಟ್ಟಿ-ರಾಜಾ ಸಹೋದರರು ಕೊಂದರಾದರೂ ಅದರ ಹಿಂದಿದ್ದವನು ಆಗ ಮಾರ್ಕೆಟ್ ವಾರ್ಡಿಗೆ ಕೌನ್ಸಿಲರ್ ಆಗಿದ್ದ ಸಂಪಂಗಿ. ಕೇವಲ ಸ್ಲಂ ತಮಿಳರ ಓಟಿನಿಂದಲೇ ಪಕ್ಷೇತರನಾಗಿ ಗೆದ್ದು ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲರ್ ಆಗಿದ್ದ ಸಂಪಂಗಿ ಆ ಕಾಲಕ್ಕೇ ಹೆಂಡದ ದೊರೆ ಹರಿಖೋಡೆಯ ವಿರುದ್ಧ ಆತನ ಡಿಸ್ಟಿಲ್ಲರಿಯ ಕಾರ್ಮಿಕರನ್ನು ಎತ್ತಿಕಟ್ಟಿದ್ದ. ಫ್ಯಾಕ್ಟರಿಯಲ್ಲಿ ಯೂನಿಯನ್ ಮಾಡ್ತೀನಿ ಎಂದೇ ಧಮಕಿ ಹಾಕಿ ಖೋಡೆಯಿಂದ ಎರಡು ಕಾಂಟೆಸ್ಸಾ ಕಾರುಗಳನ್ನು ಕಿತ್ತುಕೊಂಡಿದ್ದ. ಆ ಪೈಕಿ ಒಂದನ್ನು ತನ್ನ ಬಂಟ ಗಾರ್ಡನ್ ಮಣಿಗೆ ಕೊಟ್ಟಿದ್ದ. ಅದೇ ಕಾರಲ್ಲಿ ತನ್ನ ಹೆಂಡತಿ ಮಕ್ಕಳನ್ನು ಕೂಡ್ರಿಸಿಕೊಂಡು ನಾಗಾ ಥೇಟರಿಗೆ ಸಿನಿಮಾಕ್ಕೆ ಹೋದಾಗಲೇ ಕುಟ್ಟಿ-ರಾಜಾ ಗ್ಯಾಂಗನ್ನು ಛೂಬಿಟ್ಟು ಕೊಲ್ಲಿಸಿದ್ದ. ಅದು ಮಾಜಿ ಕೌನ್ಸಿಲರ್ ಸಂಪಂಗಿ ಉರ್ಫ್ ಸಂಪಂಗಿರಾಜ್‌ನ ತಾಕತ್ತು. ಆ ಹೊತ್ತಿಗೆ ಆತನ ವಿರುದ್ಧವೂ ಕಾಟನ್‌ಪೇಟೆ ಪೊಲೀಸ್ ಠಾಣೆಯಲ್ಲಿ ರೌಡಿ ಷೀಟಿತ್ತು.


ಗಂಡ ಗಾರ್ಡನ್ ಮಣಿಯ ಕೊಲೆಯಾದದ್ದೇ ಆತನ ಪತ್ನಿ ಭವಾನಿ ಲಾಂಗ್ ಕೈಗೆತ್ತಿಕೊಂಡಳು. ಆಕೆಗೂ ಮುನ್ನ ಆಕೆಯ ಅಣ್ಣ ಪನ್ನೀರ್ ಕಳ್ಳಭಟ್ಟಿ ದಂಧೆ ನಡೆಸಿಕೊಂಡಿದ್ದ. ಆತ ನಿಗೂಢ ಕಾಯಿಲೆಗೆ ಬಿದ್ದು ಸತ್ತ ತರುವಾಯ ಕಳ್ಳಭಟ್ಟಿ ಕಾಯಕ ತಂಗಿ ಭವಾನಿಯ ಪಾಲಾಗಿತ್ತು. ಆಕೆಗೆ ಮೊದಲು ರಷ್ಯಾ ಎಂಬ ಗಂಡನಿದ್ದ. ಆತನಿಂದ ಒಂದು ಮಗು ಕೂಡ ಇತ್ತು. ಆದರೆ ರಕ್ಕಸ ಗಾರ್ಡನ್ ಮಣಿ ಆಕೆಯ ಮೊದಲ ಗಂಡನನ್ನು ಹೊಡೆದೋಡಿಸಿ ಆಕೆಯನ್ನು ತಂದು ತನ್ನ ಮನೆಯಲ್ಲಿಟ್ಟುಕೊಂಡಿದ್ದ. ಬಹುಶಃ ಆಕೆಗೂ ತನ್ನ ಕಳ್ಳಭಟ್ಟಿ ದಂಧೆಯ ರಕ್ಷಣೆಗೆ ಅಂಥ ರೌಡಿಯ ಆಸರೆಯೇ ಬೇಕಿತ್ತೇನೊ!



ಗುಚೇಂದ್ರ

ಮಣಿ ಹತ್ಯೆಗೆ ಪ್ರತೀಕಾರವಾಗಿ ಭವಾನಿ ಮಣಿಯ ಬಲಗೈ ಬಂಟನಂತಿದ್ದ ಬಾಬು ನೇತೃತ್ವದಲ್ಲಿ ತನ್ನ ತಮ್ಮಂದಿರಾದ ಗಣೇಶ, ರಾಜ, ಭಕ್ತ, ದಕ್ಷಿಣ, ಗುಪ್ಪ ಮತ್ತು ಬಾಬು ಶಿಷ್ಯ ಗುನಾರಿ ಮುಂತಾದ ಇಪ್ಪತ್ತು ಹುಡುಗರ ಪಡೆ ಕಟ್ಟಿದ್ದೇ ಜಾಲಿ ಏರಿಯಾದ ಸಂಪಂಗಿ ಮನೆ ಮೇಲೆ ದಾಳಿ ನಡೆಸಿ ಸಂಪಂಗಿಯ ತಮ್ಮನನ್ನು ಹಿಡಿದು ಕತ್ತರಿಸಿಬಿಟ್ಟಳು. ಅದೃಷ್ಟವಶಾತ್ ಸಂಪಂಗಿಯ ತಮ್ಮ ಬದುಕಿದನಾದರೂ ಆಸ್ಪತ್ರೆಯಲ್ಲಿ ಆತ ಚೇತರಿಸಿಕೊಳ್ಳಲು ಆರು ತಿಂಗಳುಗಳೇ ಬೇಕಾದವು.

ಇದಾದನಂತರ ಸಂಪಂಗಿ ಗ್ಯಾಂಗಿಗೂ ಭವಾನಿಯ ತಂಡಕ್ಕೂ ಪದೇಪದೇ ಮಾರಾಮಾರಿಗಳಾದವು. ಒಬ್ಬ ಗಾರ್ಡನ್ ಮಣಿಯ ತಲೆ ಬಿದ್ದರೇನಂತೆ, ಆತನಿಗಿಂತಲೂ ಕ್ರೂರಿಯಾದ ಆತನ ತಮ್ಮ ಮಣಿವಣ್ಣನ್ ತಲೆ ಎತ್ತಿದ್ದ; ಭವಾನಿಯ ತಮ್ಮಂದಿರಾದ ಗಣೇಶ, ದಕ್ಷಿಣ, ರಾಜ, ಭಕ್ತ ಮತ್ತು ಗುಪ್ಪ ಎಲ್ಲರೂ ರೌಡಿಗಳಾದರು. ಮಣಿಯ ಬಲಗೈ ಬಂಟನಂತಿದ್ದ ಬಾಬುವೇ ಭವಾನಿಗೆ ಆಸರೆಯಾದ. ಆಂಜನಪ್ಪ ಗಾರ್ಡನ್‌ನ ಒಂದು ಭಾಗವಾಗಿದ್ದ ಜೈಭೀಮ್ ನಗರ ಸ್ಲಮ್ಮು ಭವಾನಿಯ ಕಳ್ಳಭಟ್ಟಿ ಜಾಲದ ಭದ್ರಕೋಟೆಯಾಯಿತು. ಭವಾನಿಯ ಮಗ ಸೂರ್ಯ ಮೀಸೆ ಮೊಳೆಯುವ ಮುನ್ನವೇ ರಾಬರಿ, ಡಕಾಯಿತಿಗಿಳಿದು ಜೈಲು ಪಾಲಾದವನು ಜೈಲಿಂದ ಹೊರಬೀಳುವ ಹೊತ್ತಿಗೆ ಇನ್ನಷ್ಟು ಪಾತಕಿಯಾಗಿದ್ದ. ಹತ್ತು ರೂಪಾಯಿಗೆ ಸಿಗುವ ಪ್ಯಾಕೆಟ್ಟು ಸರ್ಕಾರಿ ಸಾರಾಯಿಯೆಲ್ಲಿ, ಅದೇ ಬೆಲೆಗೆ ಒಂದು ಜಗ್ ತುಂಬ ದೊರಕುವ ಕಳ್ಳಭಟ್ಟಿಯೆಲ್ಲಿ? ಭವಾನಿಯ ಕಳ್ಳಭಟ್ಟಿ ದಂಧೆ ಬಿರುಸಾಗಿಯೇ ಸಾಗಿತ್ತಾದರೂ ಅನಿರೀಕ್ಷಿತ ಆಕಸ್ಮಿಕವೊಂದು ಆಕೆಯ ಬದುಕಿಗೇ ಮುಳುವಾಯಿತು. ಯಾವ ಭವಾನಿ ತನ್ನೆಲ್ಲಾ ಆಗುಹೋಗುಗಳಿಗೆ ಮಣಿಯ ಶಿಷ್ಯ ಬಾಬುವನ್ನು ಆಶ್ರಯಿಸಿದ್ದಳೋ ಅದೇ ಬಾಬುವಿನ ತಮ್ಮ ಸೆಂದಿಲ್ ಆಕೆಯ ಮಗಳನ್ನು ಪ್ರೀತಿಸಿದ್ದ!




ಆಂಜನಪ್ಪ ಗಾರ್ಡನ್ ಸ್ಲಂ

1996ರ ಡಿಸೆಂಬರ್‌ನಲ್ಲಿ ತಾಯಿ ಮತ್ತು ಮಗಳು ಒಟ್ಟೊಟ್ಟಿಗೆ ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಂಡರು. ಆದರೆ ಕಳ್ಳಭಟ್ಟಿ ದಂಧೆ ಮಾತ್ರ ನಿಲ್ಲಲಿಲ್ಲ. ಭವಾನಿಯ ಜಾಗಕ್ಕೆ ಆಕೆಯ ಅಕ್ಕ ತಮಿಳ್‌ಕುಡಿ ಕಾಲಿಟ್ಟಿದ್ದಳು. ಜೈಭೀಮ್‌ನಗರಕ್ಕೆ ಹೊಂದಿಕೊಂಡಂತಿದ್ದ ಚಿತ್ತತ್ತನಗರ್ ಸ್ಲಮ್ಮಿಗೆ ಆಕೆಯ ತಮ್ಮ ಗುಪ್ಪ ಅಧಿಪತಿಯಾಗಿಬಿಟ್ಟ. ಕಳ್ಳಭಟ್ಟಿ ಸಾರಾಯಿಯ ಜೊತೆಗೇ ತಮಿಳ್ ಕುಡಿಯ ಹುಡುಗರು ಗಾಂಜಾ ಮಾರತೊಡಗಿದ್ದರಿಂದ ಆಂಜನಪ್ಪ ಗಾರ್ಡನ್ನಿನಿಂದ ಹೊರಬಿದ್ದ ಇದೇ ಗಾಂಜಾಕ್ಕೆ ಪರಪ್ಪನ ಅಗ್ರಹಾರ ಜೈಲೇ ಅತೀ ದೊಡ್ಡ ಮಾರ್ಕೆಟ್ಟಾಯಿತು. ತಮಿಳ್‌ಕುಡಿಯ ತಮ್ಮಂದಿರು, ತಂಗಿಯರ ಮಕ್ಕಳು, ಸಂಬಂಧಿಗಳ ಸಂತತಿಯ ಹಾವಳಿ ಹೇಗಿತ್ತೆಂದರೆ ಗಾರ್ಡನ್ ಮಣಿ ಕೊಲೆಯ ಪ್ರತೀಕಾರದ ಭೀತಿಗೆ ಬಿದ್ದೇ ಮಾಜಿ ಕೌನ್ಸಿಲರ್ ಸಂಪಂಗಿ ಮತ್ತು ರೌಡಿ ಚಾಮರಾಜ ಆಂಜನಪ್ಪ ಗಾರ್ಡನ್ ತೊರೆದು ಇನ್ನೆಲ್ಲೋ ಮನೆ ಹಿಡಿದರು. ಆದರೆ ಕುಟ್ಟಿ-ರಾಜಾ ಬ್ರದರ್ಸ್ ಮಾತ್ರ ಆಂಜನಪ್ಪ ಗಾರ್ಡನ್ನಿನಲ್ಲೇ ಇನ್ನಷ್ಟು ಬೇರುಬಿಟ್ಟು ಯಾವ ಕ್ಷಣಕ್ಕಾದರೂ ಕನಿಷ್ಠ ಸಾವಿರ ಮಂದಿ ಹುಡುಗರನ್ನು ಸೇರಿಸಿ ಯಾರನ್ನು ಬೇಕಾದರೂ ಕತ್ತರಿಸಬಲ್ಲಷ್ಟು ಬೆಳೆದಿದ್ದರು.

ಒಂದೆಡೆ ಸಾರಾಯಿ ರಾಣಿ ಮಾಲಾ, ಮತ್ತೊಂದೆಡೆ ಕಳ್ಳಭಟ್ಟಿ ರಾಣಿ ತಮಿಳ್‌ಕುಡಿ; ಈ ಇಬ್ಬರ ರಕ್ಕಸ ಪಡೆಗಳಿಗೆ ಉತ್ತರವೆಂಬಂತೆ ಕುಟ್ಟಿ-ರಾಜಾ ಗ್ಯಾಂಗನ್ನು ಮಾಜಿ ಕೌನ್ಸಿಲರ್ ಸಂಪಂಗಿ ಹುಟ್ಟ ಹಾಕಿದ್ದ. ಕಾಟನ್‌ಪೇಟೆ ಪೊಲೀಸರ ಕರ್ಮವೆಂದರೆ ಪ್ರತಿನಿತ್ಯ ತಲೆ ಎತ್ತುವ ಒಬ್ಬನಲ್ಲಾ ಒಬ್ಬ ರೌಡಿಯ ಮೇಲೆ ರೌಡಿಷೀಟು ತೆಗೆಯುವುದೇ ಅವರ ನಿತ್ಯಕಾಯಕವಾಯಿತು. 1997ರ ಹೊತ್ತಿಗೆ ಬಹುಶಃ ಗಾರ್ಡನ್ ಮಣಿಯ ನಂತರ ತಲೆ ಎತ್ತಿದ್ದ ಎರಡನೇ ದೈತ್ಯ ರೌಡಿಯೊಬ್ಬ ಇದೇ ಗಾರ್ಡನ್ನಿನ ಚಿಲ್ಟೆ ಹುಡುಗರಿಂದ ಕೊಲೆಯಾದ. ಆತನೇ ಗಾರ್ಡನ್ ದಾಸ್!


ಆತನನ್ನು ಕೊಲ್ಲಿಸಿದ್ದು ಕಳ್ಳಭಟ್ಟಿ ರಾಣಿ ಮಾಲಾ!

ಗಾರ್ಡನ್ ದಾಸ್ ಉರ್ಫ್ ಅರುಳ್‌ದಾಸ್ ಆಂಜನಪ್ಪ ಗಾರ್ಡನ್ ಕೊಂಪೆಯಿಂದಲೇ ಹುಟ್ಟಿಬಂದ ಕಿರಾತಕ. ಆತ ಕೂಡ ಭಟ್ಟಿ ಸಾರಾಯಿಗೆಂದೇ ಹುಟ್ಟಿಕೊಂಡ ರೌಡಿ. ಪ್ರಾರಂಭದಲ್ಲಿ ಮಾಲಾಳ ತಮ್ಮ ಭಾಸ್ಕರ್ ಎಂಬಾತನಿಗೆ ಈತ ಪ್ರಾಣ ಮಿತ್ರ. ಬಂಡೆ ಕೆಳಗಿನ ಜೋಪಡಿಗಳಲ್ಲಿ ಈತನ ಹುಡುಗರೂ ಭಟ್ಟಿ ಕಾಯಿಸಿ ನೀರಿನ ಬಿಂದಿಗೆಗಳಲ್ಲಿ ಸಾರಾಯಿ ಮಾರುತ್ತಿದ್ದರು. ದುಡ್ಡುಕಾಸು ಓಡಾಡುತ್ತಿತ್ತು. ಆತನ ಕ್ರೌರ್ಯ ಯಾವ ಮಟ್ಟಕ್ಕಿತ್ತೆಂದರೆ ಆತ ಕೂಡ ಗಾರ್ಡನ್ ಮಣಿಯಂತೆ ತನ್ನ ಗುರು ಭಾಸ್ಕರನನ್ನೇ ಕತ್ತರಿಸಿ ಆತನ ಪತ್ನಿ ದೇವಿಯನ್ನು ಹೊತ್ತೊಯ್ದು ಟ್ಯಾನರಿ ರಸ್ತೆಯಲ್ಲಿ ಮನೆ ಮಾಡಿ ಇಟ್ಟುಕೊಂಡಿದ್ದ. ಆಸ್ಪತ್ರೆ ಸೇರಿದ ಭಾಸ್ಕರ ಹೇಗೋ ಬಚಾವಾದನಾದರೂ ಹೆಂಡತಿಯನ್ನು ಕಳಕೊಂಡ ಕೊರಗಿಗೆ ಬಿದ್ದು ಕ್ರಮೇಣ ಭಟ್ಟಿ ಸಾರಾಯಿ ಕುಡಿದೇ ಸತ್ತ. ಈ ಭಾಸ್ಕರ್ ಮಾಲಾಳ ದೊಡ್ಡಮ್ಮ ಇಂದ್ರಾಣಿಯ ಮಗ. ಇಂದ್ರಾಣಿಯ ತಂಗಿಯ ಹೆಸರು ಕೂಪನ್. ಈಕೆಗೆ ಮೂಚಿ ಎಂಬ ಮಗನಿದ್ದ. ಆತನೂ ಭಟ್ಟಿ ಸಾರಾಯಿ ಕುಡಿದು ಸತ್ತ. ಎಲ್ಲಕ್ಕೂ ಮಿಗಿಲಾಗಿ ಸ್ವತಃ ಮಾಲಾಳ ಗಂಡ ರಾಜಾ ಕೂಡ ಭಟ್ಟಿ ಸಾರಾಯಿ ಕುಡಿದೇ ಸತ್ತು ಹೋದ. ಈಗ ಬಡ್ಡಿದಂಧೆ ಮಾಡುವ ರೆಡ್ಡಿಯಾರ್ ಅಮ್ಮ ಕೂಡ ಈ 'ಕೂಪನ್' ಎಂಬಾಕೆಯ ಮಗಳು. ಭಾಸ್ಕರ್ ಆ ಕಾಲಕ್ಕೇ ದಾಸಪ್ಪನ ರೌಡಿಪಡೆಯ ವಿರುದ್ಧ ನಡುರಸ್ತೆಯಲ್ಲಿ ಕಾದಾಡಿದ್ದ. ಆತನ ತಮ್ಮಂದಿರಾದ ಕುಮರೇಶನ್, ಕದಿರೇಶನ್, ಸುರೇಶ್, ಬಾಲನ್, ಮೂವರು ಭಾವಂದಿರು, ದೊಡ್ಡಪ್ಪ ಚಿಕ್ಕಪ್ಪರ ಮಕ್ಕಳೆಲ್ಲ ಸೇರಿಬಿಟ್ಟರೆ ಅದೇ ನೂರೈವತ್ತು ಮಂದಿಯ ರೌಡಿ ಪಡೆಯಾಗುತ್ತಿತ್ತು.



ಸ್ಲಂ ರಾಣಿ ಮಾಲಾ

ಇಂಥ ಕಿರಾತಕರ ವಿರುದ್ಧ ಎದ್ದು ನಿಂತ ಗಾರ್ಡನ್ ದಾಸ್ ತನ್ನ ತಮ್ಮ ಮೋಹನನನ್ನು ಬೆಳೆಸಿದ್ದೂ ಸಾಲದೇ ವಾಲೆಶೇಖಿ, ಪ್ರಭು, ಸಂಪತ್ತು, ರಘು, ಶೀನಿ ಎಂಬ ಛೋಟಾ ರೌಡಿಗಳದೇ ಗ್ಯಾಂಗ್ ಒಂದನ್ನು ಹುಟ್ಟು ಹಾಕಿದ್ದ. ಕಳ್ಳಭಟ್ಟಿ ದಂಧೆಯಲ್ಲಿ ಮೇಲಿನ ಬಂಡೆ ಏರಿಯಾಕ್ಕೆ 'ಮಾಲಾ' ಒಡತಿಯಾದರೆ, ಕೆಳಗಿನ ಜೋಪಡಿಗಳಲ್ಲೆಲ್ಲ ದಾಸ್‌ನ ಸಾರಾಯಿ ಸಾಮ್ರಾಜ್ಯವಿತ್ತು. ಗಾರ್ಡನ್‌ದಾಸ್ ಪದೇಪದೇ ಬಂಡೆಯ ಮೇಲೆ ದಂಡೆತ್ತಿ ಬಂದು ಹಾವಳಿ ಕೊಡುತ್ತಿದ್ದ. ಭಾಸ್ಕರನ ತಂದೆ ಶ್ರೀನಿವಾಸ್ ನಡೆಸುತ್ತಿದ್ದ ಪ್ರಿಂಟಿಂಗ್ ಪ್ರೆಸ್ಸಿಗೇ ನುಗ್ಗಿ ಚಿಂದಿಯೆಬ್ಬಿಸಿದ್ದ. ಮತ್ತೊಂದು ದಿನ ಭಾಸ್ಕರನ ಮನೆಗೇ ನುಗ್ಗಿ ಆತನ ತಾಯಿಯ ಕುತ್ತಿಗೆಗೆ ಬೆಂಕಿಯ ಕೊಳ್ಳಿ ಇಟ್ಟುಸುಟ್ಟ. ಭಾಸ್ಕರನ ಅಕ್ಕಂದಿರು, ಭಾವಂದಿರನ್ನೂ ಬಿಡದೇ ಕತ್ತರಿಸಿದ್ದ. ಮಾಲಾ ಮತ್ತು ಆಕೆಯ ಸಂತತಿಯನ್ನು ಓಡಿಸಿಬಿಟ್ಟರೆ ಇಡೀ ಗಾರ್ಡನ್ನಿನ ಸಾರಾಯಿ ದಂಧೆಗೆ ತಾನೇ ಅಧಿಪತಿ ಎಂಬ ದುರಾಶೆಗೆ ಬಿದ್ದವನು ಶಿವಾಜಿನಗರದ ರೌಡಿ ಕೋಳಿ ಫಯಾಜ್ ಜೊತೆ ಕೈಜೋಡಿಸಿ ಆತನ ವೈರಿ ಯೂಸುಫ್ ಎಂಬಾತನನ್ನು ಕೊಂದು ಹಾಕಿದ್ದ. ಫಯಾಜ್ ಜೊತೆ ಆತ ಆರು ತಿಂಗಳು ಜೈಲು ಕಳೆದು ಬಂದಾದ ಮೇಲಂತೂ ಟ್ಯಾನರಿ ರೋಡ್ ಏರಿಯಾದ ಮಾರಿಮುತ್ತು ಪ್ರಾಬಲ್ಯದ ಬಾಗಲೂರು ಲೇಔಟ್, ಪಿಳ್ಳಣ್ಣ ಗಾರ್ಡನ್, ಸುಬ್ಬಣ್ಣ ಗಾರ್ಡನ್, ಕೆ.ಜಿ. ಹಳ್ಳಿ, ಡೀಜೆ ಹಳ್ಳಿ, ಬಾಣಸವಾಡಿ ಮುಂತಾದ ಏರಿಯಾಗಳಲ್ಲೂ ದಾಸ್‌ನ ಕುಖ್ಯಾತಿ ಹಬ್ಬಿತ್ತು.



ಮಣಿವಣ್ಣನ್

ಸಾಲದ್ದಕ್ಕೆ ದಾಸ್ ಬ್ರಿಗೇಡ್ ರಸ್ತೆಯ ಕ್ಯಾಬರೆ ಅಡ್ಡೆಗಳಿಗೂ ನುಗ್ಗಿ ಹಾವಳಿಯಿಡುತ್ತಿದ್ದ. ಬ್ರಿಗೇಡ್ ರೋಡ್ ಸರ್ಕಲ್ಲಿನ 'ಚುಂಗ್‌ಮಿಂಗ್' ಆ ಕಾಲಕ್ಕೇ ಕ್ಯಾಬರೆಗೆ ಖ್ಯಾತಿಯಾಗಿತ್ತು. ಅಲ್ಲಿಂದ ಡ್ಯಾನ್ಸ್ ಮುಗಿಸಿ ಹೊರಬಿದ್ದ ಇಬ್ಬರು ಡ್ಯಾನ್ಸರುಗಳನ್ನು ದಾಸ್ ನಡುರಾತ್ರಿಯಲ್ಲೇ ಹೊತ್ತೊಯ್ದು ದಾರುಣವಾಗಿ ರೇಪ್ ಮಾಡಿದ್ದು ಕೂಡ ಪೊಲೀಸರ ಗಮನಕ್ಕೆ ಬರಲೇ ... ಗುರು ಕೋಳಿ ಫಯಾಜ್‌ನನ್ನು ಬಾಂಬೆ ಹಮೀದ್ ಗ್ಯಾ... ಕತ್ತರಿಸಿ ಕೊಂದ ಮೇಲಂತೂ ದಾಸ್ ಟ್ಯಾನರಿ ರಸ್ತೆಯ ... ಎಂಬ ಮತ್ತೊಬ್ಬ ರೌಡಿಯೊಡನೆ ಕೈಜೋಡಿಸಿ ಪದೇ... ಮಾರಿಮುತ್ತುವಿಗೆ ಕಾಟ ಕೊಡತೊಡಗಿದ. ಆ ಹೊತ್ತಿಗಾ... ತಾನು ಹೊತ್ತೊಯ್ದು ಇಟ್ಟುಕೊಂಡಿದ್ದ ಗುರು ಭಾಸ್ಕರನ ಹೆಂ... ಆತ ಇನ್ನೆರಡು ಮಕ್ಕಳನ್ನು ದಯಪಾಲಿಸಿದ್ದ. ಬಹುಶಃ ದಾ... ತನ್ನ ಆಕ್ಟಿವಿಟಿಯನ್ನು ಟ್ಯಾನರಿ ರೋಡಿಗಷ್ಟೇ ಸೀಮಿತಗೊಳಿಸಿ... ಬದುಕಿರುತ್ತಿದ್ದನೇನೊ.

ಆದರೆ ಮತ್ತೆ ಮತ್ತೆ ಆಂಜನಪ್ಪ ಗಾರ್ಡನ್ನಿಗೆ ಕ... ಹಾವಳಿಯಿಡುತ್ತಿದ್ದ ದಾಸ್ ಅಲ್ಲಿ ತನ್ನ ತಮ್ಮ ಮೋಹನನ... ಬೆಳೆಸುತ್ತಿದ್ದ. ಹಾಗಂಥ ಮಾಲಾ ತೆಪ್ಪಗಿರಲಿಲ್ಲ. ದಾ... ಮುಗಿಸದೇ ಹೋದರೆ ಆಂಜನಪ್ಪ ಗಾರ್ಡನ್ನಿನಲ್ಲಿ ತ... ಉಳಿಗಾಲವಿಲ್ಲ ಎಂಬುದು ಆಕೆಗೆ ಚೆನ್ನಾಗಿ ಗೊತ್ತಿ... ಆದಕ್ಕೆಂದೇ ತನ್ನ ತಮ್ಮಂದಿರಾದ ಕುಮರೇಶನ್, ಕದಿರೇಶ... ಸುರೇಶ್, ಬಾಲನ್ ಮುಂತಾದವರನ್ನೆಲ್ಲ ರೌಡಿಗಳನ್ನಾ... ಬೆಳೆಸಿದ್ದಳು. ಈ ಪೈಕಿ ಕುಮರೇಶನ್ ಮತ್ತು ಸುರೇ... ಈ ಹೊತ್ತಿಗಾಗಲೇ ಎರಡೆರಡು ಹಾ... ಮರ್ಡರ್ ಮಾಡಿ ಜೈಲಿಗೆ ಹೋ... ಬಂದಿದ್ದರೆ, ಕದಿರೇಶನ್ ಅಕ್ಕನ ಕಳ್ಳಭ... ಪರ್ಯಾಯವಾಗಿ ಗಾಂಜಾ ದಂಧೆಗಿಳಿ... ಗೋರಿಪಾಳ್ಯದ ಮುಸ್ಲಿಂ ಸ್ಮಶಾನ, ಕಲಾ... ಪಾಳ್ಯ ಸೂಪರ್ ಟಾಕೀಸ್, ಮೆಜೆಸ್ಟಿ... ರೈಲ್ವೇ ಸ್ಟೇಷನ್, ತುಳಸಿ ಪಾರ್ಕ... ಬಸ್‌ಸ್ಟ್ಯಾಂಡ್‌ಗಳಲ್ಲಿ ಹುಡುಗರನ್ನು ಬಿ... ಗಾಂಜಾ ಮಾರಿಸುತ್ತಿದ್ದ. ಕಾಟನ್‌ಪೇ... ಇನ್ಸ್‌ಪೆಕ್ಟರ್ ಆಗಿದ್ದ ಅಬ್ದುಲ್ ಅಜೀ... ಈತನ ಮೇಲೆ ರೌಡಿಶೀಟ್ ತೆರೆದಿದ... ಆತನ ಬೆನ್ನಿಗೆ ಸ್ವತಃ ಚಿಕ್ಕಪೇಟೆ ಶಾ... ಪೆರಿಕಲ್ ಮಲ್ಲಪ್ಪ ಮತ್ತು ಚಾಮರಾಜಪೇ... ಶಾಸಕ ಆರ್.ವಿ. ದೇವರಾಜ್ ಥರದವರು ನಿಂತಿ... ಮಾರ್ಕೆಟ್ ದೇವಿ ಕಡೆಯ ಅಪ್ಪೂ ರೌಡಿಗಳ ಜೊ... ಆತನಿಗೆ ಸಂಪರ್ಕವೇರ್ಪಟ್ಟಿದ್ದು ಇತ್ಯಾದಿಗಳೆಲ್ಲ ದಾ... ಚೆನ್ನಾಗಿ ಗೊತ್ತಿತ್ತಾದರೂ ಅವರ್‍ಯಾರಿಗೂ ತನ್ನನ್ನು ಮುಟ... ಧೈರ್ಯವಿಲ್ಲ ಎಂದೇ ಭಾವಿಸಿದ್ದ.

ಹಾಗೇ 1988ರಲ್ಲಿ ವಿನಾಯಕ ಟಾಕೀಸ್ ಪ... ಬಾರ್ ಒಂದಕ್ಕೆ ದಾಸ್ ಬಂದಿದ್ದಾನೆಂದೂ, ಅಲ್ಲಿ ಒಂದಿ... ಜೊತೆ ಕೂತು ಕುಡಿದು ಚಿತ್ತಾಗಿದ್ದಾನೆಂದೂ ಮಾಲಾ... ಮಾಹಿತಿ ಬಂತು. ಈ ಅವಕಾಶ ಬಿಟ್ಟರೆ ದೇ... ಅನಾಹುತವಾದೀತೆಂದು ಕದಿರೇಶನ ಶಿಷ್ಯರಾದ ಸೀನ ಮ... ಪೀಟರ್‌ರ ನೇತೃತ್ವದಲ್ಲಿ ಇಪ್ಪತ್ತು ಮಂದಿ ಹುಡುಗ... ರೆಡಿ ಮಾಡಿ ಎಲ್ಲರ ಕೈಗೂ ಲಾಂಗ್ ಮತ್ತು ಒ... ಪ್ಯಾಕೆಟ್ ಖಾರದಪುಡಿ ಕೊಟ್ಟಳು. ಅವರನ್ನೆಲ್ಲ ತಾ... ವಿನಾಯಕ ಟಾಕೀಸ್ ಪಕ್ಕದ ಬಾರ್‌ನ ಬಳಿ ಕರೆತಂದ... ಆ ಹೊತ್ತಿಗೆ ತಟ್ಟಾಡುತ್ತಾ ಹೊರಬರುತ್ತಿದ್ದ ದಾಸ್ ಕ... ಬಿದ್ದಿದ್ದೇ ಪಕ್ಕಾ ತಮಿಳಿನಲ್ಲಿ 'ವೆಟ್ರಾ' ಎಂದಳು. ಆ ... ಹುಡುಗರ ಗ್ಯಾಂಗ್ ದಾಸ್‌ನ ಮೇಲೆ ಯಾವ ... ಮುಗಿಬಿತ್ತೆಂದರೆ ಚೀರಾಡುವುದಕ್ಕೂ ಆಗದೇ ದಾ... ನೆಲಕ್ಕುರಳಿದ್ದ. ಇಪ್ಪತ್ತು ಮಂದಿ ಹುಡುಗರೂ ಒಂದೊ... ಲಾಂಗ್ ಏಟು ಕೊಟ್ಟಿದ್ದರು. ದಾಸ್ ತಲೆಯಿಂದ ಮೆದು... ಹೊರಬಿದ್ದು ಆತನ ಇಡೀ ದೇಹ ಮಾಂಸದ ಮುದ್ದೆಯಾ... ಗಾರ್ಡನ್ ಮಣಿಯ ಪತ್ನಿ ಮಾಲಾ ತಾನೇ ನಿಂತು ಗಾಡ... ದಾಸ್‌ನನ್ನು ಕೊಲ್ಲಿಸಿದ್ದಳು!


ಬಹುಶಃ ತೆಲುಗು ಸಿನಿಮಾಗಳಲ್ಲಷ್ಟೇ ನೋಡಬ... ದಾದ ದೃಶ್ಯಾವಳಿಗಳಿವು. ಮಾರಿಮು... ಕಳ್ಳಭಟ್ಟಿ ದುರಂತದ ಕಾರಣಕ್ಕೆ ಹೆಸರಾಗಿ... ಬಿಟ್ಟರೆ ಕ್ರೌರ್ಯದಲ್ಲಿ ಆಕೆಗಿಂತಲೂ ದೈತ್ಯ... ಆಂಜನಪ್ಪ ಗಾರ್ಡನ್ನಿನ ಈ ಸಾರಾ... ರಾಣಿಯರು ಮಾತ್ರ ಯಾರ ಗಮನ... ಬರಲಿಲ್ಲ. ಇಂಥ ಯಾವ ಘಟನೆಗ... ಕಾಟನ್‌ಪೇಟೆ ಪೊಲೀಸ್ ಠಾಣೆಯ ... ಸುದ್ದಿಯಾಗಲೇ ಇಲ್ಲ. ಅಲ್ಲಿನ ಹತ್ತು ಸಾ... ಜೋಪಡಿಗಳ ತಮಿಳು ಕೂಲಿಗಳ ನಡು... ಹುಟ್ಟಿಬಂದದ್ದು ಕಳ್ಳಭಟ್ಟಿ ಮತ್ತು ಗಾ... ಮಾತ್ರವಷ್ಟೇ ಅಲ್ಲ. ಅಲ್ಲೈಮಣಿಯಂಥ ಪೈಶಾಚಿಕ ರೇ... ಕೂಡ ಹುಟ್ಟಿಕೊಂಡ. ಗಾರ್ಡನ್ ದಾಸ್‌ನ ಹತ್ಯೆಗೂ ಮೊ... ಆತ ಸರಿಸುಮಾರು ಹದಿನೈದು ಮಂದಿ ಹೆಂಗಸ... ರಾಜಾರೋಷವಾಗಿ ಎಳೆದೊಯ್ದು ರೇಪ್ ಮಾಡಿ... ದುರಂತವೆಂದರೆ ಹೀಗೆ ಅಲ್ಲೈಮಣಿಯಿಂದ ಅತ್ಯಾಚಾರಕ್ಕೀ... ಯಾವೊಬ್ಬ ಹೆಂಗಸರೂ ಆತನ ವಿರುದ್ಧ ಪೊಲೀಸ್ ಠಾ... ಬಂದು ದೂರು ಕೊಟ್ಟಿರಲಿಲ್ಲ. ಏಕೆಂದರೆ ಅಲ್ಲೈಮಣಿಯ... ಹಿಡಿಯುವುದು ಸ್ವತಃ ಕಾಟನ್‌ಪೇಟೆ ಪೊಲೀಸರಿಗೇ ಸಾಧ್ಯವಿದ್ದ... ಅಲ್ಲಿಗೆ ಅಬ್ದುಲ್ ಅಜೀಮ್ ಇನ್ಸ್‌ಪೆಕ್ಟರ್ ಆಗಿ ಬರುವತ...


(ಮುಂದುವರೆಯುತ್ತದೆ)

ಕೆಂಬಾವುಟ ನಾಯಕರ ದೆಹಲಿ ಚಲೋ-ಪೈಸಾ ಲಾವೊ

ಏನಾಗಿದೆ ಈ ಕೆಂಬಾವುಟದ ಮಂದಿಗೆ ಎಂದು ಬೇಸರದಿಂದಲೇ ಕೇಳಬೇಕಾಗಿದೆ. ಪಕ್ಷಾ ವೃತ್ತಿ ರಾಜಕಾರಣಗಳಂತಾಗುತ್ತಿದ್ದಾರೆ ಹಲವರಿಲ್ಲಿ. ಹುಬ್ಬಳ್ಳಿಯಲ್ಲಿ ಸ್ವಯಂಘೋಷಿತ ಕಾರ್ಮಿಕ ನಾಯಕನೊಬ್ಬನಿದ್ದಾನೆ. ಈತ ಎಂ.ಎಚ್. ಮುಲ್ಲಾ. ಈ ಹಿಂದೆ 'CITU' ಸಂಘಟನೆಯಲ್ಲಿದ್ದಾಗ ಬಡ ಬೀದಿ ಕಾರ್ಮಿಕರಿಗೆ ಮನೆ ಕೊಡಿಸುತ್ತೇನೆಂದು ಟೋಪಿ ಹಾಕಿದ್ದ, ಇಂಥವನನ್ನು AITUC ಗೆ ಹಾರಿಲಿ ಹಾಕಿದ್ದು ಎಚ್.ಕೆ. ರಾಮಚಂದ್ರಪ್ಪ ಎಂಬ ಲೀಡರು. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ತನ್ನ ಶಿಷ್ಯಕೋಟಿಯನ್ನು ಪ್ರತಿಷ್ಠಾಪಿಸಿ ಹಣ ಎತ್ತುವುದೇ ರಾಮಚಂದ್ರಪ್ಪನ ಗುರಿ. ಇಲ್ಲಿನ ಮುಲ್ಲಾ ಎಂತಹ ಕಾಶಿ ಬುದ್ಧಿಯವನೆಂದರೆ ಹಜ್ ಯಾತ್ರೆಯನ್ನು ಕಾಲ್ನಡಿಗೆಯಲ್ಲೇ ಮುಗಿಸ್ತೀನಿ ಅಂತಾ ಹೇಳಿ, ಸ್ವಲ್ಪ ದೂರ ನಡೆದು ವಾಪಸ್ ಬರುತ್ತಾನೆ! ಅದಕ್ಕೆ ಕಾರ್ಮಿಕರು ಇವನನ್ನು ಕಂಡರೆ 'ಪೈದಲ್ ಹಾಜಿ, ಆದಾ ಹಜ್' ಎಂದು ನಗೆಯಾಡುತ್ತಾರೆ. ಕಮ್ಯುನಿಸ್ಟ್ ಎಂದು ಹೇಳಿಕೊಳ್ಳುವ ಇವನು ಕಾಂಗ್ರೆಸ್ ನಾಯಕರ ಮನೆ ಬಾಗಿಲು ಕಾಯ್ದು ಮಗ ಸಮೀರ್‌ಗೆ ಕಾರ್ಪೊರೇಷನ್ ಚುನಾವಣೆಯಲ್ಲಿ ಟಿಕೆಟು ಕೊಡಿಸಿದ್ದ. ಸಮೀರ್ ಚೀಟಿ ವ್ಯವಹಾರದಲ್ಲಿ ಲಕ್ಷಾಂತರ ರೂ. ಎತ್ತಿ ನಾಯಬ್ ಆಗಿದ್ದಾನೆ.

ಲೇಟೆಸ್ಟ್ ಸುದ್ದಿ ಎಂದರೆ ಮುಲ್ಲಾ 'ಕಟ್ಟಡ ಕಾರ್ಮಿಕರ ಸಂಘ' ಹುಟ್ಟು ಹಾಕಿದ್ದು, ಇದಕ್ಕೆ ಎಚ್.ಕೆ. ರಾಮಚಂದ್ರಪ್ಪನೇ ರಾಜ್ಯಾಧ್ಯಕ್ಷ. ಈಗಾಗಲೇ 'ಕಮ್ಯುನಿಸ್ಟ್' ಮುಲ್ಲಾ ಗದಗ, ಧಾರವಾಡ ಜಿಲ್ಲೆಗಳಲ್ಲಿ ಕಟ್ಟಡ ಕಾರ್ಮಿಕರಿಂದ ತಲಾ 150 ರೂ. ಪಡೆದು ಒಂದೂವರೆ ಲಕ್ಷ ಕಲೆಕ್ಷನ್ ಮಾಡಿದ್ದಾನೆ. ರಾಮಚಂದ್ರಪ್ಪನನ್ನು ಹುಬ್ಬಳ್ಳಿಗೆ ಕರೆಸಿ 50 ಸಾವಿರ ರೂ. ಕೊಟ್ಟಿದ್ದಾನೆ.


ರಾಮಚಂದ್ರಪ್ಪ


ಎಂ.ಎಚ್. ಮುಲ್ಲಾ

ಹುಬ್ಬಳ್ಳಿ

ದೆಹಲಿ ಚಲೋ-ಖಾ ಚಲೋ ಎತ್ತಿ

ವರ್ಷಕ್ಕೆ ಒಮ್ಮೆಯಾದರೂ 'ದೆಹಲಿ ಚಲೋ' ಅಥವಾ 'ಪಾರ್ಲಿಮೆಂಟ್ ಚಲೊ' ಕಾರ್ಯಕ್ರಮ ಇರುತ್ತದೆ. ಸರ್ಕಾರವನ್ನು ಎಚ್ಚರಿಸಲು ಇದು ಅವಶ್ಯವೂ ಹೌದು. ಆದರೆ ಇಲ್ಲಿ ಇದನ್ನೂ ಕಲೆಕ್ಷನ್‌ಗೆ ಬಳಸಿಕೊಳ್ಳುತ್ತಿದ್ದಾರೆ. ರಾಜ್ಯ ನಾಯಕರಾದ ರಾಮಚಂದ್ರಪ್ಪ ಶಿವಣ್ಣ ಇಲ್ಲಿ ತಮ್ಮ ವ್ಯಾಪಾರಿ ಬುದ್ಧಿ ತೋರಿಸಿದ್ದಾರೆ.

ಶಿವಣ್ಣ ರಾಮಚಂದ್ರಪ್ಪ ರಾಜ್ಯದ ಎಲ್ಲಾ ಅಂಗನವಾಡಿ ಕಟ್ಟಡ ಕಾರ್ಮಿಕರ ಸಂಘದ ನಾಯಕರುಗಳಿಗೆ ಪರ್ಸನಲ್ ಲೆಟರ್ ಕಳಿಸಿ 'ದೆಹಲಿ ಚಲೋ' ಕಾರ್ಯಕ್ರಮಕ್ಕಾಗಿ ಕಾರ್ಮಿಕರಿಂದ ತಲಾ 250 ರೂ. ಸಂಗ್ರಹಿಸಿ, ತಮಗೆ ಅದರಲ್ಲಿ ತಲಾ 50 ರೂನಂತೆ ಕೊಡಿ ಎಂದು ಹೇಳಿದ್ದಾರೆ!

ಇಷ್ಟೇ ಸಾಕಾಗಿತ್ತು ಮುಲ್ಲಾಗೆ... 700 ಜನರನ್ನು ದೆಹಲಿಗೆ ರೆಡಿ ಮಾಡಿ 1 ಲಕ್ಷ 75 ಸಾವಿರ ಕಲೆಕ್ಷನ್ನು ಮಾಡಿ ನವೆಂಬರ್ 19 ರಂದು 'ಚಲೋ' ಎಂದೇ ಬಿಟ್ಟ.... ಮರುದಿನ 300 ಜನ ಅಂಗನವಾಡಿಯವರು ಹೊರಟರು. ಮುಲ್ಲಾ ಮತ್ತೆ 75 ಸಾವಿರ ಗಿಟ್ಟಿಸಿ 'ಚಲೋ, ಚಲೋ ಬಾಳಾ ಚಲೋ' ಎಂದು ಖುಷ್ ಆಗಿಹೋದ.

ಧಾರವಾಡ ಜಿಲ್ಲೆ ಒಂದರಿಂದಲೇ ರಾಜ್ಯ ನಾಯಕರ ಒಪ್ಪಿಗೆಯಂತೆ ಸಂಗ್ರಹವಾಗಿದ್ದು ಎರಡೂವರೆ ಲಕ್ಷ: ಸಾವಿರ ಕಾರ್ಮಿಕರಿಂದ ರಾಮಚಂದ್ರಪ್ಪನಿಗೆ ಸಂದಿದ್ದು 75 ಸಾವಿರ. ಟ್ರೇನಲ್ಲಿ ಫ್ರೀ ಜರ್ನಿಗೆ ಯಾಕಿಷ್ಟೊಂದು ಹಣ? ಇದು ಕಾರ್ಮಿಕ ನಾಯಕರ ಹೋರಾಟದ ಹೊಸ ಶೈಲಿಯಾ? ಅಥವಾ ಎಲ್ಲದಕ್ಕೂ ಚಾರ್ಜ್ ಮಾಡಬೇಕು ಎನ್ನುವ ಐಎಮ್‌ಎಫ್‌ನ ಧೋರಣೆಯ ನಕಲಾ?

ಕಾರ್ಮಿಕರಿಗಿಂತ ಮಜಾ ಮಾಡಲು ಹೋದವರೇ ಅಧಿಕ. ಇದನ್ನೆಲ್ಲ ವಿರೋಧಿಸಿದವರಿಗೆ ಉಚ್ಚಾಟನೆಯ ತಲೆದಂಡ ತಪ್ಪಿದ್ದಲ್ಲ! ಇದಕ್ಕೆ ಡಾ. ಸಿದ್ದನಗೌಡ ಪಾಟೀಲರಾಗಲಿ, ಅನಂತಸುಬ್ಬರಾವ್ ಆಗಲಿ ಏನೂ ಮಾಡುವಂತಿಲ್ಲ! ಇವರ ವಿರುದ್ಧವೇ ತಯಾರಾಗಿ ನಿಂತಿದ್ದಾರೆ ರಾಮಚಂದ್ರಪ್ಪ ಶಿವಣ್ಣನಂತಹವರು.

ಹಿಂದೆ ಪಂಪಾಪತಿ, ಎ.ಜಿ. ಮುಧೋಳ, ಎಂ.ಎಸ್. ಕೃಷ್ಣನ್, ಉಪಾಧ್ಯಾಯ ಮುಂತಾದವರು ನಡೆಸಿದ ಹೋರಾಟವೆಲ್ಲಿ? ಇವತ್ತಿನವರ ಹಾರಾಟವೆಲ್ಲಿ? ದಾವಣಗೆರೆಯಲ್ಲಿ ಮಾಲೀಕ ಪ್ರಭುಗಳಿಗೆ ಕಿರೀಟ ತೊಡಿಸಿದ ರಾಮಚಂದ್ರಪ್ಪನಂತಹವರು ಕಮ್ಯುನಿಸ್ಟರೇ ಅಲ್ಲ ಅವರು ಬರಿ ಅನಿಷ್ಟರು.

ರಾಜ್ಯ ಸಮಿತಿ ತುರ್ತಾಗಿ ಚಿಕಿತ್ಸೆ ಕೊಡದಿದ್ದರೆ ಕೆಂಬಾವುಟ ಹರಿದು ಚಿಂದಿಯಾಗಲಿದೆ.

-ವರದಿಗಾರ

ಗೋರಿಯ ಸುತ್ತ ಚೆಡ್ಡಿಗಳು...


ಗುಲ್ಬರ್ಗಾ

ಸತತ 15 ದಿನದಿಂದ ಗುಲ್ಬರ್ಗಾ ಜಿಲ್ಲೆಯ ಸುರಪುರ ಪಟ್ಟಣ ಹಾಗೂ ಇದೇ ತಾಲ್ಲೂಕಿನ ಗ್ರಾಮಗಳ ನೆಮ್ಮದಿ ಕದಡಲು ಯತ್ನಿಸುತ್ತಿರುವ ಕೆಲವು ಕೋಮುವಾದಿ ಹಿಂದೂ ಸಂಘಟನೆಗಳು ಇಲ್ಲದ್ದೊಂದು ಹೇಳಿಕೆ ನೀಡುತ್ತ ಸೌಹಾರ್ದತೆಗೆ ಭಂಗ ತರುತ್ತಿದ್ದಾರೆ.

ವಿಷಯವಿಷ್ಟೇ....

ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣಪುರ (ಬಸವಸಾಗರ) ಜಲಾಶಯದ ಮುಂಭಾಗದಲ್ಲಿ 3x3 ಆಳತೆಯಲ್ಲಿರುವ ಗೋರಿಯ ಸುತ್ತಲು 40x50 ರ ವಿಸ್ತೀರ್ಣದಲ್ಲಿ ದೊಡ್ಡ ಕಟ್ಟೆ ನಿರ್ಮಿಸಲಾಗಿದೆ. ಈಗ್ಗೆ ಒಂದು ವರ್ಷದ ಹಿಂದೆ ಕೋಮುವಾದಿ ಮನಸ್ಸಿನ ಪತ್ರಕರ್ತನೊಬ್ಬ ತನ್ನ ಪತ್ರಿಕೆಯಲ್ಲಿ ಹಬ್ಬಿದ ಈ ಕಿಡಿಯೇ ಇಂದು ಕೋಮು ಗಲಭೆಗೆ ಕಾರಣವಾಗುತ್ತಿದೆ.

ಕಳೆದ ತಿಂಗಳು ಡಿಜಿಪಿ ರೂಪಕುಮಾರ ದತ್ತಾ ಇಲ್ಲಿಗೆ ಭೇಟಿ ನೀಡಿದ ಸಂದರ್ಭದಲ್ಲಿ ನಾಗರಿಕರೊಬ್ಬರು ಈ ಬಗ್ಗೆ ಪ್ರಶ್ನಿಸಿದಾಗ, ಇವುಗಳ ಬಗ್ಗೆ ಗಮನವಿಡುವಂತೆ ಹುಣಸಗಿ ಪಿಎಸ್‌ಐಗೆ ಕಟ್ಟೆಚ್ಚರ ವಹಿಸಲು ಹೇಳಿದ್ದೇ ತಡ, ಇಲ್ಲಿನ ಅನೇಕರು ಕೂಡಲೇ ಚಡ್ಡಿ ತೊಟ್ಟು ಇದನ್ನೊಂದು ಗಂಭೀರ ಇಶ್ಶೂ ಮಾಡಲು ಹೊರಟಿದ್ದಾರೆ.


ವಿವಾದಿತ ಗೋರಿ

ಇಂಥ ಇಶ್ಶೂಗಾಗಿಯೇ ಕಾದು ಕುಳಿತಂತಿರುವ ರಾಷ್ಟ್ರೀಯ ಹಿಂದೂ ಸೇನೆಯ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಹಾಗೂ ಆಂದೋಲದ ಸಿದ್ಧಲಿಂಗ ಸ್ವಾಮಿಗಳು "ಈ ಮಸೀದಿಯಲ್ಲಿ ಉಗ್ರರ ಚಟುವಟಿಕೆಗಳು ನಡೆದಿದೆ ಎಂಬ ಮಾಹಿತಿ ಇದೆ, ಆಕ್ರಮ ಗೋರಿಯನ್ನು ತೆರವುಗೊಳಿಸದಿದ್ದರೆ ಡಿ. 10 ರಂದು ಮುತ್ತಿಗೆ ಹಾಕುತ್ತೇವೆ" ಎಂದು ಬೆದರಿಕೆ ಹಾಕಿದ್ದಾರೆ.

ಹಿಂದೂ ಸಂಘಟನೆಯ ಬೆದರಿಕೆಯ ಹಿನ್ನೆಲೆಯಲ್ಲಿ 'ಗೋರಿ'ಗೆ ಪೊಲೀಸ್‌ರ ಸರ್ಪಗಾವಲು ಹಾಕಲಾಗಿದೆ. ಕಳೆದ ಒಂದು ತಿಂಗಳಿನಿಂದ 8 ಜನ ಪೊಲೀಸರು ಹಗಲು-ರಾತ್ರಿ ಕಾಯುತ್ತಿದ್ದಾರೆ. 1980 ರ (ಡಿ. ಗುಂಡೂರಾವ್ ಆಡಳಿತ)ರಲ್ಲಿ ನಾರಾಯಣಪುರ ಡ್ಯಾಮ್ ನಿರ್ಮಾಣವಾಗುವ ಸಂದರ್ಭದಲ್ಲಿ ಮುಳುಗಡೆಯಾದ 'ಮೇಲಿನ ಗಡ್ಡಿ' ಗ್ರಾಮದಲ್ಲಿ ಈ ಗೋರಿ ಇರಲಿಲ್ಲ, ಈ ಸರ್ವೆ ನಂ. 5/3 ಕಂದಾಯ ಇಲಾಖೆಗೆ ಬರದೆ, ಕೆ.ಬಿ.ಜೆ.ಎನ್.ಎಲ್. ವ್ಯಾಪ್ತಿಯಲ್ಲಿ ಬರುತ್ತದೆ. ಈ ಅಧಿಕಾರಿಗಳ ಹೊಣೆಗೇಡಿತನದಿಂದಾಗಿ ಕಳೆದ ಒಂದು ವರ್ಷದ ಹಿಂದೆ ಈ ಗೋರಿ ತಲೆ ಎತ್ತಿ ನಿಂತಿದೆ ಎಂದು ಆರೋಪಿಸುತ್ತಾರೆ ಹಿಂದೂ ಸಂಘಟನೆ ಯವರು. ಸಣ್ಣದಾದ ಈ ಗೋರಿ ಜಗಳದ ನೆಪದಲ್ಲಿ ಭಯೋತ್ಪಾದಕರಿಗೂ ಇಲ್ಲಿನ ಮುಸ್ಲಿಮರಿಗೂ ಲಿಂಕ್ ಇದೆ ಎಂಬ ಹುಸಿ ಸುಳ್ಳುಗಳನ್ನು ಪೋಣಿಸುತ್ತಾ ಸಾಗಿದ್ದಾರೆ.


ಜಿಲ್ಲಾಡಳಿತ ಎಚ್ಚರಗೊಂಡು ಚಡ್ಡಿಗಳ ಚಟುವಟಿಕೆಯನ್ನು ತಪ್ಪಿಸುವುದೆ?

-ವರದಿಗಾರ

ಕುಷ್ಟಗಿ ಕೋ-ಆಪ್ ಬ್ಯಾಂಕ್:
ಅರ್ಧ ಕೋಟಿ ಗಾಯಬ್

ಕೊಪ್ಪಳ

ಮೂರು ಕೋಟಿ ಟರ್ನ್‌ಓವರ್ ಇದ್ದ ಬ್ಯಾಂಕೊಂದು ಗೊಟಕ್ ಎನ್ನುತ್ತಿದೆ. ಇದರ ಕುತ್ತಿಗೆ ಹಿಸುಕುತ್ತಿರುವವರಾರು ಎಂದು ನೋಡಿದರೆ ಆಶ್ಚರ್ಯವಾಗುತ್ತದೆ. ಏಕೆಂದರೆ ಈ ಬ್ಯಾಂಕ್‌ನ ನಿರ್ದೇಶಕರು ಮತ್ತು ಸಿಬ್ಬಂದಿಯೇ ಇಂತಹ ಕೆಲಸಕ್ಕೆ ಕೈ ಹಾಕಿದ್ದಾರೆ.


ಮಾಜಿ ಶಾಸಕ ಶರಣಪ್ಪ


ಸದ್ಯ ಅರ್ಧಕೋಟಿಯ ಗೋಲ್‌ಮಾಲ್ ಮಾಡಿದ ಪದಾಧಿಕಾರಿಗಳು, ಸಿಬ್ಬಂದಿ 'ಬ್ಯಾಂಕ್ ಬೇಗ ಮುಳುಗಲಪ್ಪ' ಎಂದು ಬೇಡಿಕೊಳ್ಳುತ್ತಿದ್ದಾರೆ. ಏಕೆಂದರೆ ಇವರೆಲ್ಲ ತಮ್ಮ ಹೆಸರಲ್ಲಿ, ಸಂಬಂಧಿಕರ ಹೆಸರಲ್ಲಿ ಸಖತ್ತಾಗಿ ಸಾಲ ಎತ್ತಿದ್ದಾರೆ. ಕುಷ್ಟಗಿಯ ಶ್ರೀಮಂತರುಗಳೂ ಯದ್ವಾತದ್ವಾ ಸಾಲ ಪಡೆದಿವೆ. ಉಳಿತಾಯ ಮಾಡಿದ ಹಣವನ್ನು ಠೇವಣಿ ಇಟ್ಟ ಜನಸಾಮಾನ್ಯರು ಮಾತ್ರ ಬೀದಿಗೆ ಬೀಳಲಿದ್ದಾರೆ.

ಕುಷ್ಟಗಿ ಪಟ್ಟಣ ಸಹಕಾರಿ ಬ್ಯಾಂಕ್ ಹುಟ್ಟುತ್ತಲೇ ರೋಗಿಷ್ಟವಾಗಿತ್ತು. ಈಗ ಮರಣಶಯ್ಯೆಯಲ್ಲಿದೆ. ಉಳಿಸಿಕೊಳ್ಳುವ ಎಲ್ಲ ಅವಕಾಶ ಇದ್ದಾಗ್ಯೂ, ಅದರ ನಿರ್ದೇಶಕರಿಗೆ ಅದು ಇಷ್ಟವಿಲ್ಲ. ಈಗಾಗಲೇ ಕುತ್ತಿಗೆ ಹಿಡಿದು ನಿಂತಿದ್ದಾರೆ ಶವಪೆಟ್ಟಿಗೆಗೆ ಮೊಳೆ ಹೊಡೆಯಲು. ಪಂಚಯ್ಯ ಹಿರೇಮಠ, ಶರಣಪ್ಪ ಕರಡಿ ಇನ್ನಿತರರಿಂದ ಆರಂಭವಾದ ಈ ಬ್ಯಾಂಕ್ ಗೆ, ಅವರ ಸಂಬಂಧಿಕರೇ ಸಿಬ್ಬಂದಿಯಾದಾಗಲೇ ಬ್ಯಾಂಕ್‌ಗೆ ವೈರಸ್ ಅಟ್ಯಾಕ್ ಆಗಿಹೋಗಿತ್ತು. ಎರಡು ಸಾವಿರಕ್ಕೂ ಹೆಚ್ಚಿರುವ ಠೇವಣಿದಾರರ 20 ಲಕ್ಷ ರೂಪಾಯಿ ಪಿಗ್ಮಿ ಹಣ, ಉಳಿತಾಯ ಖಾತೆಯ 15 ಲಕ್ಷ, ಎಫ್.ಡಿ.ಯ 40 ಲಕ್ಷ... ಹೀಗೆ 75 ಲಕ್ಷ ರೂ.ಗಳನ್ನು ಸಾಮಾನ್ಯರಿಗೆ ವಾಪಸ್ ಮಾಡಬೇಕಾಗಿದೆ. ಆದರೆ ಈ ಬ್ಯಾಂಕ್ ತಿಜೋರಿ ಖಾಲಿಖಾಲಿ.

ಅರ್ಧ ಕೋಟಿ ಬರ್ಬಾದ್ ಮಾಡಿಬಿಟ್ಟಿವೆ ಈ ಕೋ-ಆಪ್ ಕಪಿಗಳು. ಶೇರುದಾರರೇ ಸಹಿ ಮಾಡಿ, ಸಾಲ ಕೊಡಿಸುವ ಯೋಜನೆಯಲ್ಲಿ 25 ಸಾವಿರ ಸಾಲಕ್ಕೆ 15 ಸಾವಿರ ಬಡ್ಡಿ ಸೇರಿ 40 ಸಾವಿರವಾದ್ರೂ, ಈ ಬ್ಯಾಂಕ್ ರೊಕ್ಕ ಕಟ್ಟಿಪಾ ಅಂತಾ ಕೇಳೋದೆ ಇಲ್ಲ! ಒಂದು ಲಕ್ಷ ರೂ. ಸಾಲಕ್ಕೆ 70 ಸಾವಿರದ ಆಸ್ತಿ ಜಾಮೀನು ಕೊಟ್ರೂ ಓಕೆ! ದಲಾಲಿ ಅಂಗಡಿಯಲ್ಲಿರುವಂತೆ ಈ ಬ್ಯಾಂಕಿನಲ್ಲೂ ಎರಡೆರಡು ನಮೂನೆ ಲೆಕ್ಕದ ವ್ಯವಹಾರ! ಬ್ಯಾಂಕಿನ ಹಣವನ್ನು ಕುಷ್ಟಗಿ ತುಂಬ ಬಡ್ಡಿಗೆ ಬಿಟ್ಟದ್ದೂ ಈ ಬ್ಯಾಂಕ್ ಬದ್ಮಾಷ್‌ಗಳ ರೆಕಾರ್ಡ್.

ಕೆಲ ತಿಂಗಳ ಹಿಂದೆ ಆಡಿಟಿಂಗ್ ನಡೆದಾಗ, ಬ್ಯಾಂಕಿಗೆ 5 ಲಕ್ಷ ರೂ. ಲಾಭ ಎಂದು ಊರ ತುಂಬಾ ಹೇಳಿಕೊಂಡು ತಿರುಗಿದರು ಬ್ಯಾಂಕ್‌ನ ಪದಾಧಿಕಾರಿಗಳು. ಮಾರ್ಚ್ 31 ಕ್ಕೆ ನಿಯಮ ಉಲ್ಲಂಘಿಸಿ ಬಸವರಾಜ ನಾಯಕ್‌ಗೆ ಒಂದೂವರೆ ಲಕ್ಷ, TMC ನೌಕರ ಶಿವಪುತ್ರಪ್ಪನಿಗೆ 1.30 ಲಕ್ಷ ಸಾಲ ನೀಡಿದ್ದು ಈಗ ಬಟಾಬಯಲಾಗಿದೆ. ಆಕ್ಟೋಬರ್ 30 ರಂದು ಇನ್ನೋರ್ವ ನಿರ್ದೇಶಕ ಬಸವನಗೌಡ ಪಾಟೀಲ್ ಮತ್ತೊಮ್ಮೆ ಆಡಿಟ್ ಮಾಡಿಸಲು ಕೇಳಿದ್ದಕ್ಕೆ ಅಧ್ಯಕ್ಷ ಉಮೇಶ ಮಂಗಳೂರು ಬಸವನಗೌಡರ ಮೇಲೆ ಹಲ್ಲೆ ಮಾಡಿಬಿಟ್ಟ. ಈ ಉಮೇಶ ಕುಷ್ಟಗಿ ನಗರ ಜೆಡಿಎಸ್‌ನ ಅಧ್ಯಕ್ಷ ಬೇರೆ. ಪೊಲೀಸ್ ಕಂಪ್ಲೇಂಟ್ ಆಗಿ, ಉಮೇಶ ಜಾಮೀನು ತೆಗೆದುಕೊಂಡು ಪಾರಾದ. ನಂತರ ಲೆಕ್ಕ ಪರಿಶೋಧನಾ ಇಲಾಖೆ ಮ್ಯಾನೇಜರ್, ಆಡಿಟರ್‌ಗೆ ಮೆಮೊ ನೀಡಿ ತನಿಖೆ ಮಾಡಿದಾಗ 44 ಲಕ್ಷಗಳ ಅಪರಾತಪರಾ ಪತ್ತೆಯಾಗಿದೆ.

ಇಲ್ಲಿ ನೋಡಿ, ಪದಾಧಿಕಾರಿಗಳು, ಸಿಬ್ಬಂದಿಗಳು ತಮಗೆ, ಸಂಬಂಧಿಕರಿಗೆ ಯಥೇಚ್ಛ ಸಾಲ ಕೊಟ್ಟುಕೊಂಡಿದ್ದಾರೆ. ಅಧ್ಯಕ್ಷ ಉಮೇಶ ಮಂಗಳೂರು ಮಾವನ ಹೆಸರಲ್ಲಿ ಒಂದು ಲಕ್ಷ, ಚಿಕ್ಕಪ್ಪನ ಮಗನ ಹೆಸರಲ್ಲಿ 2 ಲಕ್ಷ, ಮಾಜಿ ಅಧ್ಯಕ್ಷ ಶಶಿಧರ್ ಮಾವನ ಹೆಸರಲ್ಲಿ 3 ಲಕ್ಷ, ಡೈರೆಕ್ಟರ್ ಕಿಶೋರ್ ಹಿರೇಮಠ ತಮ್ಮನ ಹೆಸರಲ್ಲಿ 60 ಸಾವಿರ, ಶಶಿಧರ ಕವಲಿ ಮಾವನ ಹೆಸರಲ್ಲಿ 3 ಲಕ್ಷ, ಮ್ಯಾನೇಜರ್ ಉಮಾ ಬಳ್ಳೊಳ್ಳಿ ತಂದೆ ಹೆಸರಲ್ಲಿ 1 ಲಕ್ಷ, ಮಾಜಿ ಶಾಸಕ, ಜಿಲ್ಲಾ ಜೆಡಿಎಸ್‌ನ ಭಾವಿ ಅಧ್ಯಕ್ಷ ಕೆ. ಶರಣಪ್ಪನ ಮಕ್ಕಳಾದ ಕೆ. ಮಹೇಶ ಹೆಸರಲ್ಲಿ 2 ಲಕ್ಷ, ಕೆ. ಉಮೇಶ್ ಹೆಸರಲ್ಲಿ 3 ಲಕ್ಷ.... ಅಯ್ಯಯ್ಯೋ ಬರೆಯಲು ಕುಳಿತರೆ ಮುಗಿಯಲ್ಲ ಈ ಲಿಸ್ಟು. ಕುಷ್ಟಗಿಯ ದೊಡ್ಡ ದೊಡ್ಡೋರಿಗೆಲ್ಲ ಸಾಲಗಳೋ ಸಾಲಗಳು! ಈ ದೊಡ್ಡವರೆಲ್ಲ ಈಗ ಕೈ ಎತ್ತಿದ್ದಾರೆ.


ಉಮೇಶ್ ಮಂಗಳೂರು

ಇನ್ನೊಂದು ಮಜಾ ನೋಡಿ. ಮ್ಯಾನೇಜರ್ ಉಮಾ ಬಳ್ಳೊಳ್ಳಿಯ ಸಂಬಂಧಿಕ ಅಶೋಕ್ ಬಳ್ಳೊಳ್ಳಿಗೆ ಯಲಬುರ್ಗಾ ತಾಲೂಕಿನ ಎಲ್.ಐ.ಸಿ. ಏಜೆಂಟ್ ಮೇರೆಸಾಬ್ ನೂರ್‌ಬಾಷಾ ಎಂಬಾತ ಲಕ್ಷ ರೂಪಾಯಿ ಸಾಲ ಕೊಡಬೇಕಿತ್ತು. ಅದನ್ನು ಉಮಾ, ಅಶೋಕ್ ಹೇಗೆ ಪಡೆದರು ಗೊತ್ತೆ? ನೂರ್‌ಬಾಷಾನ ಹೆಸರಲ್ಲಿ 2 ಲಕ್ಷ ಸಾಲ ಎತ್ತಿ, ತಮ್ಮ ಹಣ ಪಡೆದುಕೊಂಡು ಬಿಡೋದೆ? ನೂರ್‌ಬಾಷಾಗೆ ಎಕ್ಸ್‌ಟ್ರಾ ಲಕ್ಷ ಸಾಲ ಬೇರೆ! ಬ್ಯಾಂಕಿನ ಮೂವರು ಸಿಬ್ಬಂದಿಗಳು 6 ಲಕ್ಷ ಸಾಲ ಎತ್ತಿದ್ದರೆ, ಇನ್ನು ಮೂವರು ನಿರ್ದೇಶಕರು ಆನ್‌ಲೈನ್ ಲಾಟರಿ ಶುರು ಮಾಡಲು ತುದಿಗಾಲ ಮೇಲೆ ನಿಂತಿದ್ದಾರೆ.

ಇದೆಲ್ಲ ಗೊತ್ತಾದ ಗ್ರಾಹಕರು ಬ್ಯಾಂಕ್‌ಗೆ ಬಂದರೆ ಅಲ್ಲಿ ದೊಡ್ಡ ಬೀಗ. ಜನ ಪೊಲೀಸರಿಗೆ ಕಂಪ್ಲೇಂಟ್ ಕೊಡುತ್ತಿದ್ದಂತೆ, ರಹಸ್ಯ ಸ್ಥಳದಲ್ಲಿ ಮೀಟಿಂಗ್ ನಡೆಸಿದ ಆಡಳಿತ ಮಂಡಳಿ ಸದ್ಯಕ್ಕೆ ಬ್ಯಾಂಕ್‌ನ ಅಧ್ಯಕ್ಷನ ಸ್ಥಾನದಿಂದ ಉಮೇಶನನ್ನು ತೆಗೆದು ಪ್ರಭಾಕರ್ ಕಂಡಕೂರನನ್ನು ಕೂಡಿಸಿದೆ. ಉಮೇಶ ಒಂದು ಲಕ್ಷ, ಇತರ ಪದಾಧಿಕಾರಿಗಳು ತಲಾ 50 ಸಾವಿರ ವಾಪಸ್ ಮಾಡಿ ಬ್ಯಾಂಕ್‌ನ್ನು ಉಳಿಸಲು ನಿರ್ಧರಿಸಿದ್ದರು. ಆದರೆ ಈಗ ಕುಷ್ಟಗಿ ಬೇರೆ ಬ್ಯಾಂಕಿನೊಂದಿಗೆ ಮರ್ಜ್ ಮಾಡಲು ಪ್ಲಾನು ಹಾಕಿ ಬಡವರ ಅರ್ಧ ಕೋಟಿ ಠೇವಣಿಯನ್ನು ಬೇಕಾಬಿಟ್ಟಿ [illegible]

ತಮಗೆ ಸಾಲ

ಈ ಬ್ಯಾಂಕನ್ನು ಮುಳುಗಿಸುತ್ತಿರುವ ಕಿರಾತಕರ ಲಿಸ್ಟು ಬೇಕೆ? ಬ್ಯಾಂಕ್‌ನ ಅಧ್ಯಕ್ಷ ಉಮೇಶ್ ಮಂಗಳೂರು, ಮಾಜಿ ಅಧ್ಯಕ್ಷ ಕಿಶೋರ್ ಹಿರೇಮಠ, ಶಶಿಧರ ಕವಲಿ, ಮ್ಯಾನೇಜರ್ ಉಮಾ ಬಳ್ಳೊಳ್ಳಿ... ಇವರಿಗೆಲ್ಲ ಆರ್.ಬಿ.ಐ. ಅರ್ಥಶಾಸ್ತ್ರ ಅಂದ್ರೆ, ಶಿಸ್ತು, ಹೊಂಗ ಬೇಕಾಗ, ಬಿಸಿಸಿಗ ಸಾಲ ಕೊಟ್ಟು [illegible]

ರಿಗೆಲ್ಲ ಸಾಲ ಕೊಟ್ಟು ಮ್ಯಾನೇಜರ್ ಉಮಾ ಬಳ್ಳೊಳ್ಳಿ ಎಂಬ್ ಮಹಿಳೆ ಸುಳ್ಳಿನ ಸರಕಾರ ಬ್ಯಾಂಕ್ ಸೇರುತ್ತಿದ್ದಾಳೆ [illegible]

-ವರದಿಗಾರ

ಸೈತಾನ

ಹಳ್ಳಿಯ ಜನ ಫಾದರ್ ಸಮಾನ್ ಅವರನ್ನು ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಚಾರಗಳಿಗೆ ಸಂಬಂಧಿಸಿದಂತೆ ತಮ್ಮ ಮಾರ್ಗದರ್ಶಕರನ್ನಾಗಿ ಪರಿಗಣಿಸಿದ್ದರು. ಅದಕ್ಕೆ ಕಾರಣ ಅವರು ಮನುಷ್ಯನ ಪಾಪಗಳ ಬಗ್ಗೆ ಅಧಿಕಾರಯುತವಾಗಿ ಮಾತನಾಡಬಲ್ಲವರಾಗಿದ್ದರಲ್ಲದೆ, ಸ್ವರ್ಗ, ನರಕ ಮತ್ತು ಪರ್ಗೆಟರಿ 'ಪಶ್ಚಾತ್ತಾಪದ ಸ್ಥಳ'ಗಳ ಬಗ್ಗೆ ಅಗಾಧ ಪಾಂಡಿತ್ಯವನ್ನು ಹೊಂದಿದ್ದರು ಎಂಬುದಾಗಿತ್ತು.

ಉತ್ತರ ಲೆಬನಾನ್‌ನ ಹಳ್ಳಿಗಳ ಜನರಿಗೆ ಬೋಧನೆ ಮಾಡುತ್ತಾ ಸೈತಾನನ ಕುತಂತ್ರಗಳಿಂದ ಅವರನ್ನು ರಕ್ಷಿಸುತ್ತಾ ಅವರ ಪಾಪಗಳನ್ನು ಪರಿಹರಿಸುತ್ತಾ ಸಂಚರಿಸುವುದು ಅವರ ಕಾಯಕವಾಗಿತ್ತು. ಪೂಜ್ಯರಾದ ಫಾದರ್ ಸಮಾನ್‌ರವರು ಸೈತಾನನ ವಿರುದ್ಧ ನಿರಂತರವಾದ ಹೋರಾಟದಲ್ಲಿ ತೊಡಗಿದ್ದರು. ರೈತಾಪಿಗಳು ಅವರ ಬಗ್ಗೆ ಅಪಾರ ಗೌರವವನ್ನು ಹೊಂದಿದ್ದರಲ್ಲದೆ, ಬಂಗಾರ ಮತ್ತು ಬೆಳ್ಳಿಯ ದೀನಾರುಗಳನ್ನು ನೀಡಿ ಅವರ ಉಪದೇಶವನ್ನು ಪಡೆಯಲು ಸದಾ ಕಾತುರರಾಗಿರುತ್ತಿದ್ದರು. ಹಾಗೆಯೇ ಪ್ರತಿ ಸುಗ್ಗಿಯಲ್ಲಿ ಅವರಿಗೆ ತಮ್ಮ ತೋಟದಲ್ಲಿನ ಅತ್ಯುತ್ತಮವಾದ ಹಣ್ಣುಗಳನ್ನು ಕಾಣಿಕೆಯಾಗಿ ನೀಡುತ್ತಿದ್ದರು.

ಅಂತಹ ಒಂದು ಸುಗ್ಗಿ ಕಾಲದ ಸಂಜೆ ಫಾದರ್ ಸಮಾನ್ ಬೆಟ್ಟ ಕಣಿವೆಗಳನ್ನು ದಾಟ ಒಂಟಿ ಹಳ್ಳಿಯೊಂದರ ಕಡೆಗೆ ನಡೆಯುತ್ತಿರುವಾಗ ಅವರಿಗೆ ರಸ್ತೆ ಬದಿಯ ಕಂದಕದಿಂದ ನೋವಿನ ಚೀತ್ಕಾರವೊಂದು ಕೇಳಿಸಿತು. ಆಗ ಅವರು ಅಲ್ಲಿಯೇ ನಿಂತು ಆ ಆರ್ತನಾದ ಬಂದ ಕಡೆ ನೋಡಿದರು. ಅಲ್ಲಿ ಅವರಿಗೆ ಬೆತ್ತಲೆಯಾಗಿದ್ದ ಗಾಯಾಳು ಒಬ್ಬ ಬಿದ್ದಿರುವುದು ಕಾಣಿಸಿತು. ಅವನ ತಲೆ ಮತ್ತು ಎದೆಯ ಮೇಲಾಗಿದ್ದ ಆಳವಾದ ಗಾಯಗಳಿಂದ ರಕ್ತದ ಹೊಳೆಯೇ ಹರಿಯುತ್ತಿತ್ತು. ಅವನು "ನನ್ನನ್ನು ಕಾಪಾಡಿ, ನನ್ನನ್ನು ರಕ್ಷಿಸಿ, ನನ್ನ ಮೇಲೆ ದಯೆ ತೋರಿ, ನಾನು ಸಾಯುತ್ತಿದ್ದೇನೆ" ಎಂದು ತುಂಬಾ ಯಾತನೆಯಿಂದ ನರಳುತ್ತಿದ್ದ. ಫಾದರ್ ಸಮಾನ್ ಆ ವ್ಯಕ್ತಿಯೆಡೆಗೆ ನೋಡಿ ಈ ವ್ಯಕ್ತಿ ಕಳ್ಳನಿರಬೇಕು. ಇವನು ದಾರಿಹೋಕರನ್ನು ದೋಚಲು ಪ್ರಯತ್ನಿಸಿರಬೇಕು, ಅದು ಸಾಧ್ಯವಾಗದೆ, ಅವರಲ್ಲಿ ಒಬ್ಬನಿಂದ ಗಾಯಗೊಂಡಿರಬೇಕು. ಇವನು ಸತ್ತರೆ ಅವನ ಪ್ರಾಣಹರಣ ಮಾಡಿದ್ದಕ್ಕಾಗಿ ನಾನು ನಿಂದಾರ್ಹನಾಗಬೇಕಾದೀತು ಎಂದುಕೊಂಡು ತಮ್ಮ ಪ್ರಯಾಣವನ್ನು ಮುಂದುವರೆಸಿದರು.


ಅಷ್ಟರಲ್ಲಿ ಸಾಯುತ್ತಿದ್ದವ "ನನ್ನನ್ನು ಬಿಟ್ಟು ಹೋಗಬೇಡ, ನಾನು ಸಾಯುತ್ತಿದ್ದೇನೆ" ಎಂದು ಕೂಗಿ ಅವರನ್ನು ತಡೆದ. ಆಗ ಫಾದರ್ ಮತ್ತೆ ಯೋಚಿಸಿದರು. ಆ ವ್ಯಕ್ತಿಗೆ ಸಹಾಯ ಮಾಡಲು ನಿರಾಕರಿಸುತ್ತಿದ್ದೇನೆಂಬ ಅರಿವಾಗಿ ಅವರ ಮುಖ ಬಿಳಿಚಿಕೊಂಡಿತು. ಅವರ ತುಟಿಗಳು ಅದುರಿದವು. ಆದರೆ ಅವರು ತಮ್ಮಲ್ಲೇ ಖಂಡಿತವಾಗಿಯೂ "ಇವನೊಬ್ಬ ಕಾಡಿನಲ್ಲಿ ಅಲೆಯುವ ಹುಚ್ಚನಾಗಿರಬೇಕು. ಅವನ ಗಾಯಗಳು ನನ್ನ ಎದೆಯಲ್ಲಿ ಭಯವನ್ನು ಮೂಡಿಸುತ್ತವೆ. ನಾನೇನು ಮಾಡಲಿ? ಖಂಡಿತವಾಗಿಯೂ ಧರ್ಮಗುರು ಒಬ್ಬ ಗಾಯಗೊಂಡ ದೇಹಗಳಿಗೆ ಚಿಕಿತ್ಸೆ ನೀಡಲಾರ" ಎಂದುಕೊಂಡರು. ಕೆಲವು ಹೆಜ್ಜೆ ನಡೆಯುವಷ್ಟರಲ್ಲಿ ಸಾಯುತ್ತಿದ್ದವ ಬಂಡೆಗಳೂ ಕೂಡ ಕರಗುವಂತೆ ಪ್ರಲಾಪಿಸಿದ. "ನನ್ನ ಹತ್ತಿರ ಬಾ ಏಕೆಂದರೆ ನಾವು ದೀರ್ಘಕಾಲದ ಗೆಳೆಯರು. ನೀನು ಒಳ್ಳೆಯ ಕುರುಬ ಮತ್ತು ನಾನು ನೀನು ಅಂದುಕೊಂಡಂತೆ ಕಳ್ಳನೂ ಅಲ್ಲ, ಹುಚ್ಚನೂ ಅಲ್ಲ! ಹತ್ತಿರ ಬಾ, ನನ್ನನ್ನು ಈ ನಿರ್ಜನ ಸ್ಥಳದಲ್ಲಿ ಸಾಯಲು ಬಿಡಬೇಡ. ಬಾ, ನಾನಾರೆಂದು ಹೇಳುತ್ತೇನೆ."

ಫಾದರ್ ಸಮಾನ್ ಅವನ ಸಮೀಪಕ್ಕೆ ಒಂದು ಮಂಡಿಯೂರಿ ಅವನನ್ನೇ ದಿಟ್ಟಿಸಿದರು. ಆದರೆ ಅಲ್ಲಿ ಅವರೊಂದು ವೈರುಧ್ಯಮಯ ಲಕ್ಷಣಗಳನ್ನೊಳಗೊಂಡ ವಿಚಿತ್ರವಾದ ಮುಖದಲ್ಲಿ ಕೃತ್ರಿಮತೆಯೊಂದಿಗಿನ ಬುದ್ಧಿವಂತಿಕೆಯನ್ನು, ಸೌಂದರ್ಯದೊಂದಿಗಿನ ಕುರೂಪವನ್ನು ಮತ್ತು ಸಾಧುತ್ವತನದೊಂದಿಗಿನ ದುಷ್ಟತನವನ್ನು ಕಂಡರು. ಕೂಡಲೇ ಮೇಲೆದ್ದು "ನೀನು ಯಾರು?" ಎಂದು ಉದ್ಗರಿಸಿದರು.

ಕ್ಷೀಣಿಸುತ್ತಿದ್ದ ಧ್ವನಿಯಲ್ಲಿ ಮರಣಿಸುತ್ತಿದ್ದವ ಹೇಳಿದ: "ನನ್ನ ಕಂಡು ಹೆದರಬೇಡ ಫಾದರ್. ನಾವಿಬ್ಬರು ದೀರ್ಘಕಾಲದ ಸ್ನೇಹಿತರು. ನಾನು ನಿಲ್ಲಲು ಸಹಾಯ ಮಾಡು. ನನ್ನನ್ನ ಹತ್ತಿರದ ಹೊಳೆಗೆ ಹೊತ್ತೊಯ್ದು ನಿನ್ನ ಬಟ್ಟೆಗಳಿಂದ ನನ್ನ ಗಾಯಗಳನ್ನು ಶುಚಿಗೊಳಿಸು."

ಆಗ ಫಾದರ್ ಸಮಾನ್ ಅವನ ಬಗ್ಗೆ ವಿಚಾರಿಸುತ್ತ "ನೀನು ಯಾರೆಂದು ಹೇಳು. ಯಾಕೆಂದರೆ ನೀನು ಯಾರೆಂದು ನನಗೆ ಗೊತ್ತಿಲ್ಲ ಮತ್ತು ನಿನ್ನನ್ನು ನೋಡಿದ್ದು ನೆನಪಿಲ್ಲ" ಎಂದು ಕೇಳಿದರು.

ಅದಕ್ಕೆ ಆ ವ್ಯಕ್ತಿ ವ್ಯಥಿತ ಧ್ವನಿಯಲ್ಲಿ "ನಿನಗೆ ನನ್ನ ಗುರುತಿದೆ. ನೀನು ನನ್ನನ್ನು ಸಾವಿರ ಬಾರಿ ನೋಡಿದ್ದೀಯಷ್ಟೆ ಅಲ್ಲ, ದಿನವೂ ನನ್ನ ಬಗ್ಗೆ ಮಾತನಾಡುತ್ತೀಯ. ನಿನ್ನ ಜೀವಕ್ಕಿಂತಲೂ ನಾನು ನಿನಗೆ ಪ್ರಿಯನಾದವನು" ಎಂದು ಉಸುರಿದ.



ಆಗ ಫಾದರ್ ಅವನನ್ನು ಎಚ್ಚರಿಸಿದ, "ನೀನು ಒಬ್ಬ ಠಕ್ಕ. ಸಾಯುವವ ಸತ್ಯವನ್ನ ನುಡಿಯಬೇಕು .... ನನ್ನ ಜೀವಮಾನದಲ್ಲೆ ನಿನ್ನ ಕೆಟ್ಟ ಮುಖವನ್ನು ಕಂಡಿಲ್ಲ. ನೀನು ಯಾರೆಂದು ಹೇಳು. ಇಲ್ಲವಾದಲ್ಲಿ ನಾನು ನಿನ್ನನ್ನು ಇಲ್ಲಿಯೇ ಸಾಯಗೊಡಬೇಕಾಗುತ್ತದೆ." ಆಗ ಆ ಗಾಯಾಳು ನಿಧಾನವಾಗಿ ಚಲಿಸುತ್ತಾ ಪಾದ್ರಿಯ ಕಣ್ಣುಗಳನ್ನೇ ದಿಟ್ಟಿಸಿದ. ತಿರಸ್ಕಾರದ ನಗೆಯೊಂದು ಅವನ ತುಟಿಗಳ ಮೇಲೆ ಸರಿದಾಡಿತು. ಶಾಂತವಾದ ಮತ್ತು ಅಷ್ಟೆ ಆಳವಾದ ಮೆಲುಧ್ವನಿಯಲ್ಲಿ ಅವ ಹೇಳಿದ "ನಾನು ಸೈತಾನ".


ಅಂತಹ ಭಯಾನಕವಾದ ಪದವನ್ನು ಕೇಳಿದ ಫಾದರ್ ಸಮಾನ್ ಇಡೀ ಕಣಿವೆ ಮಾರ್ದನಿಸುವಂತೆ ಕಿರುಚಿ ಸಾಯುತ್ತಿದ್ದ ವ್ಯಕ್ತಿಯನ್ನು ದಿಟ್ಟಿಸಿದರು. ಆಗ ಅವರಿಗೆ ಹಳ್ಳಿಯ ಚರ್ಚಿನ ಗೋಡೆಯ ಮೇಲೆ ತೂಗುಹಾಕಿದ ಚಿತ್ರದೊಂದಿಗೆ ಆ ವ್ಯಕ್ತಿಯ ವಿಕಾರವಾದ ದೇಹ ಹೋಲುತ್ತಿದೆಯೆಂಬ ಅರಿವಾಯಿತು. ಅವರು ನಡುಗುತ್ತಾ "ನಿನ್ನ ನರಕ ಸದೃಶ ರೂಪವನ್ನು ನಾನು ನಂಬಿದ ದೇವರು, ನನಗೆ ತೋರಿಸಿ ನಿನ್ನನ್ನು ದ್ವೇಷಿಸುವಂತೆ ಮಾಡಿದ್ದಾರೆ. ಯಾವತ್ತಿಗೂ ನೀನು ಶಾಪಗ್ರಸ್ಥನಾಗಿಯೇ ಇರು. ರೋಗಗ್ರಸ್ಥ ಕುರಿಯನ್ನು ಕುರುಬ ನಾಶ ಮಾಡಲೇಬೇಕು ಇಲ್ಲವಾದರೆ ಆ ರೋಗ ಬೇರೆ ಕುರಿಗಳನ್ನೂ ಬಾಧಿಸುತ್ತದೆ" ಎಂದು ವಿರುದ್ಧನಿಯಲ್ಲಿ ಅಬ್ಬರಿಸಿದರು.

ಅದಕ್ಕೆ ಸೈತಾನ "ಅವಸರ ಬೇಡ ಫಾದರ್, ಹಾಗೆಯೆ ಓಡುವ ಕಾಲವನ್ನು ವ್ಯರ್ಥ ಮಾತುಗಳಲ್ಲಿ ಕಳೆಯುವುದು ಬೇಡ. ಬಾ, ಬಂದು ಈ ನನ್ನ ದೇಹದಿಂದ ಪ್ರಾಣವಾಯು ಹಾರುವುದಕ್ಕೆ ಮುನ್ನ ನನ್ನ ಗಾಯಗಳನ್ನ ಮುಚ್ಚು" ಎಂದದ್ದಕ್ಕೆ ಫಾದರ್ ಸಮಾನ್‌ರ ಸಿಟ್ಟಿನ ಊಟೆ ಒಡೆಯಿತು. "ನರಕದ ಅಮೇಧ್ಯದಿಂದಾದ ಈ ದೇಹವನ್ನು ಪ್ರತಿನಿತ್ಯ ದೇವರನ್ನು ಪೂಜಿಸುವ ಈ ಕೈಗಳು ಎಂದಿಗೂ ಮುಟ್ಟುವುದಿಲ್ಲ. ಒಳ್ಳೆಯದರ ನಾಶವೆ ನಿನ್ನ ಉದ್ದೇಶವಾಗಿರುವುದರಿಂದ ಯುಗಯುಗಾಂತರಗಳುದ್ದಕ್ಕೂ ಮನುಕುಲದ ಶಾಪಕ್ಕೆ ಗುರಿಯಾಗಿ ನೀನು ಸಾಯಬೇಕು. ಏಕೆಂದರೆ, ನೀನು ಮನುಕುಲದ ಶತ್ರು" ಎಂದು ರೇಗಿದರು.

ಅತಿಯಾದ ಯಾತನೆಯಿಂದ ಒಂದೇ ಮೊಳಕೈಯನ್ನೂರಿ ಸಾವರಿಸಿಕೊಂಡು ಮೇಲೆದ್ದ ಸೈತಾನನು ನೀಡಿದ ಪ್ರತಿಕ್ರಿಯೆ ಅವನಲ್ಲಿ ಚಿಗುರುತ್ತಿದ್ದ ಆತ್ಮವಿಶ್ವಾಸವನ್ನು ಧ್ವನಿಸುತ್ತಿತ್ತು, "ನಿನಗೆ ನೀನೇನು ಹೇಳುತ್ತಿರುವೆಯೆಂಬುದು ಗೊತ್ತಿಲ್ಲ, ಹಾಗೆಯೇ ನಿನ್ನ ಮೇಲೆ ನೀನೇ ಎಂತಹ ಅಪರಾಧ ಹೇರಿಕೊಳ್ಳುತ್ತಿದ್ದೀಯ ಎಂಬುದೂ ನಿನಗೆ ಅರ್ಥವಾಗುತ್ತಿಲ್ಲ, ನನ್ನ ಕಥೆ ಹೇಳುತ್ತೇನೆ. ಮನಸ್ಸಿಟ್ಟು ಕೇಳು. ಇಂದು ನಾನೀ ಕಣಿವೆಗುಂಟ ನಡೆಯುತ್ತಾ ಈ ಸ್ಥಳವನ್ನು ತಲುಪಿದಾಗ ದೇವತೆಗಳದ್ದೊಂದು ಗುಂಪು ನನ್ನ ಮೇಲೆರಗಿತು. ಅವರಲ್ಲೊಬ್ಬನ ಬಳಿ ಮಿರುಗುತ್ತಿದ್ದ ಎರಡಲುಗಿನ ಖಡ್ಗವಿರದೇ ಹೋಗಿದ್ದರೆ ನಾನು ಅವರನ್ನೆಲ್ಲ ಓಡಿಸಿಬಿಡುತ್ತಿದ್ದೆ. ಆದರೆ ಆ ಪ್ರಖರ ಖಡ್ಗದೆದುರು ನನ್ನಿಂದ ಸೆಣಸಲಾಗಲಿಲ್ಲ." ಪಕ್ಕೆಯಲ್ಲಾಗಿದ್ದ ಗಾಯದ ನೋವು ಅವನು ತನ್ನ ಮಾತುಗಳನ್ನು ಕ್ಷಣಕಾಲ ನಿಲ್ಲಿಸುವಂತೆ ಮಾಡಿತು. ತನ್ನ ನಡುಗುವ ಕೈಯಿಂದ ಗಾಯವನ್ನು ಒತ್ತಿಕೊಂಡು, ತನ್ನ ಮಾತನ್ನು ಮುಂದುವರೆಸಿದ. "ಆ ಸಶಸ್ತ್ರಧಾರಿ ದೇವತೆ, ಮೈಕೇಲ್ ಇರಬೇಕು. ನಿಜಕ್ಕೂ ನುರಿತ ಖಡ್ಗಮಲ್ಲನಾಗಿದ್ದ. ನಾನು ಈ ಕಂದಕಕ್ಕೆ ಬಿದ್ದು, ಸತ್ತವನಂತೆ ನಟಿಸದೇ ಹೋಗಿದ್ದರೆ, ಅವನು ನನ್ನನ್ನು ಚಿಂದಿ ಮಾಡಿಬಿಡುತ್ತಿದ್ದ."

ಅವನ ಮಾತನ್ನು ಕೇಳಿದ ಫಾದರ್ ಸಮಾನ್ ಸ್ವರ್ಗದೆಡೆಗೆ ನೋಡುತ್ತ ಗೆಲುವಿನ ದನಿಯಲ್ಲಿ "ಇಂತಹ ಕೆಟ್ಟ ಶತ್ರುವಿನಿಂದ ಮನುಕುಲವನ್ನು ರಕ್ಷಿಸಿದ ಮೈಕೇಲ್‌ನ ಹೆಸರು ಅನುಗ್ರಹೀತವಾಗಲಿ" ಎಂದು ಪ್ರಾರ್ಥಿಸಿದರು.

ಆದರೆ ಸೈತಾನ ಅವರ ಮಾತುಗಳನ್ನ ಧಿಕ್ಕರಿಸುತ್ತ "ಮನುಕುಲದೆಡೆಗಿನ ನನ್ನ ತಿರಸ್ಕಾರ ನಿನಗೆ ನಿನ್ನ ಮೇಲೇ ಇರುವ ದ್ವೇಷಕ್ಕಿಂತ ದೊಡ್ಡದೇನೂ ಅಲ್ಲ, ... ನಿನ್ನ ರಕ್ಷಣೆಗೆ ಎಂದೂ ಬಾರದ ಮೈಕೇಲ್‌ನನ್ನ ನೀನು ಹರಸುತ್ತಿದ್ದೀಯ. ಆದರೆ ನಿನ್ನ ನೆಮ್ಮದಿ ಮತ್ತು ಸಂತೋಷಕ್ಕೆ ಮೂಲವಾದ ನನ್ನನ್ನು ನಾನು ಸೋತಿರುವ ಗಳಿಗೆಯಲ್ಲಿ ಶಪಿಸುತ್ತಿದ್ದೀಯಾ. ನಿನ್ನ ಹಾರೈಕೆ ಮತ್ತು ಕರುಣೆಯನ್ನು ನನ್ನೆಡೆಗೆ ತೋರದ ನೀನು ನನ್ನ ನೆರಳಿನಡಿಯಲ್ಲಿ ಬದುಕಿ ಸುಖಿಸುತ್ತೀಯ... ನಿನ್ನ ಬದುಕಿಗಾಗಿ ಒಂದು ಅಸ್ತ್ರವನ್ನು ಮತ್ತು ನನ್ನ ಅಸ್ತಿತ್ವಕ್ಕಾಗಿ ಒಂದು ನೆಪವನ್ನು ನೀನು ಆರಿಸಿಕೊಂಡಿದ್ದೀಯ. ಜೊತೆಗೆ ನಿನ್ನೆಲ್ಲ ಕೆಲಸಗಳನ್ನು ಸಮರ್ಥಿಸಿಕೊಳ್ಳಲಿಕ್ಕೆ ನನ್ನ ಹೆಸರನ್ನು ಬಳಸಿಕೊಳ್ಳುತ್ತಿಯ. ನಿನಗೆ ನನ್ನ ವರ್ತಮಾನ ಮತ್ತು ಭವಿಷ್ಯದ ಅವಶ್ಯಕತೆ ಇರುವಂತೆ ಮಾಡಿದ್ದು ನನ್ನ ಗತಕಾಲದ ಬದುಕು ತಾನೆ? ನಿನಗೆ ಬೇಕಾದಷ್ಟು ಸಂಪತ್ತನ್ನ ಗಳಿಸುವ ಗುರಿಯನ್ನು ನೀನು ತಲುಪಿದ್ದೀಯಾ ? ನನ್ನ ಸಾಮ್ರಾಜ್ಯವನ್ನು ಭೀತಿಯ ಕೇಂದ್ರವನ್ನಾಗಿ ಬಳಸದೆ ನಿನ್ನ ಅನುಯಾಯಿಗಳಿಂದ ಹೆಚ್ಚಿನ ಹಣ ಗಳಿಸುವುದು ಅಸಾಧ್ಯವೆಂಬುದನ್ನು ನೀನು ಕಂಡುಕೊಂಡಿದ್ದೀಯ ?



"ನಾನು ಸತ್ತರೆ ನೀನು ಹೊಟ್ಟೆಗಿಲ್ಲದೆ ಸಾಯಬೇಕಾಗುತ್ತೆ ಅನ್ನುವ ಅರಿವಿಲ್ಲವಾ ನಿನಗೆ? ಇಂದು ನೀನು ನನ್ನನ್ನ ಸಾಯಲು ಬಿಟ್ಟರೆ ನಾಳೆಗೆ ನೀನೇನು ಮಾಡುತ್ತೀಯ? ನನ್ನ ಹೆಸರೇ ಇಲ್ಲವಾದರೆ ಬೇರೆ ಯಾವ ಉದ್ಯೋಗವನ್ನು ಆರಿಸುತ್ತೀಯಾ? ದಶಕಗಳಿಂದ ಈ ಹಳ್ಳಿಗಳಲ್ಲಿ ಅಲೆಯುತ್ತ ನನ್ನ ತೆಕ್ಕೆಗೆ ಬೀಳದಂತೆ ಜನರನ್ನ ಎಚ್ಚರಿಸುತ್ತಿದ್ದೀಯ. ಅವರು ತಾವು ಬೆಳೆದದ್ದನ್ನ, ತಮ್ಮ ದೀನಾರುಗಳನ್ನ ಕೊಟ್ಟು ನಿನ್ನ ಉಪದೇಶವನ್ನು ಕೊಂಡಿದ್ದಾರೆ. ಅವರ ದುಷ್ಟ ಶತ್ರು ಇನ್ನಿಲ್ಲ ಅನ್ನುವುದು ಅವರಿಗೆ ಗೊತ್ತಾದರೆ ನಾಳೆ ನಿನ್ನಿಂದ ಅವರೇನನ್ನ ಕೊಳ್ಳುತ್ತಾರೆ? ನನ್ನೊಂದಿಗೇ ನಿನ್ನ ವೃತ್ತಿಯೂ ಸಾಯುತ್ತದೆ. ಯಾಕಂದರೆ ಜನ ಪಾಪಗಳಿಂದ ಮುಕ್ತರಾಗುತ್ತಾರೆ. ಒಬ್ಬ ಧರ್ಮಗುರುವಾಗಿರುವ ನಿನಗೆ, ಸೈತಾನನ ಶತ್ರುವಾದ ಚರ್ಚ್ ಅನ್ನ ಸೃಷ್ಟಿಸಿರುವುದು ಅವನ ಅಸ್ತಿತ್ವವೇ ಎಂಬುದು ಗೊತ್ತಿಲ್ಲವಾ? ಮತ್ತು ಅವೆರಡರ ನಡುವಿನ ಪ್ರಾಚೀನ ಸಂಘರ್ಷವೇ ಕಿಸೆಯ ಹಣ, ಧರ್ಮ ಪ್ರಚಾರಕರ ಮತ್ತು ಬೋಧಕರ ತಿಜೋರಿಯಲ್ಲಿ ಶಾಶ್ವತವಾಗಿ ಜಮೆ ವುದಕ್ಕೆ ಕಾರಣ ಎನ್ನುವುದು ನಿನಗೆ ಅರಿವಿಲ್ಲವಾ ಸಾವಿನಿಂದ ನೀನು ನಿನ್ನ ಸ್ಥಾನಮಾನವನ್ನು, ನಿನ್ನ ಚ ನಿನ್ನ ಮನೆ ಮತ್ತು ನಿನ್ನ ಬದುಕನ್ನ ಖಂಡಿತವಾಗಿ ಕಳೆಕೊಳ್ಳಬೇಕಾಗುವುದರಿಂದ ನೀನು ನನ್ನನ್ನ ಇಲ್ಲಿ ಸಾ ಹೇಗಾದರೂ ಅನುಮತಿಸುತ್ತೀಯ?" ಎಂದು ಕ್ಷ ಮೌನಿಯಾದ.

ಈಗ ಅವನ ದೈನ್ಯತೆ ಮರೆಯಾಗಿ, ಅದರ ಜಾ ಆತ್ಮವಿಶ್ವಾಸ ತುಂಬಿದ ಸ್ವಾತಂತ್ರ್ಯ ನೆಲೆಯಾಯಿತು. ತನ್ನ ಮಾತನ್ನ ಮುಂದುವರೆಸಿದ: "ಫಾದರ್ ಹೆಮ್ಮೆಯಿದೆ. ಆದರೆ ಅಷ್ಟೇ ದಡ್ಡತನವಿದೆ. ನಾನು ನಂಬಿಕೆಯ ಇತಿಹಾಸವನ್ನು ತಿಳಿಸುತ್ತೇನೆ ಕೇಳು ನಮ್ಮಿಬ್ಬರ ಇರುವನ್ನು ಮತ್ತು ನಿನ್ನ ಮನಃಸಾಕ್ಷಿಯ ನನ್ನ ಅಸ್ತಿತ್ವವನ್ನು ಒಂದಾಗಿಸುವ ಸತ್ಯವನ್ನು ಕಂಡುಕೊಳ್ಳುತ್ತೀಯಾ.

"ಅದು ಕಾಲವೆನ್ನುವುದು ಶುರುವಾದ ಘಳಿಗೆ ಮನುಷ್ಯ ಸೂರ್ಯನ ಎದುರು ನಿಂತು ಕ ಚಾಚಿ ಮೊಟ್ಟ ಮೊದಲಿಗೆ 'ಆಕಾಶದ ಹಿಂದೆ ಶ್ರೇ ಪ್ರೀತಿಸುವ ಮತ್ತು ಉದಾರಿಯಾದ ದೇವರಿದ್ದಾನೆ' ಕೂಗಿ ಹೇಳಿದ. ಮತ್ತೆ ಬೆಳಕಿಗೆ ಬೆನ್ನಿರಿಸಿ, ನೆಲದ ವ ತನ್ನ ನೆರಳನ್ನು ಕಂಡು 'ಪಾತಾಳದಲ್ಲಿ ಕೆಟ್ಟದ್ದನ್ನು ಪ್ರೀ ಕರಾಳ ಪಿಶಾಚಿಯೊಂದಿದೆ' ಎಂದು ವಂದಿಸಿ, ನಿರ್ಬಂಧಿಸುವ ಎರಡು ಶಕ್ತಿಗಳ ನಡುವೆ ನಾ ಒಂದರಲ್ಲಿ ಆಶ್ರಯ ಪಡೆಯಬೇಕು ಮತ್ತು ಮತ್ತೊ ವಿರುದ್ಧ ಸೆಣಸಬೇಕು' ಎಂದುಕೊಂಡು ತನ್ನ ಗು ಕಡೆಗೆ ನಡೆದ.

"ಹಾಗೆ ಮನುಷ್ಯ ಎರಡು ಶಕ್ತಿಗಳ ನ ಬದುಕಿರುವಂತೆ ಯುಗಗಳ ಮೆರವಣಿಗೆ ಮುಂ ಯಿತು. ತನ್ನ ಉನ್ನತಿಗೆ ನೆರವಾದ ಶಕ್ತಿಯನ್ನು ಪೂ ಅವನು ತನ್ನನ್ನು ಹೆದರಿಸಿದ ಶಕ್ತಿಯನ್ನು ಶಪಿಸಿದ. ಅವನು ಹರಕೆ ಮತ್ತು ಶಾಪಗಳ ಅರ್ಥವನ್ನು ಎ ಅರಿಯಲೇ ಇಲ್ಲ, ಅಂತೆಯೇ ವಸಂತ ಮತ್ತು ಶಿ ನಡುವಿನ ಮರದಂತೆ ಎರಡು ಶಕ್ತಿಗಳ ನಡುವೆ ಉಳಿದ

"ಮನುಷ್ಯನ ತಿಳುವಳಿಕೆಯಿಂದ ಉದ ನಾಗರೀಕತೆಯೊಂದಿಗೆ ಕುಟುಂಬದ ಪರಿಕಲ್ಪ ಉದಯಿಸಿತು. ನಂತರ ಬುಡಕಟ್ಟುಗಳು ಅಸ್ತಿತ್ವಕ್ಕೆ ಅವರವರ ಸಾಮರ್ಥ್ಯ ಮತ್ತು ಆಸಕ್ತಿಗಳಿಗನುಗು ಶ್ರಮದ ವಿಂಗಡನೆಯಾಯಿತು. ಒಂದು ವರ್ಗ ಕೃ ತೊಡಗಿದರೆ, ಮಿಕ್ಕವರು ಮನೆ ಕಟ್ಟುವ, ಬಟ್ಟೆ ನೇ ಅಥವಾ ಬೇಟೆಯಾಡುವ ವೃತ್ತಿಯನ್ನ ಹಿಡ ಕಾಲಕ್ರಮದಲ್ಲಿ ದೈವತ್ವ, ಭೂಮಿಯ ಕಾಣಿಸಿಕೊಂಡು ಯಾವುದೇ ಅಗತ್ಯವಾದ ಪ್ರೇರಣೆಯ ಅಥವಾ ಅವಶ್ಯಕತೆಯನ್ನಾಗಲಿ ಹೊಂದಿಲ್ಲದ ವೃತ್ತಿಯ ಮನುಷ್ಯ ಕಂಡುಕೊಳ್ಳಲಿಕ್ಕೆ ನೆರವಾಯಿತು."

ಸೈತಾನ ಒಂದು ಕ್ಷಣ ಮಾತ ವುದನ್ನು ನಿಲ್ಲಿಸಿ, ಗಹಗಹಿಸಿ ನಕ್ಕ. ಆ ನಗುವಿನಿಂದ ಇಡೀ ಕಣಿವೆಯೇ ಸಿತು. ಆದರೆ ಅದೇ ನಗು ಅವನ ಗಾಯ ನೆನಪಿಸಿತು. ಅವನು ನೋವಿನಿಂದ ನ ತನ್ನ ಕೈಯನ್ನ ಪಕ್ಕೆಯ ಮೇಲಿಟ್ಟುಕೊ ತನ್ನ ಮಾತುಗಳನ್ನ ವಿಲಕ್ಷಣ ದೃಢತೆಯೊಂದಿಗೆ ಮುಂದುವರೆಸಿದ. " ಭೂಮಿಯ ಮೇಲೆ ಕಾಣಿಸಿಕೊ ವಿಚಿತ್ರವಾದ ರೀತಿಯಲ್ಲಿ ಬೆಳೆ ಮೊದಲ ಬುಡಕಟ್ಟನಲ್ಲೊಬ್ಬ ಲಾವಿಸ್ ಸೋಮಾರಿಯಿದ್ದ. ಅವನ ಹೆಸರಿನ ನನಗೆ ಗೊತ್ತಿಲ್ಲ. ಆತ ಮಹಾಬುದ್ ಆದರೆ ದೇಹವನ್ನ ದಣಿಸುವ ಪೈಕಿಯ ಆ ಕಾಲದಲ್ಲಿ ಶ್ರಮ ಪಡದಿದ್ದರೆ ಊಟಕ್ಕೆ ಆದ್ದರಿಂದ ಲಾವಿಸ್ ಎಷ್ಟೋ ರಾತ್ರಿಗಳನ್ನು ಹೊಟ್ಟೆಯಲ್ಲೇ ಕಳೆಯಬೇಕಾಗುತ್ತಿತ್ತು.

"ಅದೊಂದು ಬೇಸಗೆಯ ರಾತ್ರಿ ಆ ಬುಡ ಜನರೆಲ್ಲ ತಮ್ಮ ಮುಖ್ಯಸ್ಥನ ಗುಡಿಸಲ ಬಳಿ ಸೇರಿ ಆ ದಿನದ ದುಡಿಮೆಯ ಬಗ್ಗೆ ಹರಟುತ್ತಿರು ಅವರಲ್ಲೊಬ್ಬ ಥಟ್ಟನೆ ಮೇಲೆದ್ದು ಚಂದಿರನ ಕಡೆ ಬ ಮಾಡಿ 'ನೋಡಿ ರಾತ್ರಿಯ ದೇವನನ್ನ, ಅವನ ಕಪ್ಪಾಗಿದೆ. ಅವನ ಸೊಬಗು ಮಾಯವಾಗಿ, ಆ ನೆತ್ತಿನಲ್ಲಿ ತೂಗಾಡುತ್ತಿರುವ ಕರಿಕಲ್ಲಿನಂತಾಗಿದ್ದಾನೆ' ಕೂಗಾಡಿಕೊಂಡ. ಜನರೆಲ್ಲ ಚಂದಿರನನ್ನ ದಿಟ್ಟಿಸಿ ಭಯ ಅರಚಿದರು. ಕತ್ತಲಿನ ಕೈಗಳು ಅವರ ಹೃದ ಹಿಂಡಿದವೇನೋ ಎನ್ನುವಂತೆ ಭಯದಿಂದ ನಡುಗಿ ರಾತ್ರಿಯ ದೇವರು ನಿಧಾನವಾಗಿ ಕಪ್ಪನೆಯ ಗೋ ಬದಲಾಗಿ, ಕಣಿವೆ ಮತ್ತು ಬೆಟ್ಟಗಳನ್ನ ಕರೀ ಪ ಹಿಂದೆ ಮರೆಯಾಗುವಂತೆ ಮಾಡಿದ್ದನ್ನ ದಿಗ್ಭ್ರಮೆಗೊಂಡರು.

ಅದೊಂದು ಬೇಸಗೆಯ ರಾತ್ರಿ ಆ ಬುಡಕಟ್ಟಿನ ಜನರೆಲ್ಲ ತಮ್ಮ ಮುಖ್ಯಸ್ಥನ ಗುಡಿಸಲ ಬಳಿ ಸೇರಿ ತಮ್ಮ ಆ ದಿನದ ದುಡಿಮೆಯ ಬಗ್ಗೆ ಹರಟುತ್ತಿರುವಾಗ ಅವರಲ್ಲೊಬ್ಬ, ಥಟ್ಟನೆ ಮೇಲೆದ್ದು ಚಂದಿರನ ಕಡೆ ಬೊಟ್ಟು ಮಾಡಿ 'ನೋಡಿ ರಾತ್ರಿಯ ದೇವನನ್ನ, ಅವನ ಮುಖ ಕಪ್ಪಾಗಿದೆ. ಅವನ ಸೊಬಗು ಮಾಯವಾಗಿ, ಆಕಾಶದ ನೆತ್ತಿನಲ್ಲಿ ತೂಗಾಡುತ್ತಿರುವ ಕರಿಕಲ್ಲಿನಂತಾಗಿದ್ದಾನೆ' ಎಂದು ಕೂಗಾಡಿಕೊಂಡ. ಜನರೆಲ್ಲ ಚಂದಿರನನ್ನ ದಿಟ್ಟಿಸಿ ಭಯದಿಂದ ಅರಚಿದರು. ಕತ್ತಲಿನ ಕೈಗಳು ಅವರ ಹೃದಯವನ್ನ ಹಿಂಡಿದವೇನೋ ಎನ್ನುವಂತೆ ಭಯದಿಂದ ನಡುಗಿದರು.

ನೀವು ನಟರಾಗಬೇಕೆಂದರೆ ಸ್ವಾರ್ಥಿಗಳಾಗಲೇಬೇಕು-ಚಾರ್ಲ್ಸ್ ಡ್ಯಾನ್ಸ್

"ಆಗ ಇವರೆಲ್ಲಾ ಮುಂಚೆ ಗ್ರಹಣವನ್ನು ಕಂಡು, ...ದಕ್ಕೆ ಕಾರಣವನ್ನೂ ಅರಿತಿದ್ದ ಲಾವಿಸ್ ಈ ಅವಕಾಶದ ...ರ್ಣ ಪ್ರಯೋಜನ ಪಡೆಯಲು ಮುಂದಾದ. ಗುಂಪಿನ ...ಧ್ಯದಲ್ಲಿ ನಿಂತು ತನ್ನೆರಡೂ ಕೈಗಳನ್ನ ಮೇಲೆತ್ತಿ ಗಟ್ಟಿ ...ನಿಯಲ್ಲಿ ಅವರುನ್ನುದ್ದೇಶಿಸಿ 'ಎಲ್ಲರೂ ಮಂಡಿಯೂರಿ ...ರ್ಥಿಸಿ. ಕ್ಷುದ್ರದೇವರು ರಾತ್ರಿಯ ದೇವರಾದ ಚಂದ್ರನ ...ೕಲೆ ಆಕ್ರಮಣ ಮಾಡಿದ್ದಾನೆ. ಕ್ಷುದ್ರದೇವರು ...ಜಯಿಯಾದರೆ ನಾವೆಲ್ಲ ನಾಶವಾಗುತ್ತೇವೆ. ರಾತ್ರಿದೇವರು ...ಜಯಿಯಾದರೆ ಮಾತ್ರ ನಾವೆಲ್ಲ ಬದುಕುತ್ತೇವೆ ... ...ರ್ಥಿಸಿ... ಪೂಜಿಸಿ. ನಿಮ್ಮ ಮುಖಗಳನ್ನ ನೆಲಕ್ಕೊತ್ತಿ ...ಣ್ಣುಗಳನ್ನು ಮುಚ್ಚಿ ಆಗಸದ ಕಡೆ ನೋಡಬೇಡಿ. ಯುದ್ಧ ...ರತರಾದ ಆ ದೇವತೆಗಳನ್ನ ನೋಡಿದವನು ಕುರುಡನಾಗಿ ...ತಿಭ್ರಮಣೆಗೊಳಗಾಗುತ್ತಾನೆ. ನಿಮ್ಮ ತಲೆಗಳನ್ನ ಬಾಗಿಸಿ, ...ತ್ರಿಯ ದೇವರನ್ನ ಅವನ ಮತ್ತು ಮನುಕುಲದ ಶತ್ರುವಿನ ...ರುದ್ಧ ಹೃತ್ಪೂರ್ವಕವಾಗಿ ಬೆಂಬಲಿಸಿ' ಎಂದು ಹೇಳಿದ. ...ವರೆಂದೂ ಕೇಳಿರದ ನಿಗೂಢವಾದ ಪದಗಳನ್ನು ...ಣೆಯುತ್ತ ಅವರನ್ನ ತನ್ನ ಮಾತುಗಳ ಬಲೆಯಲ್ಲಿ ...ಂಧಿಸಿದ. ಚಂದಿರ ಗ್ರಹಣದಿಂದ ಮುಕ್ತನಾದ ಬಳಿಕ, ...ವಿಸ್ ಮೊದಲಿಗಿಂತ ಗಟ್ಟಿಯಾದ ದನಿಯಲ್ಲಿ ಅವರನ್ನ ...ರಿತು 'ಏಳಿ, ಎದ್ದೇಳಿ. ನೋಡಿ. ರಾತ್ರಿಯ ದೇವರು ...ನ್ನ ಶತ್ರುವನ್ನ ಮಣಿಸಿ ನಕ್ಷತ್ರಗಳ ನಡುವೆ ತನ್ನ ಪಯಣವನ್ನು ...ುಂದುವರೆಸಿದ್ದಾನೆ. ನೀವೆಲ್ಲ, ನಿಮ್ಮ ಪ್ರಾರ್ಥನೆಯ ...ೂಲಕ ರಾತ್ರಿಯ ದೇವರ ವಿಜಯಕ್ಕೆ ಕಾರಣರಾಗಿದ್ದೀರಿ ...ಂಬುದು ಜಗತ್ತಿಗೇ ತಿಳಿಯಲಿ. ನೋಡಿ, ರಾತ್ರಿಯ ...ೇವರು ಸಂತಸಗೊಂಡಿದ್ದಾನೆ ಮತ್ತು ಮೊದಲಿಗಿಂತ ...ಚ್ಚು ಪ್ರಕಾಶಿಸುತ್ತಿದ್ದಾನೆ' ಎಂದ.

"ಅವನ ಚಾಣಾಕ್ಷ ತಂತ್ರ ಕೆಲಸ ಮಾಡಿತ್ತು. ಜನರೆಲ್ಲ ...ೇಲೆದ್ದು ಹೊಳೆವ ಚಂದಿರನನ್ನು ದಿಟ್ಟಿಸಿದರು. ಅವರ ...ಯ ಬತ್ತಿ ಗೊಂದಲ ಮರೆಯಾಯಿತು. ಅವರೆಲ್ಲ ...ನಂದ ತುಂದಿಲರಾಗಿ ತಮಟೆಗಳನ್ನ ಬಾರಿಸುತ್ತ ಹಾಡುತ್ತ ...ರ್ತಿಸಲು ಪ್ರಾರಂಭಿಸಿದರು. ಅವರ ಗದ್ದಲ ಮತ್ತು ...ಗು ಇಡೀ ಕಣಿವೆಯ ತುಂಬ ಮಾರ್ದನಿಸಿತು.

"ಆ ರಾತ್ರಿ ಆ ಬುಡಕಟ್ಟಿನ ಮುಖ್ಯಸ್ಥ ಲಾವಿಸ್‌ನ ...ಸಿ ಅವನಲ್ಲಿ ನಿವೇದಿಸಿಕೊಂಡ 'ಮನುಷ್ಯ ಎಂದೂ ...ಾಡದ್ದನ್ನ ನೀನು ಮಾಡಿದ್ದೀಯ... ನಾವುಗಳು ಯಾರೂ ...ರ್ಥ ಮಾಡಿಕೊಳ್ಳದ ನಿಗೂಢ ಜ್ಞಾನವನ್ನ ನೀನು ...ದರ್ಶಿಸಿದ್ದೀಯ. ನನ್ನ ಜನರ ಅಭಿಪ್ರಾಯದಂತೆ ನಮ್ಮ ...ಡಕಟ್ಟಿನಲ್ಲಿ ನನ್ನ ನಂತರದ ಪರಮೋಚ್ಚ ಸ್ಥಾನ ನಿನ್ನದು. ...ು ಬಲಿಷ್ಠನಾದರೆ ನೀನು ಜ್ಞಾನಿ ಮತ್ತು ಮಹಾನ್ ...ದ್ಧಿವಂತ. ನೀನು ಇಂದಿನಿಂದ ದೇವರ ಮತ್ತು ನನ್ನ ...ರ ನಡುವಿನ ಕೊಂಡಿ ಯಾಗಿರಬೇಕೆಂಬುದು ನನ್ನ ...ುಕೆ. ನನ್ನ ಜನರ ಆಶೋತ್ತರಗಳನ್ನ ನೀನೇ ...ರೈಸಬೇಕು. ದೈವಾನುಗ್ರಹ ಮತ್ತು ಪ್ರೀತಿ ಅವರಿಗೆ ...ವ ಮಾರ್ಗಗಳನ್ನ ಬೋಧಿಸಬೇಕು.'

"ಅದಕ್ಕೆ ಲಾವಿಸ್, 'ದೈವಾನುಗ್ರಹವಾದ ನನ್ನ ...ುಗಳಲ್ಲಿ ದೇವರು ತಿಳಿಸುವ ಪ್ರತಿಯೊಂದನ್ನೂ ನೀವು ...ಚ್ಚರವಾಗಿರುವಾಗ ನಿಮಗೆ ತಿಳಿಸುತ್ತೇನೆ. ಹಾಗೂ ನಾನು ...ವರ ಮತ್ತು ನಿಮ್ಮ ನಡುವೆ ನೇರವಾಗಿ ...ವಹರಿಸುತ್ತೇನೆಂಬ ವಿಶ್ವಾಸವನ್ನು ನೀವು ...ಂದಬಹುದು' ಎಂದು ಭರವಸೆಯನ್ನಿತ್ತ. ಲಾವಿಸ್‌ನ ...ತುಗಳಲ್ಲಿ ವಿಶ್ವಾಸವಿರಿಸಿದ ಮುಖ್ಯಸ್ಥ ಅವನಿಗೆ ಎರಡು ...ುರೆಗಳನ್ನ, ಏಳು ಕರುಗಳನ್ನ, ಎಪ್ಪತ್ತು ಕುರಿಗಳನ್ನ ...ತ್ತು ಎಪ್ಪತ್ತು ಕುರಿಮರಿಗಳನ್ನು ನೀಡಿ, 'ನಮ್ಮ ಜನ ...ಗೊಂದು ಗಟ್ಟಿಮುಟ್ಟಾದ ಮನೆಯನ್ನ ಕಟ್ಟಿಕೊಡುತ್ತಾರೆ. ...ರೊಟ್ಟಿಗೆ ಪ್ರತಿವರ್ಷದ ಸುಗ್ಗಿಯ ನಂತರ ಅವರು ...ದದ್ದರಲ್ಲಿ ಒಂದು ಭಾಗವನ್ನು ನಿನಗೆ ನೀಡುತ್ತಾರೆ. ...ಗಿ ನೀನು ಗೌರವಯುತವಾಗಿ ಬದುಕಬಹುದು' ...ದು ಅಭಯವನ್ನಿತ್ತ.

"ಲಾವಿಸ್ ಎದ್ದು ಹೊರಡುತ್ತಿರುವಾಗ ಅವನನ್ನ ...ದ ಮುಖ್ಯಸ್ಥ 'ನೀನು ಮನುಷ್ಯನ ದೇವರೆಂದೆಯಲ್ಲ ...ು ಯಾರು? ಏನದು? ಪ್ರಕಾಶಮಾನವಾದ ರಾತ್ರಿಯ ...ರೊಂದಿಗೆ ಸೆಣಸಬಲ್ಲ ಈ ಧೈರ್ಯವಂತ ದೇವನಾರು? ...ಂದೂ ಅವನನ್ನ ನೋಡಿಲ್ಲವಲ್ಲ?' ಎಂದು ಕೇಳಿದ. ...ಕ್ಕೆ ಲಾವಿಸ್ ಹಣೆಯನ್ನುಜ್ಜಿಕೊಳ್ಳುತ್ತಾ 'ಗೌರವಾನ್ವಿತ ...ಜಮಾನರೇ ಕೇಳಿ: ಬಹಳ ಹಿಂದೆ ಅಂದರೆ ಈ ...ಯ ಮೇಲೆ ಮಾನವನ ಉದಯವಾಗುವುದಕ್ಕೆ ...ಚೆ ನಕ್ಷತ್ರಗಳಾಚೆಗಿನ ಪ್ರಪಂಚದಲ್ಲಿ ಎಲ್ಲ ದೇವರುಗಳೂ ...ಿ. ಮತ್ತು ಸಾಮರಸ್ಯಗಳಿಂದ ಒಟ್ಟಿಗೇ ಇದ್ದರು. ...ರ ದೇವ ಅವರೆಲ್ಲರ ತಂದೆಯಾಗಿದ್ದ, ಬೇರೆ ...ರುಗಳಿಗೆ ತಿಳಿಯದ್ದು ಅವನಿಗೆ ತಿಳಿದಿತ್ತು, ಮತ್ತು ...ರು ಮಾಡಲಾಗದ್ದನ್ನ ಅವನು ಮಾಡುತ್ತಿದ್ದ. ...ಕ್ಷತ್ರಾಚೆಯ ದೈವಿಕ ನಿಗೂಢತೆಯನ್ನ ಅವನು ...ಟ್ಟುಕೊಂಡಿದ್ದ. ಆದರೆ ಹನ್ನೆರಡನೆಯ ಯುಗದ ...ಿ ವರ್ಷದ ಅದೊಂದು ದಿನ ದೇವರನ್ನ ಇಷ್ಟಪಡದ ...ತಾರ್ ತನ್ನ ತಂದೆಯ ವಿರುದ್ಧ ನಿಂತು 'ವಿಶ್ವದ ...ಧತೆಗಳನ್ನ ಮತ್ತು ನಿಯಮಗಳನ್ನ ನಮ್ಮಿಂದ ...ಟ್ಟು ಎಲ್ಲ ಜೀವ ಜಂತುಗಳ ಮೇಲೆ ಸರ್ವ ...ರ್ಣ ಅಧಿಕಾರವನ್ನ ನೀನೊಬ್ಬನೇ ಯಾಕೆ ಹೊಂದಿದ್ದೀಯ? ನಿರಂತರವಾದ ಬದುಕನ್ನ, ಪರಮಸತ್ಯವನ್ನ ನಿನ್ನೊಂದಿಗೆ ಹಂಚಿಕೊಂಡಿರುವ, ನಿನ್ನನ್ನ ನಂಬಿರುವ ನಾವು ನಿನ್ನ ಮಕ್ಕಳಲ್ಲವೇನು ?' ಎಂದು ಪ್ರಶ್ನಿಸಿದ.

"ಬಹತಾರ್‌ನ ಮಾತುಗಳಿಂದ ಕೋಪಾವಿಷ್ಟನಾದ ದೇವರ ದೇವ 'ಎಲ್ಲದರ ಆದಿ ಮತ್ತು ಅಂತ್ಯ ನಾನಾಗಿರುವಾಗ, ಮೂಲಶಕ್ತಿಯನ್ನ, ಪರಮ ಅಧಿಕಾರವನ್ನ ಮತ್ತು ಅತ್ಯವಶ್ಯಕ ಗುಟ್ಟುಗಳನ್ನು ನಾನೇ ಕಾಯ್ದುಕೊಳ್ಳಬೇಕು' ಎಂದ.

"ಅದಕ್ಕೆ ಉತ್ತರವಾಗಿ ಬಹತಾರ್, 'ನೀನು ನಿನ್ನ ಶಕ್ತಿ ಮತ್ತು ಸಾಮರ್ಥ್ಯಗಳನ್ನು ನನ್ನೊಂದಿಗೆ ಹಂಚಿಕೊಳ್ಳದಿದ್ದರೆ ನಾನು, ನನ್ನ ಮಕ್ಕಳು ಮತ್ತು ನನ್ನ ಮೊಮ್ಮಕ್ಕಳು ನಿನ್ನ ವಿರುದ್ಧ ಹೋರಾಡುತ್ತೇವೆ' ಎಂದದ್ದಕ್ಕೆ ದೇವರು ಕುಪಿತನಾಗಿ ಸ್ವರ್ಗದಲ್ಲಿನ ತನ್ನ ಸಿಂಹಾಸನದ ಮೇಲೆ ನಿಂತು, ತನ್ನ ಖಡ್ಗವನ್ನಿರಿದು, ಸೂರ್ಯನನ್ನೇ ಗುರಾಣಿಯಾಗಿಸಿಕೊಂಡು, ಸ್ವರ್ಗದ ದಿಕ್ತಟಗಳೂ ಅಬ್ಬರಿಸುವಂತೆ, 'ದುಷ್ಟ ದಂಗೆಕೋರನಾದ ನೀನು ಕತ್ತಲೆ ಮತ್ತು ನೋವು ತುಂಬಿರುವ ಪಾತಾಳಕ್ಕೆ ಬೀಳು. ಸೂರ್ಯ ಬೂದಿಯಾಗಿ, ನಕ್ಷತ್ರಗಳು ಸಿಡಿದು ಚೂರುಚೂರಾಗುವವರೆಗೆ ನೀನು ಅಲ್ಲಿಯೇ ಇರಬೇಕು' ಎಂದು ಆಜ್ಞೆಯಿತ್ತ. ಆ ಘಳಿಗೆಯಲ್ಲೇ ಎಲ್ಲ ದುಷ್ಟಶಕ್ತಿಗಳೂ ನೆಲೆಗೊಂಡ ಕತ್ತಲೆಯ ಕೂಪವಾದ ನರಕವನ್ನ ಬಹತಾರ್ ಸೇರಿದ. ಕೂಡಲೇ ತನ್ನನ್ನ ಮತ್ತು ತನ್ನ ಸಹೋದರರನ್ನ ಪ್ರೀತಿಸುವ ಪ್ರತಿಯೊಂದು ಆತ್ಮವನ್ನೂ ತನ್ನ ತೆಕ್ಕೆಗೆ ತೆಗೆದುಕೊಂಡು ದೇವರ ವಿರುದ್ಧ ಹೋರಾಡುವುದಾಗಿ ಶಪಥ ಮಾಡಿದ."

ಲಾವಿಸ್‌ನ ಮಾತುಗಳಿಂದ ಮುಖ್ಯಸ್ಥನ ಮುಖ ಬಿಳಿಚಿಕೊಂಡಿತು. ಆದರೂ ಹರಸಾಹಸ ಮಾಡಿ "ಹಾಗಾದರೆ 'ಬಹತಾರ್' ಎನ್ನುವುದೇ ದುಷ್ಟದೇವತೆಯ ಹೆಸರಾ?" ಎಂದು ಕೇಳಿದ. ಅದಕ್ಕೆ ಲಾವಿಸ್‌ನ ಉತ್ತರ ಸಿದ್ಧವಾಗಿತ್ತು.

"ಅದು ಅವನು ಸ್ವರ್ಗದಲ್ಲಿದ್ದಾಗಿನ ಹೆಸರು. ಆದರೆ ನಂತರ ಅವನು ನರಕವನ್ನು ಪ್ರವೇಶಿಸಿದ ಮೇಲೆ ಬಾಲ್ ಜ ಬೌಲ್, ಸ್ಯಾಟನೇಲ್, ಬೇಲಿಯಲ್, ಜಮೀಲ್, ಆಹ್ರಿಮಾನ್, ಮಾರ, ಆ್ಯಬ್ಡಾನ್, ಪಿಶಾಚಿ ಮತ್ತು ಈಗ ಅತಿ ಹೆಚ್ಚು ಜನಪ್ರಿಯವಾದ ಸೈತಾನ ಎಂಬ ಹೆಸರುಗಳಿಂದ ಅನುಕ್ರಮವಾಗಿ ತನ್ನನ್ನು ಹೆಸರಿಸಿಕೊಂಡ."

ಕಥೆ

ಕನ್ನಡಕ್ಕೆ : ಬಸವೇಶ್. ಬಿ

(ಮೂಲ: ಖಲೀಲ್ ಗಿಬ್ರಾನ್
ಅವರ ಕಥೆ 'ಸೈತಾನ್')

'ಸೈತಾನ' ಎಂಬ ಪದ ಮುಖ್ಯಸ್ಥನ ಮನದಲ್ಲಿ ಮತ್ತೆ ಮತ್ತೆ ರಿಂಗಣಿಸಿತು. ಅವನು ಆ ಪದವನ್ನು ಪದೇ ಪದೇ ಉಚ್ಚರಿಸಿದಾಗಿನ ಧ್ವನಿ ಗಾಳಿಗೆ ಸಿಕ್ಕ ಒಣರೆಂಬೆಗಳ ಸದ್ದಿನಂತಿತ್ತು. ಅಂತೆಯೇ ಮತ್ತೊಂದು ಪ್ರಶ್ನೆ ಅವನ ತುಟಿಗಳಿಂದ ಟಿಸಿಲೊಡೆಯಿತು. "ದೇವರುಗಳನ್ನು ದ್ವೇಷಿಸುವಷ್ಟೇ ಸೈತಾನ ಮನುಷ್ಯನನ್ನೇಕೆ ದ್ವೇಷಿಸುತ್ತಾನೆ?"

ಆ ಪ್ರಶ್ನೆಗೆ ತಡ ಮಾಡದೆ ಲಾವಿಸ್ ಮನುಷ್ಯ ಸೈತಾನನ ಸಹೋದರ ಮತ್ತು ಸಹೋದರಿಯರ ಪೀಳಿಗೆಯವನಾಗಿರುವುದೇ ಅದಕ್ಕೆ ಕಾರಣ ಎಂದುತ್ತರಿಸಿದ. ಇದನ್ನು ಕೇಳಿದ ಮುಖ್ಯಸ್ಥ ಉದ್ಗರಿಸಿದ, "ಹಾಗಾದರೆ ಸೈತಾನ ಮಾನವನ ಸಂಬಂಧಿ?" ಅದಕ್ಕೆ ಲಾವಿಸ್ ಗೊಂದಲ ಮತ್ತು ಬೇಸರದಿಂದ ಮಾರ್ನುಡಿದ "ಹೌದು ಯಜಮಾನ. ಆದರೆ ಅವನು ಮಾನವರ ಬಹುದೊಡ್ಡ ಶತ್ರು. ಅವನು ಅವರ ದಿನಗಳಿಗೆ ಕಷ್ಟಗಳನ್ನೂ ರಾತ್ರಿಗಳಿಗೆ ದುಃಸ್ವಪ್ನಗಳನ್ನು ತುಂಬುತ್ತಾನೆ. ಅವನು ತನ್ನ ಶಕ್ತಿಯಿಂದ ಅವರ ಗುಡಿಸಲುಗಳಿಗೆ ಬಿರುಗಾಳಿಯನ್ನ ನುಗ್ಗಿಸಬಲ್ಲ, ಅವರ ಹೊಲಗಳು ಅನಾವೃಷ್ಟಿಗೆ ಸಿಲುಕುವಂತೆ ಮಾಡಬಲ್ಲ, ಅವರು ಮತ್ತು ಅವರ ಪ್ರಾಣಿಗಳು ರೋಗಕ್ಕೆ ತುತ್ತಾಗುವಂತೆ ಮಾಡಬಲ್ಲ, ಅವನೊಬ್ಬ ದುಷ್ಟ ಮತ್ತು ಶಕ್ತಿವಂತ ದೇವರು. ಅವನೊಬ್ಬ ನೀಚ. ನಮಗೆ ದುಃಖವಾದರೆ ಅವನಿಗೆ ಸಂತೋಷ. ನಮಗೆ ಸಂತೋಷವಾದರೆ ಅವನಿಗೆ ದುಃಖ. ಅವನ ಕೆಡುಕನ್ನು ತಡೆಯಲಿಕ್ಕಾಗಿ ನಮ್ಮ ಜ್ಞಾನದ ಮೂಲಕ ನಾವು ಅವನನ್ನು ಒರೆಗೆ ಹಚ್ಚಬೇಕು. ಅವನ ಕುತಂತ್ರಗಳಿಂದ ದೂರವಿರಬೇಕೆಂದರೆ ನಾವು ಅವನ ಗುಣವನ್ನು ಅಭ್ಯಸಿಸಬೇಕು."

ಮುಖ್ಯಸ್ಥ ತನ್ನ ದಂಡದ ಮೇಲಕ್ಕೆ ತನ್ನ ತಲೆಯನ್ನೊರಗಿಸಿ "ನಮ್ಮ ಮನೆಗಳು ಬಿರುಗಾಳಿಗೆ ಸಿಗುವಂತೆ ಮಾಡುವ, ನಮ್ಮನ್ನು ಮತ್ತು ನಮ್ಮ ದನಗಳನ್ನು ಸಾಂಕ್ರಾಮಿಕಗಳಿಗೆ ಒಳಗಾಗಿಸುವ ಆ ವಿಚಿತ್ರ ಶಕ್ತಿಯ ಅಂತರಾಳದ ಗುಟ್ಟನ್ನ ನಾನೀಗ ತಿಳಿದುಕೊಂಡೆ. ನಾನೀಗ ಗ್ರಹಿಸಿದ್ದನ್ನು ನನ್ನ ಜನರೂ ತಿಳಿದುಕೊಳ್ಳಬೇಕು. ತಮ್ಮ ಶತ್ರುವಿನ ನಿಗೂಢತೆಯನ್ನು ಅವರಿಗೆ ತಿಳಿಸಿ, ಅವರು ಕೆಟ್ಟ ಮಾರ್ಗವನ್ನು ಹಿಡಿಯದಂತೆ ಮಾಡುವುದಕ್ಕಾಗಿ ಲಾವಿಸ್ ಅವರ ಅನುಗ್ರಹಕ್ಕೆ, ಗೌರವಕ್ಕೆ ಪಾತ್ರನಾಗಬೇಕು" ಎಂದು ಪಿಸುಗುಟ್ಟಿದ. ನಂತರ ಲಾವಿಸ್ ತನ್ನ ಜಾಣತನದ

ಸೈತಾನ



ಬಗ್ಗೆ ಆನಂದಿಸುತ್ತಾ, ತನ್ನ ಕಲ್ಪನೆ ಮತ್ತು ಅದು ನೀಡಿದ ಸಂತೋಷದ ಮತ್ತಿನಲ್ಲಿ ಮುಖ್ಯಸ್ಥನನ್ನು ಬೀಳ್ಕೊಟ್ಟು ತನ್ನ ಗುಡಿಸಲನ್ನು ಸೇರಿದ. ಮೊಟ್ಟ ಮೊದಲ ಬಾರಿಗೆ ಲಾವಿಸ್‌ನನ್ನು ಹೊರತುಪಡಿಸಿ ಮುಖ್ಯಸ್ಥ ಮತ್ತು ಬುಡಕಟ್ಟಿನ ಜನರೆಲ್ಲ ತಮ್ಮ ನಿದ್ರೆಯಲ್ಲಿ ಭೀಕರ ಪಿಶಾಚಿಗಳಿಂದ, ಭಯಾನಕವಾದ ಪ್ರೇತಗಳಿಂದ ಮತ್ತು ದುಃಸ್ವಪ್ನಗಳಿಂದ ಸುತ್ತುವರೆಯಲ್ಪಟ್ಟು ಆ ರಾತ್ರಿಯನ್ನು ಕಳೆದರು."

ಸೈತಾನ ಒಂದು ಕ್ಷಣ ತನ್ನ ಮಾತನ್ನು ನಿಲ್ಲಿಸಿದ. ದಿಗ್ಭ್ರಾಂತನಾದ ಫಾದರ್ ಅವನನ್ನೇ ದಿಟ್ಟಿಸಿದ. ಫಾದರ್‌ನ ತುಟಿಗಳ ಮೇಲೆ ಸಾವಿನ ನಗೆಯೊಂದು ಮೂಡಿತು. ಆಗ ಸೈತಾನ ತನ್ನ ಮಾತನ್ನ ಮುಂದುವರೆಸಿದ: "ದೈವತ್ವವೆನ್ನುವುದು ಹಾಗೆ ಈ ಭೂಮಿಗೆ ಬಂತು ಮತ್ತು ಹಾಗೆಯೇ ನನ್ನ ಅಸ್ತಿತ್ವ ಅದರ ಹುಟ್ಟಿಗೆ ಕಾರಣವಾಯ್ತು. ನನ್ನ ಕಾರ್ಯವನ್ನು ಒಂದು ವೃತ್ತಿಯನ್ನಾಗಿಸಿಕೊಂಡವರಲ್ಲಿ ಲಾವಿಸ್ ಮೊದಲಿಗನಾಗಿದ್ದ. ಅವನ ಸಾವಿನ ನಂತರ ಅವನ ಮಕ್ಕಳು ಅದನ್ನೇ ಅನುಸರಿಸಿ ಶ್ರೀಮಂತರಾದರು. ಉದಾತ್ತ ಮನಸ್ಸಿನ ಅಗಾಧ ಕಲ್ಪನೆಯ ಜ್ಞಾನಿಗಳು, ಆ ವೃತ್ತಿಯನ್ನ ಪರಿಪೂರ್ಣವಾದ ದೈವಿಕ ವೃತ್ತಿಯನ್ನಾಗಿ ಅರಸುವವರೆಗೆ ಅವನ ಮಕ್ಕಳು ಅದನ್ನೇ ಅನುಸರಿಸಿ ಶ್ರೀಮಂತರಾದರು.

"ಬೆಬಿಲೋನ್‌ನಲ್ಲಿ ಜನ ನನ್ನ ವಿರುದ್ಧ ಪ್ರಾರ್ಥಿಸುತ್ತಿದ್ದ ಪಾದ್ರಿಗೆ ಏಳು ಬಾರಿ ಬಾಗಿ ನಮಿಸುತ್ತಿದ್ದರು. ನಿನೆವ್ಹಾದಲ್ಲಿ ನನ್ನ ಗುಟ್ಟುಗಳನ್ನು ಅರಿತಿದ್ದಾನೆನ್ನಲಾದವನನ್ನು ಜನ ದೇವರು ಮತ್ತು ಮನುಷ್ಯನ ನಡುವಿನ ಸುವರ್ಣ ಸೇತುವನ್ನಾಗಿ ಪರಿಗಣಿಸಿದ್ದರು. ಟಿಬೆಟ್‌ನಲ್ಲಿ ನನ್ನ ವಿರುದ್ಧ ಸೆಣಸುತ್ತಿದ್ದ ವ್ಯಕ್ತಿಯನ್ನು ಸೂರ್ಯಚಂದ್ರರ ಮಗನೆಂದು ಕರೆಯುತ್ತಿದ್ದರು. ಇಫೆಸಸ್, ಬೈಬ್ಲಸ್ ಮತ್ತು ಆಂಟಿಯೋಕ್‌ನಲ್ಲಿ ಜನ ನನ್ನ ವಿರೋಧಿಗಳಿಗೆ ತಮ್ಮ ಮಕ್ಕಳನ್ನೇ ಬಲಿ ಕೊಟ್ಟರು. ಜೆರೂಸಲೆಮ್ ಮತ್ತು ರೋಮ್‌ನಲ್ಲಿ ನನ್ನನ್ನು ದ್ವೇಷಿಸುತ್ತೇವೆಂದು ಮತ್ತು ನನ್ನ ವಿರುದ್ಧ ಹೋರಾಡುತ್ತೇವೆಂದು ಹೇಳಿಕೊಂಡವರಿಗಾಗಿ ಜನ ತಮ್ಮ ಪ್ರಾಣವನ್ನೇ ಕೊಟ್ಟರು.

"ಸೂರ್ಯನಡಿಯ ಪ್ರತೀ ಪಟ್ಟಣದಲ್ಲೂ ಧರ್ಮ, ಕಲೆ ಮತ್ತು ತತ್ವಶಾಸ್ತ್ರಗಳ ವಿದ್ಯಾಕೇಂದ್ರಗಳಲ್ಲೆಲ್ಲಾ ನನ್ನ ಹೆಸರೇ ಕೇಂದ್ರಬಿಂದುವಾಗುತ್ತಿತ್ತು, ನಾನಿಲ್ಲವಾಗಿದ್ದಲ್ಲಿ ಯಾವ ದೇವಾಲಯಗಳಾಗಲೀ, ಗೋಪುರಗಳಾಗಲೀ ಅಥವಾ ಅರಮನೆಗಳಾಗಲೀ ಎದ್ದು ನಿಲ್ಲುತ್ತಿರಲಿಲ್ಲ, ಮನುಷ್ಯನಲ್ಲಿ ನಿರ್ಧಾರವನ್ನು ಸೃಷ್ಟಿಸುವ ಶಕ್ತಿಯೇ ನಾನು. ಸೃಜನಶೀಲ ಯೋಚನೆಗಳನ್ನ ಮನುಷ್ಯನಲ್ಲಿ ಮೂಡಿಸುವ ಮೂಲವೇ ನಾನು. ಮನುಷ್ಯನ ಕೈಗಳು ಚಲಿಸುವುದೇ ನನ್ನಿಂದ. ನಾನು ಎಂದೂ ಅಳಿಯದ ಸೈತಾನ. ಜನ ತಾವು ಜೀವಂತವಾಗಿರಲಿಕ್ಕೆ ಸದಾ ಯಾರ ವಿರುದ್ಧ ಸೆಣಸುತ್ತಾರೋ ಅದೇ ಸೈತಾನ ನಾನು. ಅವರು ನನ್ನ ವಿರುದ್ಧ ಸೆಣಸುವುದನ್ನು ನಿಲ್ಲಿಸಿದರೆ ಆಲಸ್ಯ.

"ಗಂಡಸರ ಮನಸ್ಸುಗಳನ್ನು, ಹೆಂಗಸರ ಹೃದಯಗಳನ್ನು ಸ್ತಬ್ಧಗೊಳಿಸುವ ರೇಗಿದ ಮತ್ತು ಮೌನವಾದ ಚಂಡಮಾರುತ ನಾನೇ. ನನ್ನ ಭಯದಿಂದ ಅವರು ನನ್ನ ನಾಶಕ್ಕಾಗಿ ಪೂಜಾಸ್ಥಳಗಳಿಗೆ ಪ್ರಯಾಣಿಸುತ್ತಾರೆ ಅಥವಾ ನನಗೆ ಶರಣಾಗಿ ನನ್ನನ್ನು ಸಂಪ್ರೀತಗೊಳಿಸಲಿಕ್ಕಾಗಿ ಕೆಟ್ಟ ಸ್ಥಳಗಳಿಗೆ ಯಾತ್ರೆ ಹೋಗುತ್ತಾರೆ. ರಾತ್ರಿಯ ಮೌನದಲ್ಲಿ ತನ್ನ ಹಾಸಿಗೆಯಿಂದ ನನ್ನನ್ನು ದೂರವಿಡಲು ಪ್ರಾರ್ಥಿಸುವ ಧರ್ಮಗುರು ನನ್ನನ್ನ ತನ್ನ ಕೋಣೆಗೆ ಆಹ್ವಾನಿಸುವ ವೇಶ್ಯೆಯ ಹಾಗೆ. ನಾನು ಸೈತಾನ. ಅಮರ ಮತ್ತು ನಿರಂತರ. ಭಯದ ತಳಹದಿಯ ಮೇಲೆ ಆಶ್ರಮಗಳನ್ನು, ಮಠಗಳನ್ನು ಕಟ್ಟುವವನು ನಾನು. ಕಾಮನೆಗಳು ಮತ್ತು ತೃಪ್ತಿಯ ತಳಹದಿಯ ಮೇಲೆ ಮದ್ಯದಂಗಡಿಗಳನ್ನು ಮತ್ತು ಕೆಟ್ಟ ತಾಣಗಳನ್ನು ಕಟ್ಟುವವನು ನಾನು. ನಾನಿಲ್ಲವಾದರೆ ಭಯ ಮತ್ತು ಸಂತೋಷಗಳು ಪ್ರಪಂಚದಿಂದಲೇ ಅಳಿಸಲ್ಪಡುತ್ತವೆ. ಮತ್ತು ಅವುಗಳೊಂದಿಗೆ ಆಸೆ, ಆಕಾಂಕ್ಷೆಗಳೂ ಕೂಡ ಮಾನವನ ಮನಸ್ಸಿನಿಂದ ದೂರಾಗುತ್ತವೆ. ತಂತು ಮುರಿದ ವಾದ್ಯದಂತೆ ಬದುಕು ಶೂನ್ಯ ಮತ್ತು ನೀರಸವಾಗುತ್ತದೆ. ನಾನು ನಿರಂತರವಾದ ಸೈತಾನ.

"ಕೆಟ್ಟತನ, ವಿಶ್ವಾಸಘಾತ, ದ್ರೋಹ, ಮೋಸ ... ಪರಿಹಾಸಗಳಿಗೆ ಸ್ಫೂರ್ತಿಯೇ ನಾನು. ಇವುಗಳು ಪ್ರಪಂಚದಿಂದಲೇ ಇಲ್ಲವಾದರೆ, ಮಾನವ ಸಮಾಜ ಮರುಭೂಮಿಯಂತಾಗಿ ಒಳ್ಳೆಯ ಮುಳ್ಳುಗಳ ಹೊರತಾಗಿ ಬೇರೇನೂ ಇಲ್ಲದಂತಾಗುತ್ತದೆ. ನಾನು ಸೈತಾನ – ಅಮರ, ನಿರಂತರ.

"'ಪಾಪ'ದ ತಂದೆ ಮತ್ತು ತಾಯಿ ನಾನು. ಪಾಪ ಸೃಷ್ಟಿಯಿಂದ ಮಾಯವಾದರೆ ಪಾಪದ ವಿರುದ್ಧ ಹೋರಾಡುವವರೂ ತಮ್ಮ ಮನೆ ಮಠಗಳೊಂದಿಗೆ ಮಾಯವಾಗುತ್ತಾರೆ.

"ನಾನು ಕೆಟ್ಟದೆಲ್ಲದರ ಹೃದಯ. ನನ್ನ ಎದೆ ಬಡಿತ ಸ್ತಬ್ಧವಾಗಿ, ಆ ಮೂಲಕ ಮನುಷ್ಯನ ಚಲನೆಯೇ ಸ್ತಬ್ಧವಾಗುವುದನ್ನ ನೀನು ಬಯಸುತ್ತೀಯ? ಕಾರಣವನ್ನೇ ನಾಶ ಮಾಡಿದ ಬಳಿಕ ಅದರ ಪರಿಣಾಮಗಳನ್ನು ಒಪ್ಪಿಕೊಳ್ಳುತ್ತೀಯ? ನಾನೇ ಕಾರಣ! ನಾನು ಈ ನಿರ್ಜನ ಕಾಡಿನಲ್ಲಿ ಸಾಯಲು ನೀನು ಬಿಡುತ್ತೀಯ? ನನ್ನ ನಿನ್ನ ನಡುವಿನ ಸಂಬಂಧ ಕಟುವಾಗಲು ನೀನು ಬಯಸುತ್ತೀಯ? ಉತ್ತರಿಸು ಪಾದ್ರಿ!"

ಸೈತಾನ ತನ್ನೆರಡೂ ತೋಳುಗಳನ್ನು ಚಾಚಿ, ತಲೆಯನ್ನು ಮುಂದೆ ಬಾಗಿಸಿ, ನಿಡುಸಿರು ಬಿಟ್ಟ. ಬೂದು ಬಣ್ಣಕ್ಕೆ ತಿರುಗಿದ್ದ ಅವನ ಮುಖ ಯುಗಯುಗಗಳಿಂದ ನೈಲ್‌ನದಿಯ ತಟದಲ್ಲಿ ನಿರುಪಯುಕ್ತವಾಗಿ ಬಿದ್ದಿದ್ದ ಈಜಿಪ್ಟಿನ ಪ್ರತಿಮೆಯೊಂದನ್ನು ಹೋಲುವಂತಿತ್ತು. ಆಗ ತನ್ನ ಮಿಂಚುವ ಕಣ್ಣುಗಳಿಂದ ಫಾದರ್‌ನನ್ನೇ ದಿಟ್ಟಿಸುತ್ತಾ "ನಾನು ಬಳಲಿದ್ದೇನೆ. ದುರ್ಬಲನಾಗಿದ್ದೇನೆ. ನನ್ನ ಕ್ಷೀಣಿಸುತ್ತಿದ್ದ ಶಕ್ತಿಯಿಂದ ನಿನಗಾಗಲೇ ತಿಳಿದಿರುವ ಸಂಗತಿಗಳ ಬಗ್ಗೆ ಹೇಳಿ ನಾನು ತಪ್ಪು ಮಾಡಿದೆ. ಈಗ ನೀನು ನಿನಗಿಷ್ಟ ಬಂದಂತೆ ಮಾಡು. ನೀನು ನನ್ನನ್ನು ನಿನ್ನ ಮನೆಗೆ ಕೊಂಡೊಯ್ದು ನನ್ನ ಗಾಯಗಳಿಗೆ ಚಿಕಿತ್ಸೆ ನೀಡಬಹುದು ಅಥವಾ ಇಲ್ಲಿಯೇ ನನ್ನನ್ನು ಸಾಯಲು ಬಿಡಬಹುದು" ಎಂದು ತೊದಲಿದ.

ಫಾದರ್ ಸಮಾನ್ ಕಂಪಿಸುತ್ತಾ ತನ್ನ ಕೈಗಳನ್ನುಜ್ಜಿಕೊಂಡರು ಮತ್ತು ಕ್ಷಮೆ ಯಾಚಿಸುವಂತೆ, "ಈಗೊಂದು ಗಂಟೆಗೆ ಮುಂಚೆ ತಿಳಿಯದಿದ್ದದ್ದು ಈಗ ನನಗೆ ತಿಳಿಯಿತು. ನನ್ನ ದಡ್ಡತನವನ್ನು ಮನ್ನಿಸು. ನೀನು ಪ್ರಲೋಭನೆಯ ಮೂಲ, ಮತ್ತು ಪ್ರಲೋಭನೆಯೇ ಮನುಷ್ಯನ ಆತ್ಮದ ಪರಾಮರ್ಶೆ ಮಾಡಲು ದೇವರಿಗೆ ಬೇಕಾದ ಮಾನದಂಡ ಎನ್ನುವುದು ನನಗೆ ಗೊತ್ತು. ನೀನು ಇಲ್ಲವಾದರೆ ಪ್ರಲೋಭನೆ ಸಾಯುತ್ತದೆ ಮತ್ತದರ ಸಾವಿನೊಂದಿಗೆ ಸಾವು ಮನುಷ್ಯನನ್ನ ಎಚ್ಚರಿಸಿ, ಅವನನ್ನು ಉನ್ನತಿಗೇರಿಸುವ ಆದರ್ಶವನ್ನು ನಾಶಗೊಳಿಸುತ್ತದೆ.

"ಅದಕ್ಕಾಗಿ ನೀನು ಬದುಕಲೇಬೇಕು. ನೀನು ಸತ್ತರೆ ಮತ್ತದು ಜನರಿಗೆ ಗೊತ್ತಾದರೆ ಅವರಲ್ಲಿನ ನರಕದ ಭಯ ಮಾಯವಾಗಿ ಅವರು ದೇವರನ್ನು ಪೂಜಿಸುವುದನ್ನೇ ನಿಲ್ಲಿಸಿಬಿಡುತ್ತಾರೆ. ಆನಂತರ ಪಾಪವನ್ನುಳಿದು ಮತ್ತೇನೂ ಇರುವುದಿಲ್ಲ. ನೀನು ಬದುಕಲೇ ಬೇಕು. ಯಾಕೆಂದರೆ ನಿನ್ನಿಂದಲೇ ಮನುಕುಲ ಪಾಪದಿಂದ ಮೋಕ್ಷ ಪಡೆಯಲು ಸಾಧ್ಯ.

"ನನ್ನ ಬಗ್ಗೆ ಹೇಳಬೇಕೆಂದರೆ ಮನುಷ್ಯನ ಮೇಲಿನ ಪ್ರೀತಿಗಾಗಿ ದೇವ ಪೀಠದ ಮೇಲೆ ನಿನ್ನ ಮೇಲಿನ ದ್ವೇಷವನ್ನು ನಾನು ಬಿಡಲೇಬೇಕು."

ನೆಲ ನಡುಗಿಸುವಂತಹ ನಗೆಯೊಂದಿಗೆ ಸೈತಾನ ಹೇಳಿದ "ಎಂತಹ ಬುದ್ಧಿವಂತನಯ್ಯ ನೀನು ಫಾದರ್! ಧರ್ಮಶಾಸ್ತ್ರದ ಬಗ್ಗೆ ಎಂತಹ ಅದ್ಭುತವಾದ ಜ್ಞಾನವನ್ನು ಹೊಂದಿದ್ದೀಯಾ! ನಾನೆಂದೂ ಅರ್ಥ ಮಾಡಿಕೊಂಡಿಲ್ಲದ, ನನ್ನ ಅಸ್ತಿತ್ವದ ಬಗೆಗಿನ ಉದ್ದೇಶವನ್ನು ನಿನ್ನ ಜ್ಞಾನದ ಮೂಲಕ ನೀನು ಕಂಡುಕೊಂಡಿದ್ದೀಯಾ. ಹಾಗೆಯೇ ನಮಗಿರುವ ಪರಸ್ಪರರ ಅವಶ್ಯಕತೆ ನಮಗಿಬ್ಬರಿಗೂ ಅರಿವಾಯಿತು.

"ಹತ್ತಿರ ಬಾ ಸಹೋದರನೇ. ಬಯಲನ್ನ ಕತ್ತಲೆ ನುಂಗುತ್ತಿದೆ. ಈ ಕಣಿವೆಯ ಮರಳಿನಲ್ಲಿ ನನ್ನ ದೇಹದ ಅರ್ಧದಷ್ಟು ರಕ್ತ ಬೆರೆತಿದೆ. ನೀನು ಸಹಾಯ ಮಾಡದಿದ್ದರೆ ಸಾವಿನ ದವಡೆಯಲ್ಲಿರುವ ಈ ನನ್ನ ದೇಹದ ಮೂಳೆಗಳ ಹೊರತಾಗಿ ಬೇರೇನೂ ಉಳಿಯುವುದಿಲ್ಲ." ಫಾದರ್ ಸಮಾನ್ ತನ್ನ ಅಂಗಿಯ ತೋಳುಗಳನ್ನು ಮಡಿಚಿಕೊಂಡು ಅವನನ್ನ ಸಮೀಪಿಸಿ ಅವನನ್ನ ತನ್ನ ಬೆನ್ನ ಮೇಲಿರಿಸಿಕೊಂಡು ಮನೆಯ ಹಾದಿ ತುಳಿದರು.

ಕತ್ತಲು ಮತ್ತು ಮೌನಗಳಿಂದಾವೃತವಾದ ಆ ಕಣಿವೆಗಳ ನಡುವೆ ಫಾದರ್ ಸಮಾನ್ ಸೈತಾನನ ಭಾರವಾದ ದೇಹವನ್ನು ಹೊತ್ತು ತನ್ನ ಹಳ್ಳಿಯ ಕಡೆಗೆ ನಡೆದರು. ಅವನ ಕಪ್ಪನೆಯ ಉಡುಪು ಮತ್ತು ನೀಳವಾದ ಗಡ್ಡ ಅವನ ಬೆನ್ನಿನ ಮೇಲಿನ ಭಾರ, ಒಸರುತ್ತಿದ್ದ ರಕ್ತದಿಂದ ತೊಯ್ದಿತ್ತು, ಆದರೆ ಆತ ಒದ್ದಾಡುತ್ತಾ ಮುಂದುವರೆದ. ಅವನ ತುಟಿಗಳು ಸಾಯುತ್ತಿದ್ದ ಸೈತಾನನ ಉಳಿವಿಗಾಗಿ ಗಾಢ ಪ್ರಾರ್ಥನೆಯಲ್ಲಿ ತೊಡಗಿದ್ದವು!

ಸ್ವಾರ್ಥದ ಮೇಲೆ ಕಟ್ಟಲ್ಪಟ್ಟ ವೈಭವವು ಅವಮಾನ ಮತ್ತು ಅಪರಾಧ-ವಿಲಿಯಮ್ ಕೌಪರ್

ಸಿಎಂ ಇಲ್ಲದಿದ್ದರೇನು ಹಿನ್ನೆಲೆ ಸಿಎಂ ಇರ್ತಾರೆ

ಚಾಮುಂಡೇಶ್ವರಿ ಕ್ಷೇತ್ರದ ಚುನಾವಣೆಗೆ ದಿನೇ ದಿನೇ ರಂಗೇರುತ್ತಿದ್ದು ಆರೋಪ ಪ್ರತ್ಯಾರೋಪಗಳಿಂದ ದೇಶದ ನಾಯಕಮಣಿಗಳು ಮತದಾರ ಮಹಾಪ್ರಭುವಿಗೆ ಪುಕ್ಕಟೆ ಮನರಂಜನೆ ನೀಡುತ್ತಿದ್ದಾರೆ. ಸಿದ್ದರಾಮಯ್ಯಗೆ ತಾವು ವಂಚನೆ ಮಾಡಿಲ್ಲವೆಂದು, ಅವರೇ ತಮ್ಮನ್ನು ವಂಚಿಸಿ ಮೋಸಗೊಳಿಸಿದರೆಂದು ದೇವೇಗೌಡರು ಹೇಳುತ್ತಿದ್ದಾರೆ. ಈ ವಂಚನೆಗೆ ತಕ್ಕ ಶಿಕ್ಷೆ ನೀಡಲು ತಮ್ಮ 'ನಿಜವಾದ' ಮಗ ಮುಖ್ಯಮಂತ್ರಿ ಕುಮಾರಸ್ವಾಮಿ ಪರದಾಡುತ್ತಿರುವುದನ್ನು ಕಂಡು ಕಣ್ಣೀರು ಸುರಿಸುತ್ತಿದ್ದಾರೆ. ಗ್ಲಿಸರೀನ್ ಬಳಸದೆ ಹೀಗೆ ತಮಗೆ ಬೇಕೆಂದಾಗಲ್ಲ ಕಣ್ಣೀರು ತರಿಸಿಕೊಳ್ಳುವ ದೇಹ ಸಾಮರ್ಥ್ಯಕ್ಕೆ ಎಂತಹ ಅದ್ವಿತೀಯ ನಟರೂ ನಾಚಬೇಕು ಎಂದು ಕೆಲವರೂ; ಹೀಗೆ ಕಣ್ಣೀರ್ಗರೆಯುವುದು ಹೇಡಿಗಳ ಲಕ್ಷಣ ಎಂದು ಹಲವರೂ; ಚುನಾವಣೆಯ ಫಲಿತಾಂಶ ಆನಂತರದ ಪರಿಣಾಮ ಅವರಿಂದ ಈ ರೀತಿ ಮಾಡಿಸಿದೆ ಎಂದು ಮತ್ತಿತರರೂ ಲೇವಡಿ ಮಾಡುತ್ತಿರುವಾಗ; ಅವರ ಬಾಣಕ್ಕೆ ಗುರಿಯಾಗಿರುವ ಸಿದ್ದರಾಮಯ್ಯ ತಮಗೆ ಎಲ್ಲ ಅರ್ಹತೆ ಇದ್ದರೂ ತಮ್ಮ ಮಗನನ್ನು ಮುಖ್ಯಮಂತ್ರಿ ಗದ್ದುಗೆಗೆ ಏರಿಸಬೇಕೆಂಬ ಬಯಕೆಯಿಂದ ಈ ದೇವೇಗೌಡ ಮುಖ್ಯಮಂತ್ರಿ ಪದವಿಯಿಂದ ವಂಚಿತನನ್ನಾಗಿಸಿದರು ಎಂದು ಥಾಣಾ ಥಂಗೂರ ಹೊಡೆಯುತ್ತಿದ್ದರೂ ಮತದಾರ ಮಹಾಪ್ರಭು ಇಬ್ಬರನ್ನೂ ಅಪನಂಬಿಕೆಯಿಂದ ನೋಡುತ್ತಿರಲಾಗಿ; ಚುನಾವಣೆ ಸಮಯದಲ್ಲಿ ಮತದಾರ ಈ ರೀತಿ ಸಂಶಯ ಪ್ರಕಟಿಸಿದರೆ ಎಡವಟ್ಟಾದೀತು ಎಂದು ಬಗೆದು ಈರ್ವರು ಮಹಾ ನಾಯಕರೂ ತಾಯಿ ಚಾಮುಂಡೇಶ್ವರಿಯನ್ನು ನ್ಯಾಯ ಪರಿಹಾರಕ್ಕೆ ಎಳೆತಂದಿದ್ದಾರೆ! ತಾವು ಮೋಸ ಮಾಡಿದ್ದರೆ ಆ ತಾಯಿ ಚಾಮುಂಡೇಶ್ವರಿಯು ತಮಗೆ ಶಿಕ್ಷೆ ನೀಡಲಿ ಎಂದು ಅವರೂ, ತಾವು ವಂಚಿಸಿದ್ದರೆ ಆ ತಾಯಿಯೇ ನೋಡಿಕೊಳ್ಳಲಿ ಎಂದು ಇವರೂ ಅವಳ ಮೇಲೆ ಹೊಣೆ ಹೇರಿದ್ದಾರೆ. ಈಗ ತಪ್ಪಿತಸ್ಥರ ವಿರುದ್ಧ ಮತ ಚಲಾಯಿಸುವಂತೆ ಮತದಾರರನ್ನು ಓಲೈಸುವುದು ಚಾಮುಂಡಿಯ ಜವಾಬ್ದಾರಿಯಾಗಿದೆ! ಯಾರಿಗೆ ಯಾರು ಮೋಸ ಮಾಡಿದರು ಎಂಬುದನ್ನು ಈಗ ಆ ತಾಯಿಯು ನಿರ್ಧರಿಸಲಿದ್ದಾಳೆ!

ತಾಯಿ ಚಾಮುಂಡೇಶ್ವರಿಯನ್ನು ನಂಬದರೆ ಸಾಲದು ಎಂಬುದರಿಂದಲೋ ಏನೋ ರಾಜ್ಯದ ಮುಖಂಡರೆಲ್ಲ ಘೇರಾಯಿಸಿ ಮತದಾರ ಮಹಾಪ್ರಭುವನ್ನು ಓಲೈಸಲು ಅಹರ್ನಿಶಿ ದುಡಿಯುತ್ತಿದ್ದಾರೆ. ಈ ಚುನಾವಣೆ ಫಲಿತಾಂಶ ಸಮ್ಮಿಶ್ರ ಸರ್ಕಾರದ ಆಡಳಿತಕ್ಕೆ ಹಿಡಿದ ಕನ್ನಡಿ ಎಂಬುದನ್ನು ಅಲ್ಲಗಳೆಯುವ ಮುಖ್ಯಮಂತ್ರಿಗಳು ಅಂತರಾಳದಲ್ಲಿ ಇದೇ ಸತ್ಯ ಎಂಬುದನ್ನು ನಂಬಿರುವಂತಿದೆ. ಈ ಕಾರಣದಿಂದಾಗಿಯೇ ಶತಾಯಗತಾಯ ಗೆಲ್ಲಲೇಬೇಕೆಂದು ಚಾಮುಂಡೇಶ್ವರಿಯ ಮಡಿಲಲ್ಲೇ ಮಲಗಿದ್ದಾರೆ.

ಒಬ್ಬ ರಾಜ್ಯದ ಮುಖ್ಯಮಂತ್ರಿ ಜುಜುಬಿ ಒಂದು ಉಪ ಚುನಾವಣೆಗಾಗಿ ಹೀಗೆ ಬಂದು ತಂಗಿದರೆ ರಾಜ್ಯದ ಆಡಳಿತದ ಗತಿ ಏನಾಗಬೇಡ ಎಂದು ಯಾವತ್ತೂ ರಾಜ್ಯದ ಭವಿಷ್ಯದ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳದವರೂ ಕೂಗಾಡತೊಡಗಿದ್ದಾರೆ. ರಾಜ್ಯದ ಆಡಳಿತ ಯಾವತ್ತೂ ಯುವ ಮುಖ್ಯಮಂತ್ರಿಯ ಕೈಯಲ್ಲಿ ಇರಲಿಲ್ಲ ಅದನ್ನೆಲ್ಲ ಅವರ ಪೂಜ್ಯ ತಂದೆಯವರೇ ಪರಿಪಾಲಿಸುತ್ತಿದ್ದರು ಎಂಬ ಸಂಗತಿಯ ಸಂಪೂರ್ಣ ಅರಿವಿದ್ದೂ ಈ ರೀತಿ ಹೇಳಲು ಚುನಾವಣೆಯ ತುರ್ತು ಅವಶ್ಯಕತೆಯಿದ್ದಿರಬಹುದು. ಅರೇ, ಅವರ ತಂದೆಯವರೂ ಇಲ್ಲೇ ಪಾದಯಾತ್ರೆ ಮಾಡುತ್ತಿದ್ದಾರಲ್ಲ ಎಂಬ ಆಕ್ಷೇಪ ಕೇಳಿಬರುತ್ತಿರಬಹುದಾದರೂ ಅವರಿಗೆ ಉತ್ತರ ಇಷ್ಟೆ: ಸ್ವಾಮಿ ಆ ವಂಶ ಪುರಾತನಕಾಲದ ವಂಶ. ಈಗಿನಂತೆ ಒಂದೆರಡು ಮಕ್ಕಳಿಗೆ ಸೀಮಿತವಾಗಿರಬೇಕಾದ ಅವಶ್ಯಕತೆ ಅವರಿಗಿರಲಿಲ್ಲ. ತುಂಬು ಕುಟುಂಬದ ಯಾರಾದರೂ ಓರ್ವ ಸದಸ್ಯರು ಕರ್ತವ್ಯ ನಿರ್ವಹಿಸಬಹುದಾಗಿದ್ದು ಈ ರೀತಿಯ ಅನಿವಾರ್ಯ ಸಂದರ್ಭಗಳಲ್ಲಿ ಇರಲಿ ಎಂದೇ ಮಾನ್ಯ ಎಚ್.ಡಿ. ಬಾಲಕೃಷ್ಣೇಗೌಡರನ್ನು ಬದಲಿ ಮುಖ್ಯಮಂತ್ರಿ ಸ್ಥಾನಕ್ಕೆ ಮೀಸಲಿಟ್ಟಿದ್ದಾರೆ. ಈ



ಬದಲಿ ವ್ಯವಸ್ಥೆ ಕುರಿತು ಯಾರಿಗಾದರೂ ಅಪನಂಬಿಕೆಯಿದ್ದರೆ ತಲಕಾಡು ಉತ್ಸವದ ಸಂದರ್ಭದಲ್ಲಿ ಶ್ರೀಯುತರು ಕಾನೂನು ವ್ಯವಸ್ಥೆ ಕುರಿತು ಕಿಡಿ ಕಾರಿದ್ದನ್ನು, ಆ ನಂತರ ತರಾತುರಿಯಲ್ಲಿ ಅವರ ಆಜ್ಞೆಯನ್ನು ಪೊಲೀಸ್ ಅಧಿಕಾರಿಗಳು ಪರಿಪಾಲಿಸಿದ್ದನ್ನೂ ದಯಮಾಡಿ ನೆನಪು ಮಾಡಿಕೊಳ್ಳಿ. ಆ ಸ್ಥಳದಲ್ಲಿ ಸನ್ಮಾನ್ಯ ಯುವ ಮುಖ್ಯಮಂತ್ರಿಗಳೂ ಅವರ ಪಿತಾಶ್ರೀಯವರೂ ಹಾಜರಿದ್ದು ಇದೆಲ್ಲವನ್ನೂ ಮೆಚ್ಚುಗೆಯಿಂದ ವೀಕ್ಷಿಸುತ್ತಿದ್ದರು ಎಂಬುದು ನೆನಪಿರಲಿ! ಸಿನಿಮಾಗಳಲ್ಲಿ ಹಿನ್ನೆಲೆ ಗಾಯಕರು, ನಾಯಕ ನಾಯಕಿಯರು ಕೇವಲ ಬಾಯಿ ಆಡಿಸಿ ತಾವೇ ಹಾಡಿದ್ದೆಂದು ಭ್ರಮೆ ಮೂಡಿಸಲ್ಲವಾ ಹಾಗೇನೇ ಇದೂನೂವೆ. ಅಲ್ಲಿ ಗಾಯಕರು ಇದ್ದಹಾಗೆ ಇಲ್ಲಿ ನಾಯಕರು-ಹಿನ್ನೆಲೆ ಸಿ.ಎಂ.!

ಇಂತಹ ಹಿನ್ನೆಲೆ ಆಡಳಿತಗಾರರು ಇರುವುದರಿಂದಲೇ ಮಾನ್ಯ ಮುಖ್ಯಮಂತ್ರಿಯವರು ಗ್ರಾಮ ವಾಸ್ತವ್ಯ ಅನ್ನುವ ಹೆಸರಿನಲ್ಲಿ ಎಲ್ಲೆಲ್ಲೋ ಹೋಗಿ ಮಲಗಿದರೂ ಆಡಳಿತಕ್ಕೆ ಯಾವುದೇ ಚ್ಯುತಿ ಬಾರದಿರುವುದು ಈ ರಾಜ್ಯದ ಭಾಗ್ಯವೇ ಸರಿ.

ಚಾಮುಂಡೇಶ್ವರಿ ತಾಯಿಯ ಹೆಸರಿನಲ್ಲಿ ಈ ರೀತಿ ನ್ಯಾಯ ಪರಿಹಾರದ ವಿಶಿಷ್ಟ ಯೋಜನೆಯನ್ನು ಕಾಂಗ್ರೆಸ್ ಹಾಗೂ ಜಾತ್ಯತೀತ ದಳ ರೂಪಿಸುತ್ತಿರುವಾಗ, ಯಾವಾಗಲೂ ದೇವರು, ಧರ್ಮದ ಹೆಸರಿನಲ್ಲೇ ಅಭಿವೃದ್ಧಿಯನ್ನು ಕಾಣುತ್ತಿರುವ ಭಾರತೀಯ ಜನತಾಪಕ್ಷದ ನೇತಾರರು ಸುಮ್ಮನಿರಲಾಗದೆ ಕನಕನ ಕಿಂಡಿ ವಿವಾದವನ್ನು, ತಮ್ಮ ಎಂದಿನ ಜಾಯಮಾನದಂತೆ, ಮತ್ತೆ ಎಳೆದುತಂದಿದ್ದಾರೆ. ಇದರ ಆಧಾರದ ಮೇಲೆ, ಪ್ರಖ್ಯಾತ ಜ್ಯೋತಿಷಿಗಳ ಆತ್ಮವನ್ನು ಆವಾಹಿಸಿಕೊಂಡವರಂತೆ, ಸನ್ಮಾನ್ಯ ಉಪ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಸಿದ್ದರಾಮಯ್ಯ ಸೋಲು ಖಚಿತ ಎಂದು ಭವಿಷ್ಯ ಹೇಳಿದ್ದಾರೆ. ಯಾಕೆ ಸೋಲು ಖಚಿತ ಎಂದರೆ ಶ್ರೀ ಉಡುಪಿಯ ಪೇಜಾವರ ಮಠದ ವಿಶ್ವೇಶತೀರ್ಥ ಸ್ವಾಮೀಜಿಯ ಶಾಪ ಅವರ ಮೇಲೆ ಇದೆಯಂತೆ! ಅಬ್ಬಾ ಎಂಥಾ ಮಹಿಮೆ ಆ ಸ್ವಾಮಿಯದ್ದು!

ಯಡಿಯೂರಪ್ಪ ಮಾತು ಕೇಳುತ್ತಿದ್ದಂತೇ ಕಿಡಿಕಿಡಿಯಾಗಿರಬಹುದಾದ ಸಿದ್ಧರಾಮಯ್ಯ ಅದನ್ನು ಈ ಸಂದರ್ಭದಲ್ಲಿ ತೋರಿಸಲಾಗದ ಸಂಕಟಕ್ಕೆ ಸಿಲುಕಿ 'ನಾನು ಕನಕ ಗೋಪುರ ಕೆಡವುವುದನ್ನು ವಿರೋಧಿಸಿದ್ದೇನೆಯೇ ಪರಂತು ಸ್ವಾಮೀಜಿಯವರನ್ನಲ್ಲ. ದೇವರ ಮೇಲೆ ನಂಬಿಕೆ ಇಲ್ಲ ಅಂತ ಯಾವತ್ತು ಹೇಳಿದ್ದೆ, ಯಾರಿಗೆ ಹೇಳಿದ್ದೆ?' ಎಂದೆಲ್ಲಾ ಬಡಬಡಿಸಿ ಬೆಂಗಳೂರಿಗೆ ದೌಡಾಯಿಸಿ ಆ ಸ್ವಾಮಿಯ ಆಶೀರ್ವಾದ ಪಡೆದು ಪತ್ರಿಕೆಗಳಲ್ಲಿ ಫೋಟೋ ಅಚ್ಚು ಹಾಕಿಸಿಕೊಳ್ಳುವುದು ಅನಿವಾರ್ಯ ಆಯಿತಂತೆ!

ಅಲ್ಲ ಆ ಸ್ವಾಮಿಯ ಶಾಪ ಅನ್ನೋದು; ಈ ಮಠದ ಶಾಪ ಅನ್ನೋದು; ಅವರ ಆಶೀರ್ವಾದ ಸಿಕ್ಕಿದರೆ ಗೆಲುವು ಖಾತರಿ ಅನ್ನೋದು ಇವೆಲ್ಲಾ ನಿಜ ಅನ್ನೋದಾದರೆ.... ದೇವೇಗೌಡರು ಯಾವ ಚುನಾವಣೆಯಲ್ಲೂ ಸೋಲಲೇಬಾರದಿತ್ತು ಅಲ್ವಾ. ಅವರಷ್ಟು ಮಠ ಹತ್ತಿದೋರು, ಸ್ವಾಮಿಗಳ ಕಾಲಿಗೆ ಬಿದ್ದೋರು, ಜ್ಯೋತಿಷಿಗಳ ಆಜ್ಞೆ ಕಾಯ್ದೋರು ಇನ್ನು ಯಾವ ಯಾವ ರಾಜಕಾರಣಿಯೂ ಇಲ್ಲ ಅನ್ಸುತ್ತೆ. ಆದರೂ ಅವರು ಅನೇಕ ಸಲ ಸೋಲು ಕಂಡರಲ್ಲ; ಇದು ನಿಜವೇ ಆಗಿದ್ದರೆ ದೇವರ ಕೇಳಿ, ಮಠಾಧೀಶರ ಒಪ್ಪಿಗೆ ಪಡೆದು 'ಜನ'ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳಬಹುದಾಗಿತ್ತಲ್ವಾ ಅಂದರೆ.... ದೇವರನ್ನು ಕೇಳಬೇಕು ಪೂಜಾರಿ ಬದುಕಬೇಕಲ್ವಾ! ಮಠಾಧೀಶರನ್ನೂ ಕೇಳಬೇಕು ಮಠಗಳ ಪ್ರಾಬಲ್ಯ ಹೆಚ್ಚಬೇಕಲ್ವಾ! ಮತದಾನಾನೂ ಮಾಡಬೇಕು, ಮತದಾರರೂ ಬದುಕಬೇಕಲ್ವಾ ಅಂತಾರೆ ಕೆಲವು ಕಿಡಿಗೇಡಿಗಳು!

ಇದು ಹಾಗಿರಲಿ. ಕೆಲವು ಅಧಿಕಾರಿಗಳು ಹಣ ಸಂಗ್ರಹಿಸಿ ಸಿದ್ದರಾಮಯ್ಯಗೆ ಕೊಡುತ್ತಿದ್ದಾರೆ, ಅಂಥವರನ್ನು ಬಲಿ ಹಾಕ್ತೇನಿ ಅನ್ನುವ ಮಾತನ್ನು ಸನ್ಮಾನ್ಯ ಯುವ ಮುಖ್ಯ ಮಂತ್ರಿ ಅಪ್ಪಣೆ ಕೊಡಿಸಿದ್ದಾರೆ. ಅವರ ಪಿತಾಶ್ರೀಯವರು ಚುನಾವಣೆಗಳಲ್ಲಿ ಕಾಳಸಂತೆಯ ಹಣ ಹರಿಯುತ್ತಿರುವುದು ಭ್ರಷ್ಟಾಚಾರಕ್ಕೆ ನಾಂದಿಯಾಗಿದೆ ಅನ್ನುವ ಮಾತುಗಳನ್ನು ಹೇಳಿದ್ದಾರೆ. ಇದಕ್ಕೆ ಪ್ರತಿಕ್ರಿಯೆಯಾಗಿ ಸಿದ್ದರಾಮಯ್ಯ 'ಈ ಮಾತು ಸತ್ಯ. ಆದರೆ ನಾನು ಅಧಿಕಾರ ಕಳಕೊಂಡೋನು. ನನಗೆ ಯಾವ ಅಧಿಕಾರಿ ಹಣ ಕೊಡಲು ಬರುತ್ತಾನೆ' ಎಂದು ಅಮಾಯಕನಂತೆ ಬಡಬಡಿಸಿದ... ಈ ಮಹನೀಯರ ಮಾತುಗಳನ್ನು ವಿಶ್ಲೇಷಿಸಿದರೆ... ಅಧಿಕಾರಿಗಳು ಹಣ ಸಂಗ್ರಹಿಸುವುದು ಸರಿ.. ...ರಾಮಯ್ಯ ಅವರಿಗೆ ಕೊಡುವುದು ಅಪ... ಅಧಿಕಾರದಲ್ಲಿದ್ದಾಗ ಹಣ ಹ... ಬರುತ್ತೆ, ಅಧಿಕಾರ ಕಳೆದುಕೊ... ನೊಣವೂ ಹತ್ತಿರ ಸುಳಿಯುವುದಿ... ಚುನಾವಣೆಗಳಲ್ಲಿ ಕಪ್ಪು ... ಹರಿಯುತ್ತೆ, ಹಾಗೆ ಹರಿಸುವ... ಅನಿವಾರ್ಯ!

ಭ್ರಷ್ಟಾಚಾರ ಮಾಡದೇ ಚುನಾ... ಮಾಡಲು ಸಾಧ್ಯವಿಲ್ಲ!

ಈ ದೇಶದ ಭವಿಷ್ಯ? ದೇವರೇ ಗತಿ!

ಇದನ್ನೆಲ್ಲ ನೋಡಿದರೆ.... ಇವತ್ತು ಈ ಪಕ್ಷದಲ್ಲಿದ್ದೋ... ಕಣ್ಣು ಮಿಟುಕಿಸುವುದರೊಳಗೆ ಇನ್ನೊಂದು ಪಕ್ಷಕ್ಕೆ ಹಾರಿ... ಇದನ್ನು ಪಕ್ಷಾಂತರ ಅನ್ನುವುದರ ಬದಲು 'ದುಡ್ಡಾ... ಅನ್ನಬಹುದಲ್ಲವೇ?

ಈ ಅಧಿಕಾರದ, ಹಣದ ಆಮಿಷ ತದಕೊಳ್ಳೋ... ಕಪ್ಪ ಕಣ್ರೋ. ಕಪ್ಪು ಹಣದಿಂದ ಭ್ರಷ್ಟಾಚಾರ ಹೆಚ್ಚುತ್ತಿರುವು... ಕಂಡು ಕಣ್ಣೀರು ಕೋಡಿ ಹರಿಸಿದ ದೇವೇಗೌಡ... ದೇವೇಗೌಡರೇ... 'ಅನ್ವರ್‌ಜೀ ನೀವು ನಮ್ಮ ... ಸೇರಿ, ನಿಮಗೆ ಬೇಕಾದ ನಿಗಮ ಮಂಡಳಿ ಅಧ... ನೀಡ್ತೀನಿ' ಅಂದರಲ್ಲ.. ಅದನ್ನ ನಂಬಿ ಅನ್ವರ್‌ಜಿ ಪು... ಕರನ್ನು ನೆನೆಸಿಕೊಂಡು ಪಕ್ಷಾಂತರ ಮಾಡಿದರಲ್ಲ...." ಭ್ರಷ್ಟಾಚಾರ ಅಲ್ವಾ? ನಿಗಮ ಮಂಡಳಿಗಳು ಇರುವ... ಇಂತಹ ಯಾವುದೇ ಸಿದ್ಧಾಂತ ಇಲ್ಲದ ಜನರು ಮೇಯ... ಅವಕಾಶ ನೀಡಲಾ.... ನಿಗಮಮಂಡಳಿಗಳ ಅಧ... ನೇಮಕಕ್ಕೂ ನನಗೂ ಯಾವ ಸಂಬಂಧವೂ ಇಲ್ಲ "... ದೇವೇಗೌಡರು ಹೇಳಿದ್ದ ನೆನಪು.... ಹಾಗಾದರೇ "... ನಿಜಾನಾ ಅಥವಾ ಇದೇ ನಿಜಾನಾ? ಪಾಪ ಚುನಾವ... ಗೆಲ್ಲಲೇಬೇಕು ಅಂತ ಇರುವವರು ಇಂಥ ಅ... ವೇಷಗಳನ್ನು ಧರಿಸುವುದು ಅನಿವಾರ್ಯವೋ ಏನೋ...

ಹೀಗೆ ಬಹಿರಂಗವಾಗಿ ಅಧಿಕಾರದ ಆಸೆ ತೋ... ಪಕ್ಷಾಂತರಕ್ಕೆ ಪ್ರೇರೇಪಿಸುವುದೂ ಚುನಾವಣೆ ನೀತಿಸ... ಇರಬೇಕು!

ಚಾಮುಂಡೇಶ್ವರಿ ಕ್ಷೇತ್ರದ ಚುನಾವಣೆ:

ಚುನಾವಣೆ ಅಂದರೆ ಹೆಂಡ ಇರಲೇಬೇಕು. ಹ... ಆಮಿಷ, ತುಂಡಿನ ತೂರಾಟ ಇದ್ದದ್ದೇ ಬಿಡಿ.

ರಾತ್ರಿ ಹೆಂಡ ಕುಡಿಯುತ್ತಿದ್ದವನು, ಬಟ್ಟೆ ಸಿಗು... ಅಂತ ಬೆಳಿಗ್ಗೇನೆ ಶುರು ಮಾಡ್ತಾನೆ. ಸರಬರಾ... ಮಾಡುವವರಿಗೆ ಶಾನೆ ಕಷ್ಟ.

ಇದಕ್ಕೇನು ಪರಿಹಾರ?

ನೀರಿನ ಟ್ಯಾಂಕುಗಳಲ್ಲಿ ಸಾರಾಯಿ ತುಂಬಿಸಿ ಸರಬರಾ... ಮಾಡಿ. ಬೇಕಾದವನು ನಲ್ಲಿ ತಿರುಗಿಸಿ ಸಾರಾ... ಬಟ್ಕೋತಾನೆ!

ಒಂದು ಸಮಸ್ಯೆ. ಸಾರಾಯೀನೆ ಎಲ್ಲರೂ ಕೇಳಲ್ಲ... ಬಹುಪಾಲು ಮಂದಿ 'ಬ್ರಾಂಡ್' ವೀರರು ಇದ್ದಾರ...

ಒಂದೊಂದು ಟ್ಯಾಂಕನ್ನು ಒಂದೊಂದು ಬ್ರಾ... ಮೀಸಲಾಗಿಡಿ!

-ಎಚ್.ಎಲ್. ಕೇಶವಮೂ...


ಮುದನೀಡಿದ 'ತನನಂ ತನನಂ' ದಾರಿ....

'ಕಂಡಹಾಗೆ' (ಲಂಕೇಶ್ 22.11.06) ಯಲ್ಲಿ ತಾವು ಬರೆದಿರುವ ಸಾಣೆಹಳ್ಳಿ ಶ್ರೀ ಪಂಡಿತಾರಾಧ್ಯ ಶಿವಾ ಚಾರ್ಯ ಸ್ವಾಮಿಜಿಗಳ ಕ್ರಾಂತಿಯ ಕುರಿತು ಓದಿ ಆ ಸ್ವಾಮೀಜಿಗಳ ಬಗ್ಗೆ ಇದ್ದ ಗೌರವ ಮತ್ತಷ್ಟು ಹೆಚ್ಚಿತು. ಶೂದ್ರಪರ ಚಿಂತನೆಯ ಅವರ ಶಿವಸಂಚಾರ ತಂಡವು ಆಡುವಂತ ಖ್ಯಾತ ನಾಟಕಗಳ ಬಗ್ಗೆ ಜನತೆ ತೋರುವ ಒಲವುಗಳ ಕುರಿತು ಓದಿ ಸಂತೋಷವಾಯ್ತು.

ಲಂಕೇಶ್, ಪಂಡಿತಾರಾಧ್ಯರಂತಹವರ ದೆಸೆಯಿಂದಾಗಿ ಇಂದು ಏಕಲವ್ಯನಂತಹವರು ಜಾಗೃತಗೊಳ್ಳುತ್ತಿದ್ದಾರಾದರೂ, ಧರ್ಮದ ತಳಹದಿಯಲ್ಲಿ ನಿಂತು ವ್ಯಾಖ್ಯಾನಿಸಿ ನೋಡುವಂತಹ -(ಡಿ. ಮುರಾರಿ ಬಲ್ಲಾಳರ ಪ್ರಕಾರ ಧರ್ಮದ ಕಳ್ಳುಕುಡಿಸಿ ಮಜಾ ನೋಡುವವರು) ಆಧುನಿಕ ದ್ರೋಣರು ಅದೇ ರೀತಿ ಹೆಚ್ಚುತ್ತಿರುವುದೂ ಆತಂಕದ ಸಂಗತಿಯಾಗಿದೆ.

ದ್ರೋಣಾಚಾರ್ಯ ಕೇಳಿದ್ದು ಗುರುದಕ್ಷಿಣೆ ಎಂಬುದು ಸಾಮಾನ್ಯ ನಂಬಿಕೆ. ಆದರೆ ಮೂಲ ಮಹಾಭಾರತದ ಪ್ರಕಾರ (ಬದಿ ಶಿಷ್ಯೋಸಿ ಮೇ ವೀರ ವೇತನಂ ದೀಯತಾಂ ಮಮ-ಆದಿಪರ್ವ 132 ನೇ ಅಧ್ಯಾಯ 54 ನೇ ಶ್ಲೋಕ) ದ್ರೋಣ ಕೇಳಿದ್ದು ಸಂಬಳ (ವೇತನ)ವನ್ನೇ ವಿನಃ ಗುರುದಕ್ಷಿಣೆಯನ್ನಲ್ಲ, ವೇತನಕ್ಕೂ, ಗುರುದಕ್ಷಿಣೆಗೂ ಬಹಳ ವ್ಯತ್ಯಾಸವಿದೆ. ದಕ್ಷಿಣೆ ಕೊಡುವವನಿಗೆ ಬಿಟ್ಟದ್ದಾದರೆ ವೇತನ ತೆಗೆದುಕೊಳ್ಳುವವನ ಹಕ್ಕಿನ ಪ್ರಶ್ನೆಯಾಗುತ್ತದೆ. ದ್ರೋಣ ಕೇಳಿದ ಗುರುದಕ್ಷಿಣೆಯನ್ನು ಅರ್ಜುನನ್ನು ಬಿಟ್ಟರೆ ಯಾರೂ ಕೊಡಲಿಲ್ಲ. ಗುರುದಕ್ಷಿಣೆ ಅಂದರೆ ಕೂಡಲೇ ಬೇಕೆಂದೇನೂ ಇಲ್ಲವೆಂದಾಗುತ್ತದೆ. (ದ್ರೋಣ ಕೌರವ-ಪಾಂಡವರಲ್ಲಿ ಕೇಳಿದ ಗುರುದಕ್ಷಿಣೆ ಎಂದರೆ ತನ್ನ ವೈರಿ ದ್ರುಪದನನ್ನು ಸೆರೆಹಿಡಿದು ತರ ಹೇಳಿದ್ದು). ಆದರೆ ಬುದ್ಧಿವಂತ ದ್ರೋಣ ಈ ಕಾರಣದಿಂದಲೇ ಏಕಲವ್ಯನಲ್ಲಿ ವೇತನವನ್ನು ಕೇಳಿದ್ದನೇ ಹೊರತು ಗುರುದಕ್ಷಿಣೆಯನ್ನು ಕೇಳಹೋಗಿಲ್ಲ. ಅಲ್ಲದೇ ಮನುಸ್ಮೃತಿ, ಮುಂತಾದವುಗಳ ಪ್ರಕಾರ ಬ್ರಾಹ್ಮಣ ಕೇಳಿದ ವೇತನವನ್ನು ತಿರಸ್ಕರಿಸಲಾರದ ಪರಿಸ್ಥಿತಿ ಇರುವ ಕಾರಣ ಶೂದ್ರ ಏಕಲವ್ಯನಿಂದ ಹೆಬ್ಬೆರಳನ್ನು ಬಲತ್ಕಾರವಾಗಿಯೇ ಕಿತ್ತುಕೊಳ್ಳಲಾಯಿತು ಎಂದೆನ್ನಬಹುದು.

-ರವಿ ಪುತ್ತೂರ್, ದಕ್ಷಿಣ ಕನ್ನಡ



ಸುಮಾರು ಎರಡು ವರ್ಷಗಳ ಹಿಂದೆ, ಇಂಥದ್ದೇ ಒಂದು ಪತ್ರ ಬರೆದಿದ್ದೆ. ದಿ. 15.11.06 ರ ತಮ್ಮ ಪತ್ರಿಕೆಯಲ್ಲಿ "ಬೇಹುಗಾರಿಕಾ ಸಂಸ್ಥೆಗಳಾದ RAW ಮತ್ತು IB ಗಳಲ್ಲಿ ಮುಸ್ಲಿಮರೇಕಿಲ್ಲ" ಎಂಬ ಲೇಖನವನ್ನೋದಿ, ಪುನಃ ಈ ಪತ್ರ ಬರೆಯುತ್ತಿದ್ದೇನೆ. ಮುಸ್ಲಿಮರನ್ನು ತಮ್ಮ ಶಕ್ತಿ ಮೀರಿ ತಾವು ನಂಬಿದ್ದೀರೆಂದು ಅದರಿಂದ ಕಂಡು ಬರುತ್ತದೆ.

ಮುಸ್ಲಿಮರು ನಂಬಿಗಸ್ಥರೇ? ಎಂಬುದಕ್ಕೆ ಜಾಗತಿಕ ಹಂತದಲ್ಲಿ ಅವರಿಂದ ಜಾರಿಯಲ್ಲಿರುವ ಅನಾಹುತಗಳ ಬಗ್ಗೆ ತಾವು ಗಮನಹರಿಸುತ್ತಿಲ್ಲ ಎಂಬುದಕ್ಕೆ ತಾವೇ ಸಾಕ್ಷಿ. ಜಾಗತಿಕ ಹಂತದಲ್ಲಿ ಮುಸ್ಲಿಮರು ಎಸಗುತ್ತಿರುವ ಎಂದರೆ ಮಾನವತೆಯ ವಿರುದ್ಧ ಅವರು ಮಾಡುತ್ತಿರುವ ಅಪರಾಧಗಳ ಬಗ್ಗೆ ನಿಮ್ಮನ್ನು ನೀವೇ ಪ್ರಶ್ನಿಸಿರಿ. ಪುನಃಪುನಃ ಯೋಚನೆ ಮಾಡಿರಿ. ಯೋಚನೆಯ ಸಾಧಕ-ಬಾಧಕಗಳ ಬಗ್ಗೆ ಮತ್ತೆ ಯೋಚನೆ ಮಾಡಿ. ಸೂಕ್ತ ಉತ್ತರ ದೊರೆಯುತ್ತದೆಯೇ ನೋಡಿ.

ಬೇಹುಗಾರಿಕೆ ಸಂಸ್ಥೆಯಲ್ಲಾಗಲಿ, ರಕ್ಷಣಾ ವ್ಯವಸ್ಥೆಯಲ್ಲಾಗಲಿ ಮತ್ತು ದೇಶದ ಹಿತರಕ್ಷಣಾ ವ್ಯವಸ್ಥೆಯ ಇತರೆ ಯಾವುದೇ ಅಂಗಗಳಲ್ಲಿ ಅವರನ್ನು ಸೇರಿಸಿದರೆ ಅನಂತರ ಏನು? ಎಂಬುದನ್ನು ಯೋಚಿಸಿ.

ಇವರ 1% ದೇಶವಿರೋಧಿ ಚಟುವಟಿಕೆ ಅವರ 99% ದೇಶ ವಿರೋಧಿ ಚಟುವಟಿಕೆ, ಎರಡೂ ಕೂಡಿದರೆ 100% ಆದಾಗ, ವೃತ್ತದ ಹೊರದಡಿಯಲ್ಲಿರುವ ಸಾಮಾನ್ಯ ನಾಗರಿಕರ ಸ್ಥಿತಿ-ಗತಿಗಳ ಬಗ್ಗೆ ನಿಮಗೆ ಯೋಚಿಸುವ ಸಮಯ ಸಿಕ್ಕಾಗಲೆಲ್ಲ ಮತ್ತೆ ಮತ್ತೆ ಯೋಚಿಸಿ.

ತಾತ್ಪರ್ಯ: "ಮುಸ್ಲಿಂ ಪ್ರಚೋದಕ ಲೇಖನಗಳು ಬೇಡ"

-ಲಕ್ಷ್ಮಣರಾವ್, ಬೆಂಗಳೂರು

ನವೆಂಬರ್ 29 ರ 'ಲಂಕೇಶ್' ಸಂಚಿಕೆ ಬಂದೊದ... ಪುಟತಿರುವು ಹಾಕಿದೆ. ರಾಜಕೀಯ ಲೇಖನಗಳ... ಕೊಲೆಗಾರರ ಬಗ್ಗೆ ವರದಿ ಓದಿ ಬೇಸರಗೊಂಡಿದ್ದ ಮನ... 'ತನನಂ ತನನಂ' ತೇಲಿ ಬಂದ ದಾರಿಯ 19 ನೆ ಕಂ... ಮನಸ್ಸಿಗೆ ತುಂಬಾ ಮುದನೀಡಿತು. 'ತನನಂ ತನನ... ಚಿತ್ರಕ್ಕೆ ಸಂಗೀತ ಸಾಹಿತ್ಯಗಳ ರಸದೌತಣ ನೀಡಿರು... ಯುವ ಪ್ರತಿಭೆ ಕೆ. ಕಲ್ಯಾಣ್‌ರವರ ಅನಿಸಿಕೆ, ಅಭಿಪ್ರಾ... ಗಳನ್ನು ಪಿ.ಕೆ. ಮಲ್ಲನಗೌಡರ್‌ರವರು ಯಥಾವತ್ತಾ... ನಿರೂಪಿಸಿದ್ದಾರೆ. ಕಲ್ಯಾಣ್‌ರವರ ಸಂಗೀತ, ಸಾಹಿ... ಯುವಜನರ ಮನಸ್ಸುಗಳಿಗೆ ಲಗ್ಗೆ ಇಟ್ಟಿದೆ. ಕಲ್ಯಾಣ್‌ರವ... ರಚಿಸುತ್ತಿರುವ ಪ್ರತಿಯೊಂದು ಹಾಡು... ಸಾಲುಗಳು ಅರ್ಥಗರ್ಭಿತ ಭಾವನೆ... ಹಂದರವನ್ನೇರ್ಪಡಿಸುತ್ತವೆ. ಇವ... 'ತನನಂ ತನನಂ' ಮೂಲಕ ಮತ್ತ... ಎತ್ತರಕ್ಕೇರುತ್ತಾರೆ ಎಂಬುದರಲ್ಲಿ ಸಂಶ... ವಿಲ್ಲ. ವಿಭಿನ್ನ ಅನುಭವ ನೀಡುವ ... ಕಂತು ನನಗೆ ತುಂಬಾ ಹಿಡಿಸಿತು. ಒಂದು ಚಿತ್ರದ ... ಅದರ ಒಳ-ಹೋಗುಗಳನ್ನು ತೆರೆದಿಡುತ್ತಾ ನಮ... ಗೊತ್ತಿಲ್ಲದ ಸಂಗತಿಗಳ ಬಗ್ಗೆ ಬೆಳಕು ಚೆಲ್ಲುತ್ತಿರುವ ಲೇಖ... ಅಭಿನಂದನೆಗಳು. 'ತನನಂ ತನನಂ' ಹಾಡುಗ... ಮೈಮನಸ್ಸುಗಳಿಗೆ ಇಂಪು ನೀಡುತ್ತಿವೆ. ಅದರ ನೆನ... ಸಾಗುತ್ತಿರುವೆ.

-ಕಾಳೀಹುಂಡಿ ಶಿವಕುಮಾ...
ಎಚ್.ಡಿ. ಕೋ...

ಯಶಸ್ವಿ ಆಗಲು ನೀವು ಸ್ವಾರ್ಥಿ ಆಗಬೇಕು. ಯಶಸ್ಸು ಸಾಧಿಸಿದ ಮೇಲೆ ನಿಸ್ವಾರ್ಥಿಯಾಗಬೇಕು-ಮೈಕೆಲ್ ಜೋರ್ಡಾನ್

ಮನಮೆಚ್ಚಿದ ಮನೆ ತುಂಬಿದ ಹುಡುಗಿ

'ಆನಂದ್' ಚಿತ್ರ ಬಿಡುಗಡೆಯಾದಾಗ ಜನರು ಕುತೂಹಲಕ್ಕಾಗಿ ಸಿನಿಮಾ ನೋಡಲು ಬಂದರು. ಆದರೆ 'ರಥಸಪ್ತಮಿ' ಬಿಡುಗಡೆಯಾದಾಗ ಸಂದರ್ಭ ಬದಲಾಗಿತ್ತು, ಸಾಧಾರಣವಾಗಿ ಯಾವುದೇ ನಾಯಕನಟನ ಎರಡನೇ ಚಿತ್ರ ಮೊದಲ ಚಿತ್ರದಂತೆ ಹಿಟ್ ಆಗುವುದಿಲ್ಲ ಎಂದು ಉದ್ಯಮದ ಕೆಲವರು ಎಚ್ಚರಿಸಿದ್ದರು. ಇದಕ್ಕೆ ಕಾರಣ: ಮೊದಲನೆ ಚಿತ್ರ ಸೂಪರ್ ಹಿಟ್ ಆಗಿದ್ದರಿಂದ ಜನರ **expectation** ಹೆಚ್ಚಾಗಿರುತ್ತದೆ. ಆಕಸ್ಮಾತ್ ಚಿತ್ರ ಅವರ **expectation** ಅನ್ನು ಮುಟ್ಟದಿದ್ದರೆ ಅವರು ಚಿತ್ರವನ್ನು ತಿರಸ್ಕರಿಸುತ್ತಾರೆ ಎಂಬುದು.

ಮೊದಲ ಚಿತ್ರ ಬಿಡುಗಡೆಯಾದಾಗ ಇದ್ದ ಭಯ ಮತ್ತು ಕುತೂಹಲ ಈ ಬಾರಿ ಇಲ್ಲದಿದ್ದರೂ ಭಾರೀ ನಿರೀಕ್ಷೆ ಇಟ್ಟುಕೊಂಡು ಜನ ಥಿಯೇಟರಿಗೆ ಬಂದು ಎಲ್ಲವೂ ತಿರುವು ಮುರುವು ಆದರೆ ಎಂಬ ಆತಂಕ ಇತ್ತು. ಆದರೆ ಈ ಬಾರಿಯೂ ನನ್ನ ಕೈಹಿಡಿದದ್ದು ಅಭಿಮಾನಿಗಳೇ.

'ಆನಂದ್' ಬಿಡುಗಡೆಯಾದಾಗ ನನಗೆ ಅಭಿಮಾನಿಗಳೇ ಇರಲಿಲ್ಲ. ಬದಲಾಗಿ ಶಿವಣ್ಣನ ಚಿತ್ರಕ್ಕೆ ಒಳ್ಳೆಯದಾಗಲಿ ಎಂದು ಹಾರೈಸಿದ ಹಿತೈಷಿಗಳಿದ್ದರು. ಆದರೆ ಮೊದಲನೆ ಚಿತ್ರಕ್ಕೇ ನಾನು ಅಭಿಮಾನಿಗಳನ್ನು ಪಡೆದಿದ್ದು ನನ್ನ ಪೂರ್ವಜನ್ಮದ ಪುಣ್ಯ. ಹೀಗಾಗಿ 'ರಥಸಪ್ತಮಿ' ಬಿಡುಗಡೆಯಾದಾದ ಆ ಅಭಿಮಾನಿಗಳೇ ಥಿಯೇಟರ್ ಮುಂದೆ ದೊಡ್ಡ ದೊಡ್ಡ ಸ್ಟಾರ್‌ಗಳನ್ನು ಕಟ್ಟಿದ್ದರು, ಚಿತ್ರಮಂದಿರವನ್ನು ಸಿಂಗರಿಸಿದ್ದರು. ಇದಕ್ಕೆಲ್ಲ ಅವರು ತಮ್ಮ ಸ್ವಂತ ಹಣವನ್ನು ಖರ್ಚು ಮಾಡಿದ್ದನ್ನು ನೋಡಿ ನನ್ನ ಮನಸ್ಸು ಚುರ್ ಎಂದಿತು.

'ರಥಸಪ್ತಮಿ' ಬಿಡುಗಡೆಯಾದ ದಿನ ಥಿಯೇಟರಿನ ಎದುರು ಟಿಕೆಟ್‌ಗಾಗಿ ದೊಡ್ಡ ಕ್ಯೂ ಇದ್ದುದರಿಂದ ಜನರನ್ನು ಕಂಟ್ರೋಲ್ ಮಾಡಲು ಪೊಲೀಸರನ್ನು ಕರೆಸಿದ ಸುದ್ದಿ ಬಂತು. ಮೊದಲ ದಿನ ಇದೆಲ್ಲ ಮಾಮೂಲಲ್ಲವೇ ಎಂದು ಸುಮ್ಮನಾದೆ. ಆದರೆ ಮೈಸೂರು, ಮಂಡ್ಯ, ಬಳ್ಳಾರಿ, ಹೈದ್ರಾಬಾದ್ ಕರ್ನಾಟಕ ಪ್ರದೇಶಗಳಲ್ಲೂ ಇದೇ ಪರಿಸ್ಥಿತಿ ಇದ್ದುದರಿಂದ ಚಿತ್ರ ಹಿಟ್ ಆಯಿತು ಅಂದುಕೊಂಡೆ.

ವಾಸ್ತವವಾಗಿ 'ಆನಂದ್' ಚಿತ್ರಕ್ಕಿಂತಲೂ ಎರಡನೆಯ ಸಿನಿಮಾ ಒಳ್ಳೆಯ ಓಪನಿಂಗ್ ಪಡೆಯಿತು. ಈ ಬಾರಿಯೂ ಚಿತ್ರ ಪ್ರೇಕ್ಷಕರಿಗೆ ಇಷ್ಟವಾಗುತ್ತದೆ; ಅವರು ಅಷ್ಟು ಸುಲಭವಾಗಿ ಇದನ್ನು ತಿರಸ್ಕರಿಸುವುದಿಲ್ಲ ಎಂಬ ನಂಬಿಕೆ ನನಗಿತ್ತು. ಆದರೆ ಈ ಚಿತ್ರ 'ಆನಂದ್' ಚಿತ್ರದ ದುಪ್ಪಟ್ಟಿನಷ್ಟು ಯಶಸ್ಸು ಗಳಿಸುತ್ತದೆ ಎಂದು ನಾನು ಕನಸು ಮನಸಲ್ಲೂ ಅಂದುಕೊಂಡಿರಲಿಲ್ಲ.

ಈ ಬಾರಿಯೂ ಒಮ್ಮೆ ಥಿಯೇಟರಿಗೆ ಯಾಕೆ ಭೇಟಿ ನೀಡಬಾರದು? ಎಂದು ಮ್ಯಾನೇಜರ್ ನನಗೆ ಫೋನು ಮಾಡಿದರು. ಆದರೆ ಮೊದಲ ಚಿತ್ರ ರಿಲೀಸ್ ಆದಾಗ ಅಭಿಮಾನಿಗಳು ಪ್ರೀತಿಯಿಂದ ನನ್ನ ಶರ್ಟು ಹರಿದುಹಾಕಿದ ಘಟನೆ ನೆನಪಾಗಿ ಮತ್ತೊಮ್ಮೆ ಅಂತಹ ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಳ್ಳುವುದು ಬೇಡ ಅನ್ನಿಸಿತು. ಪ್ರೀತಿಯನ್ನು ನಿರಾಕರಿಸುವಷ್ಟು ಅಹಂಕಾರ ನನಗಿಲ್ಲದಿದ್ದರೂ ಮುಜುಗರದ ವಾತಾವರಣವನ್ನು ಸೃಷ್ಟಿಸುವುದು ಬೇಡ ಎಂಬುದು ನನ್ನ ಅಭಿಪ್ರಾಯವಾಗಿತ್ತು. ಆದರೂ ನನ್ನ ಮನಸ್ಸಿನಲ್ಲಿ ಒಂದು ತಳಮಳವಿತ್ತು. ನಾವಿರುವುದೇ ಜನರಿಂದ; ನಮಗೆ ತಾರಾ ಪಟ್ಟ ದೊರಕಿರುವುದೇ ಅವರಿಂದ. ಹೀಗಾಗಿ ಜನರ ಮಧ್ಯೆ ಹೋಗಿ ಬಂದರೆ ತಪ್ಪೇನು? ಎಂದು ಯೋಚಿಸಿ, ಮರುದಿನ ಥಿಯೇಟರಿಗೆ ಭೇಟಿ ಕೊಟ್ಟು ನನ್ನ ಅಭಿಮಾನಿಗಳ ಪ್ರೀತಿಯ ಸವಿರುಚಿಯನ್ನು ಅನುಭವಿಸಿದೆ.

ಈ ಚಿತ್ರಕ್ಕೂ ಅಭಿಮಾನಿಗಳಿಂದ ಮಾತ್ರವಲ್ಲ, ವಿಮರ್ಶಕರ ಶಹಬ್ಬಾಸ್‌ಗಿರಿ ಸಿಕ್ಕಿತು. **"Shivrajkumar came here not to just dance, he is going to stay here permanently``** ಎಂದು ಬಹುತೇಕ ಪತ್ರಿಕೆಯವರು ಬರೆದರು. ಇದೆಲ್ಲದರಿಂದ ನನ್ನ ಮನಸ್ಸು ಇನ್ನಷ್ಟೂ ಆನಂದದಿಂದ ಹಿಗ್ಗಿತು.

"ಪತ್ರಿಕಾ ವಿಮರ್ಶೆಗಳು ಅಷ್ಟು ಮುಖ್ಯನಾ" ಎಂದು ನನ್ನನ್ನು ಕೆಲವರು ಕೇಳುತ್ತಾರೆ. ಆಗ ನಾನು ಹೇಳುವುದು ಒಂದೇ: ನನ್ನ ಪ್ರಕಾರ ಜನರು ಸಿನಿಮಾ ನೋಡಲು ಬರುವಂತೆ ಮಾಡುವುದೇ ಪತ್ರಿಕೆಗಳ ವಿಮರ್ಶೆಗಳು. ಕನಿಷ್ಠವೆಂದರೂ ಶೇ. 60ರಷ್ಟು ಪ್ರೇಕ್ಷಕರು ವಿಮರ್ಶೆಗಳನ್ನು ಓದಿಯೇ ಥಿಯೇಟರಿಗೆ ಬರುತ್ತಾರೆ. ಆದ್ದರಿಂದ ಪತ್ರಿಕಾ ವಿಮರ್ಶೆ ಮುಖ್ಯ. ನನ್ನ ಈ ನಂಬಿಕೆಯಿಂದಲೇ ಪತ್ರಿಕೆಗಳೂ "ಶಿವರಾಜ್ ಕುಮಾರ್ ಚಿತ್ರರಂಗದಲ್ಲಿ ಬಲವಾಗಿ ತಳವೂರುತ್ತಾನೆ" ಎಂದು ಬರೆದದ್ದು ನನ್ನ ಆತ್ಮವಿಶ್ವಾಸವನ್ನು ಇನ್ನಷ್ಟು ಹೆಚ್ಚಿಸಿತು.


'ರಥಸಪ್ತಮಿ' ನೂರು ದಿನಗಳ ಪ್ರದರ್ಶನವನ್ನು ಪೂರೈಸುವ ಮುನ್ನವೇ ನನ್ನ ಮೂರನೇ ಚಿತ್ರದ ತಯಾರಿ ನಡೆಯುತ್ತಿತ್ತು. ಈ ಬಾರಿಯೂ ಕಾದಂಬರಿಯನ್ನೇ ಆಧರಿಸಿ ಚಿತ್ರ ಮಾಡಬೇಕು ಎಂದು ನನ್ನ ಅಮ್ಮ ಒತ್ತಾಯ ಮಾಡಿದರು.



'ಮನಮೆಚ್ಚಿದ ಹುಡುಗಿ' ಬಿಡುಗಡೆಗೆ ಸಿದ್ಧವಾಗಿತ್ತು. ಆಗ ನನ್ನ ಪತ್ನಿ ಗೀತಾ ನಮ್ಮ ಚೊಚ್ಚಲ ಮಗುವಿಗೆ ಜನ್ಮ ನೀಡಿದಳು. ಹೆಣ್ಣುಮಗು. ಎಲ್ಲರಿಗೂ ಖುಷಿಯೋ ಖುಷಿ. 'ಮನಮೆಚ್ಚಿದ ಹುಡುಗಿ' ಬಿಡುಗಡೆಯಾಗುವ ಮೊದಲೇ ಮನಮೆಚ್ಚಿದ ಹುಡುಗಿ ಮನೆಯನ್ನು ತುಂಬಿದಳು

ನಿರೂಪಣೆ: ಸದಾಶಿವ ಶೆಣೈ

30



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ಅಮ್ಮನ ಒತ್ತಾಯದ ಮುಂದೆ ನಾವು ಯಾರೂ ಏನೂ ಹೇಳುವಂತೆಯೇ ಇಲ್ಲ. "ಕುಂ. ವೀರಭದ್ರಪ್ಪನವರ 'ಭೇಟಿ' ಕಾದಂಬರಿಯನ್ನು ಸಿನಿಮಾ ಮಾಡಬಹುದು" ಎಂಬ ಸಲಹೆ ನೀಡಿದ್ದೇ ಅಮ್ಮ. ಅಪ್ಪಾಜಿ ಮತ್ತು ವರದಪ್ಪನವರು ಕಾದಂಬರಿಯನ್ನು ಓದಿ "ಕತೆ ಚೆನ್ನಾಗಿದೆ, ಇದರಲ್ಲಿ ಗ್ರಾಮೀಣ ಸೊಗಡು ಮತ್ತು ಒಳ್ಳೆಯ ಸಂದೇಶವಿದೆ" ಎಂದು ಹೇಳಿದರಲ್ಲದೆ, ಮನೆಯ ಎಲ್ಲರೂ ಕತೆಯನ್ನು ಒಪ್ಪಿಕೊಂಡರು.

ನನ್ನ ಫೇವರೆಟ್ ಕ್ಯಾಮೆರಾಮನ್ ಗೌರಿಶಂಕರ್ ಈ ಚಿತ್ರಕ್ಕೆ ಆಯ್ಕೆಯಾದರು. ಮೊದಲ ಚಿತ್ರದ ನಾಯಕಿ ಸುಧಾರಾಣಿಯನ್ನೇ ಮತ್ತೆ ಆಯ್ಕೆ ಮಾಡಲಾಯಿತು. ಅಫ್‌ಕೋರ್ಸ್, ಎಂ.ಎಸ್. ರಾಜಶೇಖರ್‌ರನ್ನು ಈ ಚಿತ್ರಕ್ಕೂ ನಿರ್ದೇಶಕರನ್ನಾಗಿ ಮುಂದುವರೆಸುವುದೆಂದು ತೀರ್ಮಾನಿಸಲಾಯಿತು. ಅಷ್ಟುಹೊತ್ತಿಗೆ ಶಿವರಾಜ್ ಕುಮಾರ್-ಗೌರಿಶಂಕರ್-ರಾಜಶೇಖರ್-ಸುಧಾರಾಣಿ ಕಾಂಬಿನೇಷನ್ ಬಗ್ಗೆ ಉದ್ಯಮದಲ್ಲಿ ಮೆಚ್ಚುಗೆಯ ಮಾತು ಬರಲಾರಂಭಿಸಿತ್ತು.

ಇಲ್ಲಿ ನಾನೊಂದು ಮಾತನ್ನು ಹೇಳಲೇಬೇಕು. ಎರಡು ಚಿತ್ರಗಳು ಸೂಪರ್ ಹಿಟ್ ಆದ ಮೇಲೆ ಒಂದು ಪಕ್ಕಾ ಕಮರ್ಶಿಯಲ್ ಚಿತ್ರ- ಅಂದರೆ ಎರಡು ಫೈಟು, ನಾಲ್ಕು ಹಾಡು ಇರುವ ಚಿತ್ರ- ಮಾಡಿದರೆ ಸಾಕು. ಮೊದಲೆರಡು ಚಿತ್ರದ ಯಶಸ್ಸಿನ ಆಧಾರದ ಮೇಲೆ ವ್ಯಾಪಾರ ಮಾಡಬಹುದು ಎಂದು ಅನೇಕರು ಅಮ್ಮನಿಗೆ ಸಲಹೆ ನೀಡಿದ್ದರು. ಆದರೆ ಅಮ್ಮ ಮತ್ತು ಅಪ್ಪಾಜಿ ಎಂದೂ ಇಂತಹ ಸೂತ್ರಗಳನ್ನು ನಂಬಿದವರಲ್ಲ. "ಅಂತಹ ಚಿತ್ರ ಮಾಡುವುದರಿಂದ ಅದು ಬಾಕ್ಸಾಫೀಸಿನಲ್ಲಿ ಗೆದ್ದೇ ಗೆಲ್ಲುತ್ತದೆ ಎಂಬ ಗ್ಯಾರೆಂಟಿ ಎಲ್ಲಿದೆ? ಅದರ ಬದಲಿಗೆ ನಾವೊಂದು ಉತ್ತಮ ಚಿತ್ರ ನೀಡೋಣ. ಅದನ್ನು ಜನ ಮೆಚ್ಚಿದರೆ ಅದೇ ನಮಗೆ ದೊಡ್ಡ ಬಹುಮಾನ" ಎಂಬ ನಿಲುವು ಅಮ್ಮನದ್ದು. ಹೀಗಾಗಿ ಎಲ್ಲರ ನಿರೀಕ್ಷೆಯನ್ನು ಹುಸಿಗೊಳಿಸಿ ಒಂದು ಅಪ್ಪಟ ಗ್ರಾಮೀಣ ಚಿತ್ರವನ್ನು ನಾವು ಕೈಗೆತ್ತಿಕೊಂಡೆವು. ಆ ಚಿತ್ರಕ್ಕೆ 'ಮನ ಮೆಚ್ಚಿದ ಹುಡುಗಿ' ಎಂಬ ಹೆಸರಿಟ್ಟೆವು. ಈ ಚಿತ್ರದಲ್ಲಿ ನಾನು ಪ್ಯಾಂಟಿಗಿಂತ ಹೆಚ್ಚಾಗಿ ಪಂಚೆಯಲ್ಲೇ ಕಾಣಿಸಿಕೊಂಡಿದ್ದೆ. ಈ ಚಿತ್ರದ ಶೂಟಿಂಗ್ ಮೈಸೂರು ಪಕ್ಕದಲ್ಲಿರುವ ಹಳ್ಳಿಯೊಂದರಲ್ಲಿ ನಡೆಯಿತು.

ಈ ಚಿತ್ರದ ಚಿತ್ರೀಕರಣ ನಡೆಯುತ್ತಿದ್ದಾಗ ಹಳ್ಳಿಯ ಜನರೆಲ್ಲಾ ಟ್ರಾಕ್ಟರ್ ಮತ್ತು ಎತ್ತಿನ ಗಾಡಿಗಳನ್ನು ಕಟ್ಟಿಕೊಂಡು ಚಿತ್ರೀಕರಣ ನೋಡಲು ಬರುತ್ತಲೇ ಇದ್ದರು. ಹಾಗೆ ಬಂದವರು ಸುಮ್ಮನೆ ಇರುತ್ತಿರಲಿಲ್ಲ, ನನಗೆ ತಿನ್ನಲು ಸೇಬು, ಬಾಳೆಹಣ್ಣು ತರಹೇವಾರಿ ತಿನಿಸುಗಳನ್ನು ತರುತ್ತಿದ್ದರು. ಅದನ್ನು ಪ್ರೀತಿಯಿಂದ ನನಗೆ ನೀಡಿದಾಗ ನಾನು ಅಷ್ಟೇ ಸಂತೋಷದಿಂದ ಸ್ವೀಕರಿಸುತ್ತಿದ್ದೆ. ಎಷ್ಟೋ ಜನ ರೈತರು "ನಮ್ಮ ಮನೆಗೆ ಕಾಫಿಗೆ ಬರುತ್ತೀರಾ" ಎಂದು ಕೇಳಿದಾಕ್ಷಣ ಅವರ ಮನೆಗೆ ಹೋಗಿ ಕುಳಿತುಬಿಡುತ್ತಿದ್ದೆ. ಇದೆಲ್ಲ ಅವರಿಗೂ, ನನಗೂ ಹೊಸ ಅನುಭವ. ನಾನು ಬೆಂಗಳೂರಿನಿಂದ ಆ ಗ್ರಾಮಕ್ಕೆ ಹೋಗುತ್ತಿದ್ದಾಗ, ದಾರಿಯುದ್ದಕ್ಕೂ ಜನ ನನ್ನನ್ನು ನೋಡಲು ನಿಲ್ಲುತ್ತಿದ್ದರು. ಕೆಲವೆಡೆ ನಾನು ನನ್ನ ಕಾರನ್ನು ನಿಲ್ಲಿಸಿ ಅವರನ್ನು ಮಾತಾಡಿಸಿದ ನಂತರವೇ ಮುಂದೆ ಹೋಗಲು ಸಾಧ್ಯವಾಗುತ್ತಿತ್ತು. ಕೇವಲ ಎರಡೇ ಚಿತ್ರದಿಂದ ನಾನು ಇಷ್ಟೊಂದು ಜನರ ಅಭಿಮಾನವನ್ನು ಪಡೆಯಲು ಹೇಗೆ ಸಾಧ್ಯವಾಯಿತು? ಎಂಬ ಪ್ರಶ್ನೆ ನನ್ನನ್ನು ಕಾಡದೇ ಇರುತ್ತಿರಲಿಲ್ಲ. ನಿಜ ಹೇಳುತ್ತೇನೆ: ಆ ಪ್ರಶ್ನೆಗೆ ನನಗೆ ಅಂದು ಉತ್ತರ ಸಿಗಲಿಲ್ಲ, ಇಂದಿಗೂ ಸಿಕ್ಕಿಲ್ಲ. ಜನರ ಪ್ರೀತಿ ಮತ್ತು ಅಭಿಮಾನವನ್ನು ನಾವು ಪ್ರಶ್ನಿಸಬಾರದು. ಅದನ್ನು ಅವರು ನೀಡಿದಂತೆ ಅನುಭವಿಸುತ್ತಾ ಹೋಗಬೇಕೆಂಬುದು ಅಪ್ಪಾಜಿ ನನಗೆ ಹೇಳಿಕೊಟ್ಟಿರುವ ಸೂತ್ರ.

'ಮನಮೆಚ್ಚಿದ ಹುಡುಗಿ' ಚಿತ್ರೀಕರಣ ಮುಗಿದು ಬಿಡುಗಡೆಗೆ ಸಿದ್ಧವಾಗಿತ್ತು, ಆಗ ನನ್ನ ಪತ್ನಿ ಗೀತಾ ನಮ್ಮ ಚೊಚ್ಚಲ ಮಗುವಿಗೆ ಜನ್ಮ ನೀಡಿದಳು. ಹೆಣ್ಣುಮಗು. ಎಲ್ಲರಿಗೂ ಖುಷಿಯೋ ಖುಷಿ. 'ಮನಮೆಚ್ಚಿದ ಹುಡುಗಿ' ಬಿಡುಗಡೆಯಾಗುವ ಮೊದಲೇ ಮನಮೆಚ್ಚಿದ ಹುಡುಗಿ ಮನೆಯನ್ನು ತುಂಬಿದಳು ಎಂದು ಎಲ್ಲರೂ ಆ ಮಗುವನ್ನು ಕೊಂಡಾಡಿದರು.

ನಾನಂತೂ ಹೆಮ್ಮೆಯಿಂದ ಓಡಾಡಲು ಶುರು ಮಾಡಿದೆ. ನನ್ನ ಪುಟ್ಟ ಮಗುವನ್ನು ಎರಡೂ ಕೈಗಳಿಂದ ಮೃದುವಾಗಿ ಎತ್ತಿಕೊಂಡು ಮುದ್ದಾಡಿದೆ. ಆಕೆಯ ಸ್ಪರ್ಶದಿಂದ ನನಗೆ ರೋಮಾಂಚನವಾಯಿತು. ಇದು ಎಲ್ಲ ಅಪ್ಪಂದಿರೂ ಅನುಭವಿಸುವ ರೋಮಾಂಚನ ಎಂಬುದು ನನಗೆ ಗೊತ್ತು. ಆದರೆ ನಾನು ಅನುಭವಿಸಿದ್ದ ಆನಂದವನ್ನು ಬಣ್ಣಿಸಲು ನನಗೆ ಶಬ್ದಗಳೇ ಸಿಗುತ್ತಿಲ್ಲ. **"I am a proud young father``** ಎಂದು ಗೆಳೆಯರಿಗೆ ಹೇಳಿದೆ. ಮನಮೆಚ್ಚಿದ ಹುಡುಗಿ ಮನೆಗೆ ಬಂದ ನಂತರ ನನ್ನ ಮನಸ್ಸಿನಲ್ಲಿ ಕೆಲವು ಚಿಂತನೆಗಳು ಶುರುವಾದವು........

(ಮುಂದುವರೆಯುತ್ತದೆ....)

ಅನಾಥ ಕನ್ನಡ!

IFFI 2006

ರಾ. ಸೋಮನಾಥ್

ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಒದಗಿಸುವ ಎಲ್ಲ ಸೌಕರ್ಯಗಳನ್ನು, ಅವಕಾಶಗಳನ್ನು ಕಳೆದುಕೊಂಡ ಏಕೈಕ ಇಂಡಸ್ಟ್ರಿ ಎಂದರೆ ಅದು ನಮ್ಮದು.

ದಕ್ಷಿಣ ಭಾರತದ ಇತರೆಲ್ಲ ಇಂಡಸ್ಟ್ರಿಯವರು ಈ ಚಿತ್ರೋತ್ಸವದಿಂದ ಗರಿಷ್ಠ ಲಾಭ ಪಡೆದುಕೊಳ್ಳುತ್ತಿರುವಾಗ, ನಮ್ಮ ಫಿಲ್ಮ್ ಚೇಂಬರ್‌ಗೇನು ದಾಡಿ ಆಗಿದೆ? ಆಂಧ್ರದವರು ಸ್ಟಾಲ್‌ಗಳನ್ನು ಹಾಕಿ, ಅಲ್ಲಿಗೆ ಪಾಸ್ ಕೊಡಿಸುವ ವ್ಯವಸ್ಥೆ ಮಾಡಿದ್ದಾರೆ. ಚೆನ್ನೈನ ಫಿಲ್ಮ್ ತರಬೇತಿ ಸಂಸ್ಥೆಯ 50 ವಿದ್ಯಾರ್ಥಿಗಳು ವಾಲಂಟಿಯರ್‌ಗಳಾಗಿ, ತಮಿಳು ಚಿತ್ರಗಳನ್ನು ಹೊರದೇಶದವರ ಮುಂದೆ ಪ್ರೆಸೆಂಟ್ ಮಾಡುವ ಸಡಗರದಲ್ಲಿದ್ದಾರೆ.

ಮಲಯಾಳಿಗಳು ತಮ್ಮ ಸಿನಿಮಾಗಳ ಪೋಸ್ಟರುಗಳನ್ನು ... ಕಟೆ ಪ್ರದರ್ಶಿಸಿ, ವಿದೇಶಿ ಚಿತ್ರೋದ್ಯಮಿಗಳಿಗೆ ತಮ್ಮ ಚಿತ್ರಗಳನ್ನು ಮಾರ್ಕೆಟಿಂಗ್ ಮಾಡಲೆಂದೇ ಸ್ಟಾಲ್‌ಗಳನ್ನು ಹಾಕಿದ್ದಾರೆ.

ಆದರೆ ಕನ್ನಡದವರಿಗೆ ಪಾಸ್ ಕೊಡಿಸೋಕೆ ಒಬ್ಬನೂ ಇಲ್ಲ. ಪಾಸ್ ಪಡೆಯಲು ಶೃತಿ ಅರ್ಧ ದಿನ, ಮಹೇಂದರ್ ಒಂದೂವರೆ ದಿನ ಬಾಗಿಲ ಬಳಿ ಕಾಯಬೇಕಾಯ್ತು. ಕನ್ನಡ ಇಂಡಸ್ಟ್ರಿ ಪರವಾಗಿ ಥಾಮಸ್ ಡಿಸೋಜಾ ಎನ್ನುವಾತ ಬಂದಿದ್ದಾನೆ. ಈ ಪುಣ್ಯಾತ್ಮ ಅದೆಲ್ಲಿರುತ್ತಾನೊ ಏನೋ? ಕೆ.ಸಿ.ಎನ್. ಚಂದ್ರಶೇಖರ್ ಬೀದಿಯಲ್ಲಿ ತಿರುಗಾಡುತ್ತಾ ಪಾಸ್‌ಗಾಗಿ ಚಡಪಡಿಸುತ್ತಿದ್ದರು. ಕನ್ನಡ ಸಿನಿಮಾ ಮಾರುವ ಎಲ್ಲ ಅವಕಾಶಗಳನ್ನು ಚೇಂಬರ್‌ನವರು ಮಿಸ್ ಮಾಡಿಕೊಂಡಿದ್ದಾರೆ.

ಡಾ. ರಾಜ್‌ರ 'ಬಂಗಾರದ ಮನುಷ್ಯ' ಪ್ರದರ್ಶನವಿದ್ದರೂ, ಆರ್. ಲಕ್ಷ್ಮಣ ಅದಕ್ಕಾಗಿ ಆಮಂತ್ರಿತರಾಗಿದ್ದರೂ, ಅವರಿಗೇ ಪಾಸ್ ಇಲ್ಲ! ಆರಂಭದ ದಿನ ರಾಜ್ ಹೆಸರನ್ನು ಹತ್ತರಲ್ಲಿ ಹನ್ನೊಂದು ಎಂಬಂತೆ ಹೇಳಿದರಷ್ಟೇ.

'ತನನಂ ತನನಂ'ನ ಬ್ರೋಚರುಗಳು ಲಭ್ಯವಿದ್ದವು. ಮತ್ತು ಫ್ಯಾಮಿಲಿ ಮೆಂಬರ್ಸ್‌ಗೆ 'ತನನಂ' ಮುದ ನೀಡಿತು.



ದಿ ಓಲ್ಡ್ ಬಾರ್ಬರ್, ಎ ಥೌಸಂಡ್ ಕಿಸ್ಸಸ್....

ಇಲ್ಲಿ ದೇಶ, ವಿದೇಶಗಳ ಅದ್ಭುತ ಚಿತ್ರಗಳ ಸ್ಕ್ರೀನಿಂಗ್ ಆಗುತ್ತಿದೆ. ಪ್ರೇಕ್ಷಕರ, ಪತ್ರಕರ್ತರ ಮೆಚ್ಚುಗೆಗೆ ಹಲವಾರು ಚಿತ್ರಗಳು ಅರ್ಹವಾದವು. ಕೊಲಂಬಿಯಾ ದೇಶದ ಅಸಂಗತ, ಕಪ್ಪುಬಿಳುಪು ಚಿತ್ರ 'ಮಾಂಡರಿಂಗ್ ಸೀಡ್ಸ್'. ಬೀಜಿಂಗ್‌ನಲ್ಲಿ ಹಳೆ ಕಾಲದ ಕ್ಷೌರದ ಅಂಗಡಿಯನ್ನು ಇನ್ನೂ ನಡೆಸುತ್ತಿರುವ 93ರ ವೃದ್ಧನ ಸುತ್ತ ನಡೆಯುವ ಚೀನಿ ಚಿತ್ರ 'ದಿ ಓಲ್ಡ್ ಬಾರ್ಬರ್', ಗಂಡ-ಹೆಂಡತಿಯ ಸಂಬಂಧಗಳನ್ನು ಗಾಢವಾಗಿ ಬಿಂಬಿಸುವ, ಅಸ್ಗರ್ ಫರಾದಿ ನಿರ್ದೇಶನದ ಇರಾನಿ ಚಿತ್ರ 'ಫೈರ್ ವರ್ಕ್ಸ್ ವೆನ್ಸ್‌ಡೇ', ನೆದರ್‌ಲ್ಯಾಂಡ್‌ನ 'ಎ ಥೌಸಂಡ್ ಕಿಸ್ಸಸ್', ಸ್ವಿಸ್ ದೇಶದ 'ವೋಲ್ಬರ್' ಮುಂತಾದ ಚಿತ್ರಗಳು ನೋಡಲು ಸಿಕ್ಕಿದ್ದೇ ಸೌಭಾಗ್ಯ ಎಂದುಕೊಂಡೆವು ಕನ್ನಡ ಪತ್ರಕರ್ತರು.



'ತನನಂ ತನನಂ' ಹೇಗೆ ವಿಭಿನ್ನ....

ಕವಿತಾ ಲಂಕೇಶ್

ಹಲವಾರು ಬಾರಿ ನಾನು ವಿಮರ್ಶೆ ಮಾಡೋಕೆ ಅಂತಾ ಶುಕ್ರವಾರ ಸಿನಿಮಾಗಳಿಗೆ ಹೋದಾಗ, ಚಿತ್ರಮಂದಿರಗಳಲ್ಲಿ ಬೆರಳೆಣಿಕೆಯಷ್ಟು ಮಹಿಳೆಯರು ಇರುವುದನ್ನು ಗಮನಿಸಿದ್ದೇನೆ. ಆದರೆ 'ತನನಂ ತನನಂ' ಸ್ಪೆಷಾಲಿಟಿ ಏನೆಂದರೆ, ಅದು ಬಿಡುಗಡೆಯಾದ ಮೊದಲ ಮೂರೂ ದಿನ ಹುಡುಗಿಯರು, ಮಹಿಳೆಯರು ತಮ್ಮ ಫ್ಯಾಮಿಲಿಗಳ ಜೊತೆ ಸಿನಿಮ ನೋಡಲು ಬಂದದ್ದು!

ನನ್ನನ್ನು ಮಹಿಳಾ ನಿರ್ದೇಶಕಿ ಅಂತಾ ಗುರುತಿಸೋರು ಇದ್ದಾರೆ. ಅದಕ್ಕೂ ಹೆಚ್ಚಾಗಿ ರಮ್ಯಾ ಮತ್ತು ರಕ್ಷಿತಾ ಟಾಪ್ ಹೀರೋಯಿನ್‌ಗಳಾಗಿರುವುದರಿಂದ, ಹಾಗೂ ಪಬ್ಲಿಸಿಟಿಯಲ್ಲೂ ಅವರೇ ಹೆಚ್ಚಿರುವುದರಿಂದ ಮಹಿಳೆಯರು ಮತ್ತು ಇಡೀ ಸಂಸಾರಗಳು ಈ ಚಿತ್ರದತ್ತ ಆಕರ್ಷಣೆಗೊಂಡಿರಬಹುದಾ ಅನ್ನಿಸುತ್ತಿದೆ.

ಇತ್ತೀಚೆಗೆ ಎಲ್ಲಾ ಕಡೆ ಇಡೀ ಸಂಸಾರಗಳು ಸಿನಿಮಾಗೆ ಬರೋದು ಕಡಿಮೆ ಆಗಿದೆ. ಗೃಹಿಣಿಯರಂತೂ ಮನೆಯಲ್ಲೇ ಟಿವಿಯಲ್ಲಿ ಬರುವ ಧಾರಾವಾಹಿ, ಹಾಡು, ಸಿನಿಮಾ ನೋಡಿಕೊಂಡಿರುತ್ತಾರೆ. ಅದೇ ಅವರಿಗೆ ಮನರಂಜನೆ ಆಗುತ್ತಿದೆ. ಇಂತಹ ಹೊತ್ತಿನಲ್ಲಿ 'ತನನಂ' ಸಿನಿಮಾ ಗೃಹಿಣಿಯರನ್ನು ಮನೆಯಿಂದ ಥಿಯೇಟರಿಗೆ ಕರೆತಂದಿರುವುದನ್ನು ನೋಡಿ ಖುಷಿ ಆಗುತ್ತಿದೆ.

ನನಗೆ ಎಂದೂ 'ಆರ್ಟ್ ಫಿಲ್ಮ್ ಡೈರೆಕ್ಟರ್', 'ಕಮರ್ಷಿಯಲ್ ಫಿಲ್ಮ್ ಡೈರೆಕ್ಟರ್' ಎಂದು ಬ್ರಾಂಡ್ ಆಗಲು ಇಷ್ಟವಿಲ್ಲ. ಆದರೆ ಜನರು - ಅದರಲ್ಲೂ ವಿಶೇಷವಾಗಿ ವಿಮರ್ಶಕರು - ಈ ರೀತಿ ವರ್ಗೀಕರಣ ಮಾಡುವುದನ್ನು ಬಿಡುವುದಿಲ್ಲ. 'ಪ್ರೀತಿ ಪ್ರೇಮ ಪ್ರಣಯ' ಮಾಡಿದಾಗ 'ದೇವೀರಿ' ಹೊಗಳಿದವರು, ಈಗ 'ತನನಂ' ಬಂದ ಮೇಲೆ 'ಪ್ರೀತಿ ಪ್ರೇಮ ಪ್ರಣಯ'ದ ತರಹ ಇರುತ್ತೆ ಅನ್ಕೊಂಡಿದ್ವಿ ಎನ್ನುವವರೂ ಇದ್ದಾರೆ. ಅಲ್ಲಾ, 'ದೇವೀರಿ' ತರಹ 'ಪ್ರೀತಿ, ಪ್ರೇಮ, ಪ್ರಣಯ'ವನ್ನಾಗಲೀ, 'ಪ್ರೀತಿ, ಪ್ರೇಮ, ಪ್ರಣಯ' ತರಹ 'ತನನಂ' ಅನ್ನಾಗಲೀ ಏಕೆ ಮಾಡಬೇಕು? ಹಾಗೆ ಒಂದೇ ತರಹದ ಸಿನಿಮಾ ಮಾಡುವುದಾದರೆ ಹೊಸ ಸಿನಿಮಾಗಳನ್ನು ಏಕೆ ಮಾಡಬೇಕು?!

'ದೇವಿರಿ'ಯಿಂದ ಇಲ್ಲಿವರೆಗೂ ಎಂದೂ ನಾನು ಅವಾರ್ಡ್‌ಗಳಿಗಾಗಿ ಸಿನಿಮಾ ಮಾಡಿದವಳಲ್ಲ. ಚಿತ್ರ ಚೆನ್ನಾಗಿದ್ದರೆ ಪ್ರಶಸ್ತಿಗಳು ತಾವಾಗಿಯೇ ಬರುತ್ತವೆ. ಅದಕ್ಕಿಂತ ಮುಖ್ಯವಾಗಿ ನನಗೆ ಪ್ರೇಕ್ಷಕರ ಮೆಚ್ಚುಗೆಯೇ ಮುಖ್ಯ. 'ಪ್ರೀತಿ ಪ್ರೇಮ ಪ್ರಣಯ' ಜನರಿಗೆ ಎಷ್ಟೊಂದು ಆಪ್ತವಾಗಿತ್ತು. ಆ ಚಿತ್ರ ನೂರು ದಿನ ಓಡಿದ ನಂತರವೇ ಅದಕ್ಕೆ ಕೇಂದ್ರ ಮತ್ತು ರಾಜ್ಯ ಪ್ರಶಸ್ತಿಗಳು ಬಂದಿದ್ದು. ನನ್ನ ಪ್ರಕಾರ ನನಗೆ ಮೊದಲು ಅವಾರ್ಡು ಕೊಟ್ಟವರು ಪ್ರೇಕ್ಷಕರು.

ಇದರರ್ಥ 'ದೇವೀರಿ' ಮುಖ್ಯವಲ್ಲ ಅಂತಾ ಅಲ್ಲ ಅಥವಾ 'ಪ್ರೀತಿ ಪ್ರೇಮ ಪ್ರಣಯ' ಹೆಚ್ಚು ಮುಖ್ಯ ಅಂತಾನೂ ಅಲ್ಲ... ಇವತ್ತು ಎಲ್ಲಾ ಬಗೆಯ ಆಳವಾದ ಹಾಗೂ ಸರಳವಾದ ಸಿನಿಮಾಗಳ ಅಗತ್ಯವಿದೆ. 'ತನನಂ ತನನಂ' ತ್ರಿಕೋನ ಪ್ರೇಮಕತೆ. ಆದರೆ ಈ ತ್ರಿಕೋನ ಪ್ರೇಮ ಕತೆಯನ್ನು ಹೇಳುವಾಗಲೂ ಈಗಿನ ಜನರೇಷನ್ನಿಗೆ ರೀಚ್ ಆಗುವ ಹಾಗೆ ಅವರಿಗೆ ಅಷ್ಟು ಪರಿಚಿತವಲ್ಲದ ಶಾಸ್ತ್ರೀಯ ಸಂಗೀತವನ್ನು ಪರಿಚಯಿಸಿದ್ದೇನೆ. 'ತನನಂ'ನ ವಿಶಿಷ್ಟತೆ ಏನೆಂದರೆ, ಡಾ.ಎಲ್. ಸುಬ್ರಮಣ್ಯಂರವರ ವಯೊಲಿನ್ ಬಿಟ್ಸ್ ಮೂಲಕ ಶಾಸ್ತ್ರೀಯ ಸಂಗೀತ ಕೂಡ ಕತೆಯ ಜೊತೆ ಜೊತೆಯೇ ತೇಲಿ ಬಂದಿರುವುದು.

ಅದಕ್ಕಿಂತ ವಿಶೇಷವಾದದ್ದೇನೆಂದರೆ ಇವತ್ತು ಕಂಪನಿ ನಾಟಕಗಳೇ ಮುಚ್ಚಿಕೊಳ್ಳುತ್ತಿರುವಾಗ 'ತನನಂ'ನಲ್ಲಿ ಕಂಪನಿ ನಾಟಕದವರ ಜೀವನವನ್ನು ತೆರೆಯ ಮೇಲೆ ತಂದಿರುವುದು. ನಾನು ಹೊಗಳಿಕೆ, ತೆಗಳಿಕೆಯನ್ನು ಸಮನಾಗಿ ಸ್ವೀಕರಿಸುತ್ತೇನೆ. ಎಲ್ಲ ನಿರ್ದೇಶಕರು sportive ಆಗಿರಬೇಕು. ಹೊಗಳಿಕೇನೇ ಬೇಕಂದ್ರೆ ಸುತ್ತಮುತ್ತ ಹೊಗಳುಭಟ್ಟರಿಗೇನೂ ಕಡಿಮೆ ಇಲ್ಲ... ಆದರೆ ಭವಾನಿ (ರಕ್ಷಿತಾ)ಯಂತಹ ವೃತ್ತಿ ನಾಟಕದ ಮಹಿಳೆ ಹೇಗೆ ನಮ್ಮ ಸಮಾಜದಲ್ಲಿ ಶೋಷಣೆಗೊಳಗಾಗುತ್ತಾಳೆ ಎಂಬುದನ್ನು ಸೂಕ್ಷ್ಮವಾಗಿ ತೋರಿಸಲಾಗಿದೆ. ದೇವೀರಿಯಂತಹ ಒಂದು ವೇಶ್ಯೆಯ ಪಾತ್ರವನ್ನು ತೋರಿಸಿದಾಗಲೂ ಅಷ್ಟೇ ಸೂಕ್ಷ್ಮವಾಗಿ ತೋರಿಸಿದ್ದೆ. ಅದು 'ಸೀರಿಯಸ್' ಸಿನಿಮಾ ಆಗಿದ್ದರಿಂದ ಆ ಸೂಕ್ಷ್ಮತೆಯನ್ನು ನಮ್ಮ ಬುದ್ಧಿಜೀವಿಗಳು, ವಿಮರ್ಶಕರು ಗುರುತಿಸಿದ್ದರು. ಆದರೆ ರಂಗಭೂಮಿ ನಾಯಕಿಯೊಬ್ಬಳ ಶೋಷಣೆಯನ್ನು 'ತನನಂ'ನಲ್ಲಿ ಸೂಕ್ಷ್ಮವಾಗಿ ತೋರಿಸಿದ್ದನ್ನು ಇದೇ ಬುದ್ಧಿಜೀವಿ, ವಿಮರ್ಶಕರ್‍ಯಾರೂ ಗುರುತಿಸಲ್ಲ. ಪ್ರಕಾರ ಭವಾನಿಯ ಪಾತ್ರ ಊರಿನ ಗೌಡರ ಜೊತೆ ಎರಡು ದೃ ಮಲಗಿದ್ದನ್ನು ತೋರಿಸಿದ್ದರೆ ಆಗ ಅದು ಕಲಾತ್ಮಕವಾಗುತ್ತಿತ್ತಾ, ಕಮರ್ಷಿ ಆಗುತ್ತಿತ್ತಾ? ಅಂತಹ ದೃಶ್ಯಗಳನ್ನು ತೋರಿಸಿದ್ದರೆ, ಪಡ್ಡೆಗಳು ಸಿನಿಮಾ ಮು ಮುತ್ತಿಗೆ ಹಾಕುತ್ತಿದ್ದರೇನೋ? ಆದರೆ ನಾವು ನಮ್ಮ ಗೃಹಿಣಿಯರು, ಕುಟುಂಬಗಳನ್ನು ಕಳೆದುಕೊಳ್ಳುತ್ತಿದ್ದೆವಲ್ಲ?

ಈ ವಾರ ಬಿಡುಗಡೆ ಆಗಿರುವ ನಾಲ್ಕು ಚಿತ್ರಗಳ ಭರಾಟೆ 'ತನನಂ' steady ಆಗಿ ಗೆಲ್ಲುವ ಸೂಚನೆಗಳನ್ನು ತೋರಿಸುತ್ತಿದೆ. ನಂತಹ ಸ್ವಮೇಕ್ ಚಿತ್ರದ ಜೊತೆಗೆ ತೆಲುಗು 'ದಿಲ್'ನ ರಿಮೇಕೂ ಅದು ರಿಮೇಕು ಎಂದು ಜನರಿಗೆ ಹೇಳುವ ಅಗತ್ಯವೂ 'ಇವರಿಗೆ' ಇರಲಿ, ಈ ರಿಮೇಕ್‌ನಲ್ಲಿ ಫೈಟಿಂಗ್ ಇದೆಯಂತೆ, ಒಂದು ಹಾಡು ಇದೆಯಂತೆ... (ಮಕ್ಕಿಕಾಮಕ್ಕಿ ಕಾಪಿ ಮಾಡಿದ್ದಾರೆ).... 'ಇವರ' ಪ್ರಕಾರ ಕೆಟ್ಟದಾಗಿ ಕಾಪಿ ಹೊಡೆದೂ ಪಾಸ್ ಅಂತೆ! 'ತನನಂ'ನಲ್ಲಿ ಬರುವ 'ಚಪ್ಪರಿಸು' ಅನಗತ್ಯವಂತೆ! ಆದರೆ 'ಚಪ್ಪರಿಸು' ಪಾತ್ರದವಳು ಆಮೇಲೆ ಒಂದು ಮುಖ್ಯವಾದ ಸೀನ್‌ನಲ್ಲಿ ಬಂದು, ಹೀ ಕ್ಯಾರೆಕ್ಟರ್‌ನ್ನು ಬಹಿರಂಗಗೊಳಿಸಲು ನೆರವಾಗುತ್ತಾಳೆ. ಆದ್ದರಿಂದಲೇ ಹಾಡು ಮತ್ತು ಸೀನ್‌ಗಳು ಚಿತ್ರದ ಕತೆಗೆ ಮುಖ್ಯವಾಗಿವೆ.....

ನಾನು ಎಂದೂ ನನ್ನ ಸುತ್ತ 'ಆರ್ಟ್ ಡೈರೆಕ್ಟರ್' ಅಥವಾ 'ಕಮರ್ಷಿ ಡೈರೆಕ್ಟರ್' ಎಂಬ ಚೌಕಟ್ಟು ನಿರ್ಮಿಸಿಕೊಳ್ಳಲು ಇಷ್ಟಪಡುವುದಿಲ್ಲ. ಆದ ನಮ್ಮ ಪತ್ರಕರ್ತ ಮಿತ್ರರು, ಸ್ನೇಹಿತರಲ್ಲಿ ವಿನಂತಿ: ನೀವೂ ನನ್ನನ್ನು ಚೌಕಟ್ಟಿನಲ್ಲಿ ಬಂಧಿಸಲು ಪ್ರಯತ್ನಿಸಬೇಡಿ. ಪ್ರತಿ ಕಲಾತ್ಮಕ ಕೊಡುಗೆ ಪ್ಲಸ್ ಪಾಯಿಂಟ್ಸ್ ಮತ್ತು ಲಿಮಿಟೇಷನ್‌ಗಳನ್ನು ಮಾತ್ರ ಪರಿಗಣಿಸಿ ಫ ಹೇಳಿದರೆ, ನಿರ್ದೇಶಕಿಯಾಗಿ ಯಾವುದೇ ಒಂದು ಸಬ್ಜೆಕ್ಟ್ ತೊಗೊಂ ನಾನು ಬೆಳೆಯಲು ಅವಕಾಶವಾಗುತ್ತದೆ.

'ತನನಂ ತನನಂ' ಒಂದು ಕಾಮನ್ ಸಬ್ಜೆಕ್ಟ್, ಆದರೂ ಕಾ ಟ್ರೀಟ್‌ಮೆಂಟ್ ಇಲ್ಲ. ಏಕೆಂದರೆ ಅದು ಸಾಮಾನ್ಯ ಜನರನ್ನು ಮುಟ್ಟ ಮಾಡಿದ ಪ್ರಯತ್ನವಷ್ಟೇ.

'ದೇವೀರಿ'ಯಿಂದ 'ತನನಂ'ವರೆಗೂ ನಾನು ವಿಭಿನ್ನ ತರಹದ ಸಿನಿಮಾ ಮಾಡುತ್ತಾ ಬಂದಿದ್ದೇನೆ. ನನ್ನ ಪ್ರಕಾರ ಯಾವುದಾದರೊಂದು ಆಯ್ದುಕೊಂಡಾಗ, ಆ ಕತೆಯನ್ನು ಹೇಗೆ ಹೇಳಬೇಕು ಮತ್ತು ಯ ಹೇಳಬೇಕು ಎಂಬುದು ಮುಖ್ಯವಾಗಿ ಅದರಂತೆ ಅದರ ನಿರೂಪಣೆ ಇರಬೇಕು. 'ದೇವೀರಿ'ಯನ್ನು 'ತನನಂ' ಶೈಲಿಯಲ್ಲಿ, 'ಬಿಂಬ' ಚಿ 'ಪ್ರೀತಿ, ಪ್ರೇಮ, ಪ್ರಣಯ'ದ ರೀತಿಯಲ್ಲಿ ಹೇಳಿದ್ದರೆ ನಾಲ್ಕು ಚಿತ್ರ ವಿಫಲವಾಗುತ್ತಿದ್ದವು.

ಒಂದನ್ನು ಮಾತ್ರ ನಾನು ಖಚಿತವಾಗಿ ಹೇಳಬಲ್ಲೆ: ನನ್ನ ಸಿನಿಮಾ ಪ್ರತಿ ಬಾರಿ ವಿಭಿನ್ನ ಪ್ರಯತ್ನಗಳಾಗಿರುತ್ತವೆ. ಅವುಗಳನ್ನು ನೋಡಿ ಸ್ವೀಕರಿಸು ತಿರಸ್ಕರಿಸುವುದು, ಹೊಗಳುವುದು, ತೆಗಳುವುದು ಪ್ರೇಕ್ಷಕರ ಮತ್ತು ವಿಮ ಹಕ್ಕು. ಆದರೆ ನಿರಂತರವಾಗಿ ವಿಭಿನ್ನ ಪ್ರಯತ್ನಗಳನ್ನು ಮಾಡುತ್ತಾ ಇರು ನನ್ನ passion... ಅಂದಹಾಗೆ, 'ತನನಂ' ಇಷ್ಟವಾಯಿತು ಎಂದು ಹೇಳಿದ ಥ್ಯಾಂಕ್ಸ್.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 266764
Fax : 26604536, E-mail :lankesh70@rediffmail.com, Printed at Rajhans Enterprises